ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಕೋಟ ರಾಮಕೃಷ್ಣ ಕಾರಂತ

ಡಾ. ವಸಂತಕುಮಾರ ಪೆರ್ಲ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ಕೋಟ ರಾಮಕೃಷ್ಣ ಕಾರಂತ

ಡಾ. ವಸಂತಕುಮಾರ ಪೆರ್ಲ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**KOTA RAMAKRISHNA KARANTA** A Monograph on Kota Ramakrishna Karanta in Kannada Written by Dr. Vasantha Kumar perla Published By ***B.H Mallikarjun,*** Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2011
Pages : xiii +108
Copies : 1000
Price : ₹ 60

ಮೊದಲ ಮುದ್ರಣ : ೨೦೧೧
ಪುಟಗಳು : xiii + ೧೦೮
ಪ್ರತಿಗಳು : ೧೦೦೦
ಬೆಲೆ : ₹ ೬೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
**ಬಿ.ಎಚ್.ಮಲ್ಲಿಕಾರ್ಜುನ**
ಆಡಳಿತಾಧಿಕಾರಿಗಳು
**ಕನ್ನಡ ಪುಸಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
**ಮೆ॥ ಪ್ರಿಂಟ್ ಪಾರ್ಕ್**
೧೪೮೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**

ಸಂಪಾದಕ ಮಂಡಳಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಶ್ರೀ ಹೊರೆಯಾಲ ದೊರೆಸ್ವಾಮಿ**

**ಪ್ರೊ. ಸುಕನ್ಯಾ ಮಾರುತಿ**

**ಡಾ. ಎಚ್. ಟಿ. ಪೋತೆ**

**ಶ್ರೀ ಪ್ರಕಾಶ್ ಕಂಬತ್ತಳ್ಳಿ**

**ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ**

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ
ಸಂಪಾದಕ

# ಲೇಖಕರ ಮಾತು

ಕೆ. ಆರ್. ಕಾರಂತ ಎಂದೇ ಪ್ರಸಿದ್ಧರಾದ ಕೋಟ ರಾಮಕೃಷ್ಣ ಕಾರಂತರು ಗಾಂಧೀಯುಗದಲ್ಲಿ ಕನ್ನಡನಾಡು ಕಂಡ ಅಪೂರ್ವ ಮುತ್ಸದ್ಧಿಗಳಲ್ಲಿ ಒಬ್ಬರು. ರಾಜಕೀಯ, ಸಾಮಾಜಿಕ ಸೇವೆ. ಕರ್ನಾಟಕ ಏಕೀಕರಣ ಮುಂತಾದ ಕ್ಷೇತ್ರಗಳಲ್ಲಿ ದುಡಿದ ಅವರು ವಕೀಲಿ ವೃತ್ತಿಯಲ್ಲಂತೂ ಅತ್ಯುನ್ನತ ಸಾಧನೆ ಮಾಡಿದರು. 'ಕರ್ನಾಟಕ ಏಕೀಕರಣ ರೂವಾರಿ' ಎಂದೇ ಆಗಿನ ನಾಯಕರುಗಳಿಂದ ಕರೆಸಿಕೊಂಡ ಕಾರಂತರ ಪ್ರಯತ್ನವಿಲ್ಲದಿರುತ್ತಿದ್ದರೆ ಕರ್ನಾಟಕ ಏಕೀಕರಣಗೊಂಡು ವಿಶಾಲ ಕರ್ನಾಟಕ ರಚನೆ ಬಹುಶಃ ಆಗುತ್ತಿರಲ್ಲಿಲ್ಲವೇನೋ! ವಿಶಾಲ ಕರ್ನಾಟಕ ರಚನೆಗಾಗಿ ಕೇಂದ್ರ ನಾಯಕರಿಗೆ ಮತ್ತು ಪ್ರಧಾನಿಗಳಿಗೆ ಅವರು ತಂದ ಒತ್ತಡ ಅಭೂತಪೂರ್ವ ವಾದದ್ದು.

೧೯೨೦ ರಿಂದ ೧೯೭೦ರವರೆಗಿನ ಸುಮಾರು ಐವತ್ತು ವರ್ಷಗಳ ಕಾಲಾವಧಿ ಯನ್ನು ಕಾರಂತಯುಗ ಎಂದು ಕರೆಯಬಹುದು. ಅಧಿಕಾರದ ಬೆನ್ನು ಹತ್ತದೆ, ಒದಗಿಬಂದ ಅವಕಾಶಗಳಿಂದಲೇ ನಾಡಿನ ಸೇವೆಯನ್ನು ಪ್ರಾಂಜಲವಾಗಿ ಮಾಡಿದ ಇವರು ನಿಜವಾದ ಅರ್ಥದಲ್ಲಿ ಕನ್ನಡವನ್ನು ಕಟ್ಟಿದವರು. ಇಂಥವರನ್ನು ನಾಡು ಸ್ಮರಿಸಬೇಕು.

ಇಂತಹ ಸಾಧಕನೊಬ್ಬನ ಬಗ್ಗೆ 'ಕನ್ನಡ ಕಟ್ಟಿದವರು' ಮಾಲಿಕೆಯಲ್ಲಿ ಕೃತಿ ರಚಿಸಿಕೊಡುವ ಅಪೂರ್ವ ಅವಕಾಶವೊಂದನ್ನು ಕನ್ನಡ ಪುಸ್ತಕ ಪ್ರಾಧಿಕಾರ ನನಗೆ ಒದಗಿಸಿಕೊಟ್ಟಿದೆ. ಅದರ ಅಧ್ಯಕ್ಷರಾದ ಹಾಗೂ ಆತ್ಮೀಯ ಸ್ನೇಹಿತರಾದ ಡಾ. ಸಿದ್ಧಲಿಂಗಯ್ಯ ಅವರ ವಿಶ್ವಾಸ ದೊಡ್ಡದು, ಅದಕ್ಕಾಗಿ ಅವರಿಗೆ ನಾನು ಕೃತಜ್ಞತೆಯನ್ನು ಸಲ್ಲಿಸಬೇಕು. ಕಾರಂತರ ಮಕ್ಕಳು, ಮೊಮ್ಮಕ್ಕಳು ವಿರಳ ಛಾಯಾಚಿತ್ರಗಳನ್ನು ಹಾಗೂ ಅಗತ್ಯ ಮಾಹಿತಿಗಳನ್ನು ಒದಗಿಸಿಕೊಟ್ಟು ಕೃತಿರಚನೆಯಲ್ಲಿ ನೆರವಾಗಿದ್ದಾರೆ. ಅವರಿಗೂ ನನ್ನ ನೆನಕೆಗಳು.

ಓದುಗರು ಈ ಕೃತಿಯನ್ನು ಆದರಾಭಿಮಾನಪೂರ್ವಕವಾಗಿ ಬರಮಾಡಿಕೊಳ್ಳುವರೆಂದು ಭಾವಿಸುತ್ತೇನೆ.

**ಡಾ. ವಸಂತಕುಮಾರ ಪೆರ್ಲ**

# ಪರಿವಿಡಿ


| | | |
|---|---|---|
| ೧. | ಪ್ರವೇಶ | ೧ |
| ೨. | ಬಾಲ್ಯ, ಶಿಕ್ಷಣ | ೩ |
| ೩. | ಕುಟುಂಬ ಜೀವನ | ೧೦ |
| ೪. | ಪ್ರೇರಣೆ, ಪ್ರಭಾವ | ೧೫ |
| ೫. | ವಕೀಲರಾಗಿ ಕಾರಂತರು | ೨೨ |
| ೬ | ಸಮಾಜವಾದಿ ಚಿಂತಕ | ೩೯ |
| ೭ | ಏಕೀಕರಣ ಚಳವಳಿಯ ಮೈಲಿಗಲ್ಲುಗಳು | ೪೭ |
| ೮. | ರಾಜಕೀಯ ಹೋರಾಟ | ೫೫ |
| ೯. | ಏಕೀಕರಣ ಚಳವಳಿ | ೭೧ |
| ೧೦. | ಬರಹಗಾರ ಕಾರಂತ | ೭೭ |
| ೧೧. | ಕೊನೆಯ ದಿನಗಳು | ೮೯ |
| ೧೨. | ಸಿದ್ಧಿ ಸಾಧನೆ | ೯೩ |
| ೧೩. | ಇತರರ ದೃಷ್ಟಿಯಲ್ಲಿ ಕಾರಂತರು | ೯೫ |

# ೧. ಪ್ರವೇಶ

ನ್ಯಾಯವಾದಿ ಹಾಗೂ ರಾಜಕೀಯ ಧುರೀಣರಾಗಿದ್ದ ಕೆ. ಆರ್. ಕಾರಂತರು (ಕೋಟ ರಾಮಕೃಷ್ಣ ಕಾರಂತ, ಜನನ: ಮೇ ೧, ೧೯೦೫, ಮರಣ: ಫೆಬ್ರವರಿ ೧, ೧೯೮೦) ಮುಖ್ಯವಾಗಿ ಕರ್ನಾಟಕ ಏಕೀಕರಣಕ್ಕೆ ಮಹತ್ವದ ಕೊಡುಗೆ ಸಲ್ಲಿಸಿದವರು. ವಕೀಲಿ, ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಅಚ್ಚಳಿಯದ ಕೆಲಸ ಮಾಡಿದ ಈ ಧೀಮಂತ ವ್ಯಕ್ತಿ, ಕರ್ನಾಟಕದ ಅಭಿವೃದ್ಧಿಯ ರೂವಾರಿಗಳಲ್ಲೊಬ್ಬರಾಗಿ ಕಳೆದ ಶತಮಾನದ ಮೂರು, ನಾಲ್ಕು ಹಾಗೂ ಐದನೇ ದಶಕಗಳಲ್ಲಿ ನಾಡನಾದ್ಯಂತ ಉಜ್ವಲವಾಗಿ ಬೆಳಗಿದರು. ಅವರ ಕಾರ್ಯಕ್ಷೇತ್ರ ಮೂಲತಃ ದಕ್ಷಿಣ ಕನ್ನಡವಾಗಿದ್ದರೂ ಅನಂತರ ವಿಧಾನಸಭಾ ಸದಸ್ಯರಾಗಿ ಜನಸೇವೆ ಮಾಡಿದರು. ಮದರಾಸು ಸಂಸ್ಥಾನದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದರು. ೧೯೫೮ರ ಬಳಿಕ ಜೀವಿತದ ಕೊನೆಯವರೆಗೆ ಉಚ್ಚನ್ಯಾಯಾಲಯದ ನ್ಯಾಯವಾದಿಯಾಗಿ ದುಡಿದರು. ನೇರ ನಡೆನುಡಿಯ, ನಿಷ್ಠುರ ವ್ಯಕ್ತಿತ್ವದ ಆಜಾನುಬಾಹು ಕೆ.ಆರ್. ಕಾರಂತರು ಪರಿಸ್ಥಿತಿಯ ಜೊತೆಗೆ ಎಂದೂ ಹೊಂದಾಣಿಕೆ ಮಾಡಿಕೊಂಡವರಲ್ಲ.

ಬಹುಮುಖೀ ವ್ಯಕ್ತಿತ್ವದ ಕೆ. ಆರ್. ಕಾರಂತರೊಳಗೆ ಒಬ್ಬ ಬರಹಗಾರನೂ ಅಡಗಿದ್ದ. ತನ್ನ ತಮ್ಮ ಡಾ. ಕೋಟ ಶಿವರಾಮ ಕಾರಂತರೊಂದಿಗೆ ಆರಂಭಿಸಿದ 'ವಿಚಾರವಾಣಿ' ಪತ್ರಿಕೆಯ ಸಂಪಾದಕರಲ್ಲೊಬ್ಬರಾಗಿ ಅವರು ಏಳೆಂಟು ವರ್ಷಗಳ ಕಾಲ ಕೆಲಸ ಮಾಡಿದ್ದರು. ಅದರಲ್ಲಿ ಅವರು ಬರೆಯುತ್ತಿದ್ದ ಸಂಪಾದಕೀಯಗಳು ಅವರ ಸಾಮಾಜಿಕ – ರಾಜಕೀಯ ಪ್ರಜ್ಞೆ ಮತ್ತು ಪ್ರಖರ ರಾಷ್ಟ್ರನಿಷ್ಠೆಗೆ ಸಾಕ್ಷಿಯಾಗಿದೆ. ದೇಶಾದ್ಯಂತ ಪ್ರವಾಸ ಮಾಡಿದ್ದ ಅವರು ಯೂರೋಪ್ ಪ್ರವಾಸ ಮಾಡಿ ಅನಂತರ ಪ್ರಕಟಿಸಿದ ಕೃತಿ "ಪ್ರವಾಸಿಯ ಪತ್ರಗಳು' (ಪ್ರಕಟಣೆ : ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೫೫) ಅವರ ಬರವಣಿಗೆಯ ಸಾಮರ್ಥ್ಯವನ್ನು ಪ್ರಕಟಪಡಿಸುತ್ತದೆ. ಸೂಕ್ಷ್ಮವಾಗಿ ಮತ್ತು ಅಡಕವಾಗಿ ಬರೆಯುವ ಕಲೆ ಅವರಿಗೆ ಕರಗತವಾಗಿತ್ತು.

ಸಾಮಾಜಿಕವಾಗಿ ಯಾವುದೇ ಘಟನೆಗಳಿಗೆ ತಕ್ಷಣ ಪ್ರತಿಸ್ಪಂದಿಸುತ್ತಿದ್ದ ಅವರು ವಿದ್ಯಾರ್ಥಿ ಸಂಘಟನೆಗಳಿಗೆ ಮಾರ್ಗದರ್ಶಕರಾಗಿದ್ದರು. ಅನ್ಯಾಯಗಳನ್ನು

ಸಾಮುದಾಯಿಕವಾಗಿ ಪ್ರತಿಭಟಿಸುವ ಸಂಘಟನಾತ್ಮಕತೆಯನ್ನು ಅವರು ಪ್ರದರ್ಶಿಸಿದರು.

೧೯೫೦-೬೦ರ ದಶಕದಲ್ಲಿ ಕರ್ನಾಟಕದಲ್ಲಿ ಅವರನ್ನು ಮೀರಿಸುವ ನ್ಯಾಯವಾದಿಗಳೇ ಇರಲಿಲ್ಲ ಎಂಬ ಪ್ರತೀತಿ ಇತ್ತು. ಸಕ್ರಿಯ ರಾಜಕೀಯದಿಂದ ದೂರವಾದ ಬಳಿಕ, ಅಂದರೆ ೧೯೫೮ರ ಅನಂತರ ಅವರು ತಮ್ಮ ವಾಸ್ತವ್ಯವನ್ನು ಬೆಂಗಳೂರಿಗೆ ವರ್ಗಾಯಿಸಿ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳಾಗಿ ಅಭೂತಪೂರ್ವ ಕೆಲಸ ಮಾಡಿದರು. ಸುಪ್ರೀಂ ಕೋರ್ಟ್‌ನಿಂದ ಗೆಲುವು ತಂದುಕೊಟ್ಟ ಹಲವು ಮಹತ್ವದ ವ್ಯಾಜ್ಯಗಳು ಅವರ ದಾಖಲೆಯಲ್ಲಿವೆ.

ಕೋಟ ರಾಮಕೃಷ್ಣ ಕಾರಂತರ ಅವಿಸ್ಮರಣೀಯ ಸಾಧನೆಯನ್ನು ಪರಿಗಣಿಸಿ ೧೯೮೦ರ ಸುಮಾರಿಗೆ ಸಾರ್ವಜನಿಕವಾಗಿ ಅವರನ್ನು ಅಭಿನಂದಿಸಲು ಮಂಗಳೂರಿನಲ್ಲಿ ಅಭಿನಂದನಾ ಸಮಿತಿಯೊಂದು ಅಸ್ತಿತ್ವಕ್ಕೆ ಬಂತು. ಅವರ ಮರಣಾನಂತರ ಸಮಾರಂಭ ಏರ್ಪಟ್ಟು ಸ್ಮರಣ ಸಂಚಿಕೆಯೊಂದನ್ನು ಬಿಡುಗಡೆ ಮಾಡಲಾಯಿತು. ವಿಶೇಷವೆಂದರೆ ಆ ಸ್ಮರಣ ಸಂಚಿಕೆಯನ್ನು ಕೆ. ಆರ್. ಕಾರಂತರ ತಮ್ಮ ಡಾ. ಕೋಟ ಶಿವರಾಮ ಕಾರಂತರು ಬಿಡುಗಡೆಗೊಳಿಸಿದರು. ಆ ಸಂಪುಟದಲ್ಲಿ ಕೆ. ಆರ್. ಕಾರಂತರ ವ್ಯಕ್ತಿತ್ವ-ಸಾಧನೆಗಳ ಪರಿಚಯಇದೆ.

೨೦೦೬ರಲ್ಲಿ ಕರ್ನಾಟಕ ಸರ್ಕಾರವು ಕೆ. ಆರ್. ಕಾರಂತರ ಚಿತ್ರವಿರುವ ಕ್ಯಾಲೆಂಡರ್ ಒಂದನ್ನು ಹೊರತಂದು ಅವರನ್ನು ಸ್ಮರಿಸಿತು. ಸರಕಾರದ ವತಿಯಿಂದ ಪ್ರಕಟಿಸಲಾದ 'ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು' ಗ್ರಂಥದಲ್ಲಿ ಅವರ ಬಗೆಗಿನ ಲೇಖನವಿದೆ.

ಕೆ. ಆರ್. ಕಾರಂತರ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಮಂಗಳೂರು, ಬೆಂಗಳೂರು, ಅಮೆರಿಕಾ ಮುಂತಾದೆಡೆ ವಾಸವಾಗಿದ್ದಾರೆ.

ಕೆ. ಆರ್. ಕಾರಂತರಂತಹ ಉದ್ದಾಮ ವ್ಯಕ್ತಿಗಳನ್ನು ನಾಡು ಮರೆಯಬಾರದು. ಅವರ ಸಾಧನೆ ಮತ್ತು ಕೊಡುಗೆಗಳನ್ನು ಸ್ಮರಿಸಿ ಮುಂದಿನ ತಲೆಮಾರಿಗೆ ತಿಳಿಸುವುದೇ ನಾವು ಅವರಿಗೆ ಸಲ್ಲಿಸುವ ಗೌರವವಾಗಿದೆ.

■

## ೨. ಬಾಲ್ಯ, ಶಿಕ್ಷಣ

೧೮೯೪ರ ಮೇ ೧ ರಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕೋಟದ ಬಳಿ ಪಾರಂಪಳ್ಳಿಯಲ್ಲಿ ಶೇಷಕಾರಂತ ಮತ್ತು ಲಕ್ಷ್ಮೀ ಅಮ್ಮ ದಂಪತಿಯ ಹಿರಿಯ ಮಗನಾಗಿ ಕೆ. ಆರ್. ಕಾರಂತರು ಜನಿಸಿದರು. ಪಾರಂಪಳ್ಳಿಯು ಲಕ್ಷ್ಮಿಯವರ ತವರು ಮನೆ. ಮೊದಲ ಹೆರಿಗೆ ಮತ್ತು ಬಾಣಂತನ ತವರು ಮನೆಯಲ್ಲಿ ಎಂಬ ರೂಢಿ ಇದ್ದುದರಿಂದ ಸೀಮಂತ ಆಗುತ್ತಿದ್ದಂತೆ ಲಕ್ಷ್ಮಿ ತವರು ಮನೆಗೆ ತೆರಳಿದರು. ಕೆ.ಆರ್.ಕಾರಂತರಿಗೆ ಏಳು ಮಂದಿ ಸಹೋದರರು ಮತ್ತು ಇಬ್ಬರು ಸಹೋದರಿಯರು.

ಶೇಷ ಕಾರಂತರಿಗೆ ಹಿರಿಯರಿಂದ ಬಂದ ಮೂರು ರೂಪಾಯಿಯ ತೀರ್ವೆ ಜಮೀನಿನ ವ್ಯವಸಾಯ ಇತ್ತು. ಅಲ್ಲದೆ ಕೋಟದಲ್ಲಿ ಒಂದು ಜವಳಿ ಅಂಗಡಿಯನ್ನೂ ಅವರು ನಡೆಸುತ್ತಿದ್ದರು. ಅದಕ್ಕೂ ಹಿಂದೆ, ತಿಂಗಳಿಗೆ ಎಂಟಾಣೆ ಸಂಬಳಕ್ಕೆ ಬೇರೊಬ್ಬರ ಜವಳಿ ಅಂಗಡಿಯಲ್ಲಿ ಅವರು ಕೆಲಸ ಮಾಡುತ್ತಿದ್ದರಂತೆ.

ಕೋಟ ಆಸುಪಾಸಿನಲ್ಲಿರುವ ಬ್ರಾಹ್ಮಣರು ಕೋಟ ಬ್ರಾಹ್ಮಣರೆಂದೇ ಪ್ರಸಿದ್ಧರಾಗಿದ್ದಾರೆ. ಇವರು ಸ್ಮಾರ್ತರು; ಯಾವುದೇ ಗುರುಮಠಕ್ಕೆ ಸೇರಿದವರಲ್ಲ. ಯಾವ ಸ್ವಾಮೀಜಿಗಳನ್ನೂ ಗುರುವೆಂದು ಸ್ವೀಕರಿಸಿದವರಲ್ಲ. ಕೋಟ ಬಳಿಯಿರುವ ಸಾಲಿಗ್ರಾಮ ದೇವಸ್ಥಾನದಲ್ಲಿರುವ ನರಸಿಂಹದೇವರು ಇವರ ಆರಾಧ್ಯದೈವ. ಬ್ರಾಹ್ಮಣರು ನೇಗಿಲು ಹಿಡಿದು ಗದ್ದೆ ಉಳಬಾರದು ಎಂಬ ಶಾಸ್ತ್ರ ವಿಧಿ ಇದ್ದುದರಿಂದ ಅದೊಂದನ್ನು ಬಿಟ್ಟು ಬೇಸಾಯದ ಇತರ ಎಲ್ಲ ಕೆಲಸಗಳನ್ನು ನಿರ್ವಹಿಸಿದ್ದರು. ಅತಿಯಾದ ಬಡತನವಿದ್ದುದರಿಂದ ಅವರಲ್ಲಿ ಕೆಲವರು ತಮ್ಮ ಆದಾಯ ಹೆಚ್ಚಿಸಿಕೊಳ್ಳುವುದಕ್ಕಾಗಿ ಘಟ್ಟ ದಾಟಿ ಮಲೆನಾಡಿನಲ್ಲಿ ಉಪಾಧ್ಯಾಯರಾಗಿಯೊ, ಹೊಟೇಲ್ ನಡೆಸಲೊ ತೆರಳುತ್ತಿದ್ದರು.

ತಂದೆ ಶೇಷ ಕಾರಂತರು ಪಾಂಡಿತ್ಯ ಉಳ್ಳವರಾಗಿದ್ದರೂ ಆರ್ಥಿಕಜವಾಗಿ ಅನುಕೂಲವಂತರಾಗಿರಲಿಲ್ಲ. ಆರಂಭದಲ್ಲಿ ಅವರೂ ಘಟ್ಟದ ಮೇಲೆ ಉಪಾಧ್ಯಾಯರಾಗಿ ದುಡಿದಿದ್ದರಂತೆ, ಆಗ ಅವರಿಗೆ ಸಿಗುತ್ತಿದ್ದುದು ತಿಂಗಳಿಗೆ ಎಂಟಾಣೆ (ಐವತ್ತು ಪೈಸೆ) ಸಂಬಳ. ಅನಂತರ ಕೋಟದಲ್ಲಿ ಅನುಕೂಲಸ್ಥರೊಬ್ಬರ

ಮನೆಯಲ್ಲಿ ಗುಮಾಸ್ತರಾಗಿ ದುಡಿದರಂತೆ. ದೊಡ್ಡ ಮಗ ಕೆ. ಆರ್. ಕಾರಂತ ಹುಟ್ಟಿ ನಾಲ್ಕೈದು ವರ್ಷಕ್ಕೆ ಕೋಟದಲ್ಲಿ ಶೇಷ ಕಾರಂತರು ಜವಳಿ ಅಂಗಡಿ ತೆರೆದರಂತೆ. ತಿಳಿವಳಿಕೆ ಮತ್ತು ಸಾರ್ವಜನಿಕ ಸಂಪರ್ಕವಿದ್ದುದರಿಂದ ಊರವರಿಗೆ ಅವರು ಕಾನೂನು ಸಲಹೆ ನೀಡುತ್ತಿದ್ದರಂತೆ. ಅಲ್ಪ ಸ್ವಲ್ಪ ಔಷಧಿ ಚಿಕಿತ್ಸೆಯನ್ನು, ನಾಟಿ ವೈದ್ಯವನ್ನೂ ಮಾಡುತ್ತಿದ್ದರು. ಜ್ವರಬಾಧೆ, ವಾಂತಿ ಭೇದಿ, ಹಾವಿನ ಕಡಿತ ಮುಂತಾದ ಕಾಯಿಲೆ ಕಸಾಲೆಗಳಿಗೆ ಉಚಿತ ಔಷಧಿಗಳನ್ನು ನೀಡುತ್ತಿದ್ದರಂತೆ.

ಜನರು ಶೇಷ ಕಾರಂತರನ್ನು ಉದಾರಿಗಳೆಂದೂ ಧರ್ಮಾತ್ಮರೆಂದೂ ಬಣ್ಣಿಸುತ್ತಿದ್ದರು. ಒಂದು ಶಿವ ದೇವಸ್ಥಾನದ ಜೀರ್ಣೋದ್ಧಾರವನ್ನು ತಮ್ಮ ಮುಂದಾಳ್ತನದಲ್ಲಿ ನೆರವೇರಿಸಿದ್ದರಂತೆ. ಮಳೆಗಾಲದ ರಾತ್ರಿಗಳಲ್ಲಿ ಗದುಗಿನ ಭಾರತ, ವಾಲ್ಮೀಕಿ ರಾಮಾಯಣ ಮೊದಲಾದ ಪುರಾಣಪುಣ್ಯ ಕಥೆಗಳನ್ನು ಪ್ರವಚನ ಮಾಡಿಸಿ ನೆರೆದವರಿಗೆ ಅರ್ಥ ವಿವರಣೆ ಮಾಡುತ್ತಿದ್ದರಂತೆ. 'ಕೋಟದ ಜನತೆಗೆ ನಿಷ್ಕಳಂಕ ಸೇವೆಯನ್ನು ನಿಸ್ವಾರ್ಥ ದೃಷ್ಟಿಯಿಂದ ಸಲ್ಲಿಸಿದವರು ಶೇಷ ಕಾರಂತರು ಎಂದು ಶೇಷ ಕಾರಂತ ಕುರಿತು ಕಿರುಹೊತ್ತಿಗೆ ಪ್ರಕಟಿಸಿದ ಕೋಟದ ಶ್ರೀ ಜಿ.ವಿ. ಹೇರಳೆ ಬರೆದಿದ್ದಾರೆ.

ಜವಳಿ ಅಂಗಡಿಯಿಂದ ಶೇಷ ಕಾರಂತರ ಜೀವನ ಸುಧಾರಿಸಿತು. ಆ ಕಾಲಕ್ಕೆ ಕುಂದಾಪುರ ಮತ್ತು ಉಡುಪಿ ಮಧ್ಯೆ ಬೇರೆಲ್ಲೂ ಬಟ್ಟೆ ಅಂಗಡಿ ಇರಲಿಲ್ಲವಂತೆ. ಜನರು ಬಟ್ಟೆ ಕೊಳ್ಳಲು ದೂರದ ಕುಂದಾಪುರ ಅಥವಾ ಉಡುಪಿಗೆ ಹೋಗಬೇಕಾಗಿತ್ತು.

ಅಂಗಡಿಯಲ್ಲಿ ವ್ಯಾಪಾರ ವೃದ್ಧಿಸಿ ಶೇಷ ಕಾರಂತರು ಅನುಕೂಲವಂತರಾದರು. ಸ್ವಲ್ಪ ಮಟ್ಟಿಗೆ ಆಸ್ತಿಪಾಸ್ತಿ ಮಾಡಿಕೊಂಡರು. ಕೇವಲ ಲಾಭದೃಷ್ಟಿಯಿಂದ ವ್ಯಾಪಾರ ಮಾಡದೆ ಜನರ ಶ್ರೇಯಸ್ಸನ್ನು ಮುಖ್ಯ ಲಕ್ಷ್ಯವಾಗಿಟ್ಟುಕೊಂಡಿದ್ದರು. ಸುತ್ತಮುತ್ತಲ ಜನರ ವಿದ್ಯಾಭ್ಯಾಸಕ್ಕಾಗಿ ಒಂದು ಶಾಲೆಯನ್ನು ಆರಂಭ ಮಾಡಿದ್ದಲ್ಲದೆ ಅದಕ್ಕೆ ಬೇಕಾದ ಜಮೀನು ಕೊಟ್ಟು ಅದನ್ನು ಅಭಿವೃದ್ಧಿಪಡಿಸಿದರು. ಆ ಶಾಲೆಗೆ ಶ್ರೀ ಶಾಂಭವೀ ವಿದ್ಯಾದಾಯಿನೀ ಖಾಸಗಿ ಹಿರಿಯ ಪ್ರಾಥಮಿಕ ಶಾಲೆ, ಗಿಳಿಯಾರು, ಕೋಟ ಎಂದು ಹೆಸರಿಡಲಾಗಿದೆ. ಈ ಶಾಲೆಯಲ್ಲಿಯೇ ಕೆ. ಆರ್. ಕಾರಂತ, ಡಾ. ಶಿವರಾಮ ಕಾರಂತ ಮೊದಲಾದವರು ಓದಿದರು. ಈ ಶಾಲೆಯ ಮುಂಭಾಗದಲ್ಲಿ ಶೇಷ ಕಾರಂತರ ಪ್ರತಿಮೆಯನ್ನು ನಿಲ್ಲಿಸಲಾಗಿದೆ.

ಕೆ. ಆರ್. ಕಾರಂತರು ಒಂದೆಡೆ ಬರೆದುಕೊಂಡಂತೆ, ಅವರ ತಾಯಿ ಸಂಸಾರದ ಭಾರ ಹೊರುವಷ್ಟು ತಾಳಿಕೆ ಇಲ್ಲದವರಾಗಿದ್ದರು. ತಂದೆಯ ತಾಯಿ (ಅಜ್ಜಿ) ಸ್ವಲ್ಪ

ಮುಂಗೋಪಿಯಾದರೂ ವಾತ್ಸಲ್ಯಮಯಿ. ಚಿಕ್ಕವರಾಗಿದ್ದಾಗ ಕಾರಂತರು ಅವರೊಡನೆ ದನ ಮೇಯಿಸಲು ಹೋಗುತ್ತಿದ್ದರಂತೆ.

ಕಾರಂತರ ಆರಂಭಿಕ ಶಿಕ್ಷಣ ಕೋಟದಲ್ಲಿ ಆಯಿತು. ಹೈಸ್ಕೂಲ್ ಶಿಕ್ಷಣಕ್ಕೆ ಕುಂದಾಪುರಕ್ಕೆ ಹೋದರು. ಅನಂತರ ಮಂಗಳೂರಿನಲ್ಲಿ ಎರಡು ವರ್ಷ ಕಾಲ ಇಂಟರ್‌ಮೀಡಿಯೇಟ್ ಮಾಡಿದರು. ೧೯೧೫ರಲ್ಲಿ ಮದರಾಸಿಗೆ ತೆರಳಿ ಅಲ್ಲಿನ ಪ್ರೆಸಿಡೆನ್ಸಿ ಕಾಲೇಜು ಸೇರಿದರು. ಅಲ್ಲಿ ಅವರ ಶಿಕ್ಷಣ ಸರಿಯಾಗಿ ಮುಂದುವರಿಯಲಿಲ್ಲ.

ಅಲ್ಲಿದ್ದಾಗ ಡಂಬ್‌ಬೆಲ್ಸ್ ವ್ಯಾಯಾಮ ಮಾಡಿ ದೇಹದಾರ್ಢ್ಯತೆಯನ್ನು ಬೆಳೆಸಿಕೊಂಡರು. ಆಗ ತುಂಬ ಸಿನಿಮಾ ನೋಡುತ್ತಿದ್ದರಂತೆ. ಅಲ್ಲಿದ್ದಾಗ ರಾಜಕೀಯದ ಬಗ್ಗೆ ಆಸಕ್ತಿ ಕುದುರಿತು. ಮದರಾಸಿನಲ್ಲಿ ಆರಂಭದಲ್ಲಿ ಎಗ್ಮೋರಿನ ಗೆಂಗುರೆಡ್ಡಿ ರಸ್ತೆಯ ಒಂದು ಮನೆಯ ಭಾಗದಲ್ಲಿ, ಬಳಿಕ ಚಿಂತಾದ್ರಿಪೇಟೆ ಅನಂತರ ತಿರುವಲ್ಲಿಕೇಣಿಯಲ್ಲಿ ವಾಸಿಸಿದರು. ಅಲ್ಲಿ ಬಿ.ಎ ಯಲ್ಲಿ ಅನುತ್ತೀರ್ಣರಾದರು. ಬಿ. ಎ. ಡಿಗ್ರಿ ಮುಗಿಸಲು ಅನಂತರ ಬೆಂಗಳೂರಿಗೆ ಬಂದು ಸೆಂಟ್ರಲ್ ಕಾಲೇಜು ಸೇರಿದರು.

೧೯೧೬ರಲ್ಲಿ ಕಾರಂತರಿಗೆ ರಮಾಬಾಯಿ ಎಂಬವರೊಡನೆ ವಿವಾಹವಾಯಿತು. ಆಗ ಆಕೆಗೆ ಹತ್ತು ವರ್ಷ ವಯಸ್ಸು. ಬಿ. ಎ. ಮುಗಿಸಿದ ಮೇಲೆ ಅವರಿಗೆ ಬ್ಯಾರಿಸ್ಟರ್ (ವಕೀಲಿ) ಅಭ್ಯಾಸ ಮಾಡುವ ಮನಸ್ಸಾಯಿತು. ಮದ್ರಾಸಿನಲ್ಲಿ ಅದು ಪೂರ್ಣಾವಧಿ ಕಾಲೇಜು ಅಭ್ಯಾಸ. ಅಡ್ವೋಕೇಟ್ ಆಗಬೇಕಾದರೆ ಆಗ ಮೂರು ವರ್ಷ ಕಲಿಯಬೇಕಾಗಿತ್ತು. ಹೀಗಾಗಿ, ಅರೆಕಾಲಿಕ ಉದ್ಯೋಗ ಮಾಡಿ ಅಭ್ಯಾಸ ಮುಂದುವರಿಸಲು ೧೯೧೬ರಲ್ಲಿ ಅವರು ಮುಂಬೈಗೆ ಹೋದರು.

ಮುಂಬೈಯಲ್ಲಿ ಕಾನೂನು ಕಾಲೇಜಿನ ತರಗತಿಗಳು ಸಂಜೆ ೫.೩೦ರಿಂದ ೬.೩೦ ರವರೆಗೆ ಕೇವಲ ಒಂದು ಗಂಟೆ ನಡೆಯುವ ವ್ಯವಸ್ಥೆ ಇತ್ತು. ಆದ್ದರಿಂದ ಹಗಲಿಡೀ ಬಿಡುವಾಗಿರಬಹುದಾಗಿತ್ತು.ಕಾರಂತರು ಬಯಸಿದ್ದು ಅದನ್ನೇ. ಮುಂಬೈಯ ಪ್ರೌಢಶಾಲೆಯೊಂದರಲ್ಲಿ ಉಪಾಧ್ಯಾಯ ವೃತ್ತಿ ಮಾಡುತ್ತ ಸಂಜೆ ಹೊತ್ತು ಕಾನೂನು ವ್ಯಾಸಂಗ ಮುಂದುವರಿಸಿದರು. ಆ ಶಾಲೆಯನ್ನು ಬಾರ್ಡಾನ್ ಮತ್ತು ಮಾರ್ಜ್‌ಬಾನ್ ಎಂಬ ಇಬ್ಬರು ಪಾರ್ಸಿಗಳು ವ್ಯವಸ್ಥಾಪಕರಾಗಿ ನಡೆಸುತ್ತಿದ್ದರು. ಅದು ಜಿ.ಐ.ಪಿ. ರೈಲ್ವೆಯ ಅಂತ್ಯಭಾಗದಲ್ಲಿ ಒಂದು ರಂಗಮಂದಿರದ ಬಳಿ ಇತ್ತು ಎಂದು ಕಾರಂತರು ಒಂದೆಡೆ ಬರೆದುಕೊಂಡಿದ್ದಾರೆ.

ಮುಂಬೈಯಲ್ಲಿದ್ದಾಗ ಕಾರಂತರು ಗಾಮಾದೇವಿಯಲ್ಲಿದ್ದ ಬಾರ್ಡಾನ್ ಎಂಬವರ ಚಾಳಿನಲ್ಲಿ ವಾಸಿಸುತ್ತಿದ್ದರು. ಹಗಲಿಡೀ ಉಪಾಧ್ಯಾಯನ ಕೆಲಸ ಮತ್ತು ಸಂಜೆ

ಕಾನೂನು ತರಗತಿಗೆ ಹಾಜರಾಗುವುದು. ಇದು ಕಾರಂತರ ಆಗಿನ ದಿನಚರಿಯಾಗಿತ್ತು.

ಉಪಾಧ್ಯಾಯ ವೃತ್ತಿ ಅವರಿಗೇನೂ ಹೊಸದಾಗಿರಲಿಲ್ಲ. ಅದು ರಕ್ತಕ್ಕಂಟಿಕೊಂಡು ಬಂದ ಕಲೆಯಾಗಿತ್ತು. ಕಾರಂತರ ತಂದೆ ಶೇಷಕಾರಂತರು ಸ್ವಲ್ಪ ಕಾಲ ಉಪಾಧ್ಯಾಯ ವೃತ್ತಿಯಲ್ಲಿದ್ದರು. ಅವರ ತಮ್ಮಂದಿರಾದ ನರಸಿಂಹ ಕಾರಂತ ಮತ್ತು ಲಕ್ಷ್ಮೀನಾರಾಯಣ ಕಾರಂತರಂತೂ ಪೂರ್ಣಪ್ರಮಾಣದ ಅಧ್ಯಾಪಕರೇ ಆಗಿದ್ದರು. ಉಳಿದ ಸೋದರರಾದ ವಾಸುದೇವ ಕಾರಂತ, ಶಿವರಾಮ ಕಾರಂತ, ಶಂಕರನಾರಾಯಣ ಕಾರಂತ ಕೆಲಕಾಲ ಉಪಾಧ್ಯಾಯ ವೃತ್ತಿ ನಿರ್ವಹಿಸಿದವರೇ ಆಗಿದ್ದರು.

ಕೆ. ಆರ್. ಕಾರಂತರಿಗೆ ಆಗ ಮೆಹತಾ ಎಂಬ ಒಬ್ಬ ವಿದ್ಯಾರ್ಥಿ ಸಹಪಾಠಿ ಇದ್ದ. ಆ ಕಾಲದಲ್ಲಿ ಎಂ.ಕೆ.ಗಾಂಧಿ (ಗಾಂಧೀಜಿ) ಆ ಮೆಹತಾನ ಮಣಿಭವನಕ್ಕೆ ಬರುತ್ತಿದ್ದರಂತೆ. ಮುಂದೆ ಆ ಮಣಿಭವನವನ್ನು ಮೆಹತಾನ ಕುಟುಂಬದವರು ರಾಷ್ಟ್ರಕ್ಕೆ ಅರ್ಪಿಸಿದರು.

ಮುಂಬೈಯಲ್ಲಿ ಈಗಿನ ದಾದಾಭಾಯಿ ನವರೋಜಿ ರಸ್ತೆಯಲ್ಲಿ ಕಾರಂತರು ಕಲಿಯುತ್ತಿದ್ದ ಕಾನೂನು ವಿದ್ಯಾಲಯವಿತ್ತು. ಆಗ ಕಾರಂತರು ಮುಂಬೈಯ ಉಚ್ಚ ನ್ಯಾಯಾಲಯಕ್ಕೆ ಆಗಾಗ ಹೋಗಿ ನ್ಯಾಯವಾದಿಗಳು ಅಲ್ಲಿ ವ್ಯಾಜ್ಯಗಳನ್ನು ನಿರ್ವಹಿಸುತ್ತಿದ್ದ ರೀತಿಯನ್ನು ಪ್ರತ್ಯಕ್ಷ ಗಮನಿಸಿ ಬರುತ್ತಿದ್ದರು. ಪ್ರಸಿದ್ಧ ನ್ಯಾಯವಾದಿಗಳಾದ ಮೋತಿಲಾಲ್ ಸೆಟಲ್‌ವಾಡ್, ಮಹಮ್ಮದಾಲಿ ಜಿನ್ನಾ, ಭೋಲಾಭಾಯಿ ದೇಸಾಯಿ, ಜಾರ್ಡೈನ್. ಸ್ಟ್ರೇಂಜ್‌ಮನ್ ಮೊದಲಾದವರ ದರ್ಶನವಾಗುತ್ತಿತ್ತು. ಇದಲ್ಲದೆ ನ್ಯಾಯಮೂರ್ತಿಗಳಾದ ಬಿಮನ್ ಮುಂತಾದ ಆಂಗ್ಲ ನ್ಯಾಯಮೂರ್ತಿಗಳ ಪಾಂಡಿತ್ಯ, ಕೌಶಲ್ಯ, ಕ್ಷಮತೆ ಮುಂತಾದವುಗಳನ್ನು ಕಂಡು ಬೆರಗಾಗುತ್ತಿದ್ದರು. ದೃಷ್ಟಿದೋಷವಿದ್ದ ಬಿಮನ್ ತಾನೇ ಹೇಳಿಕೆ ಮತ್ತು ವಾದಗಳನ್ನು ಬೆರಳಚ್ಚು ಮಾಡುತ್ತ ಆಗಿಂದಾಗಲೇ ತೀರ್ಪನ್ನು ಸ್ವತಃ ಬೆರಳಚ್ಚು ಮಾಡಿ ಘೋಷಿಸುತ್ತಿದ್ದರಂತೆ!

ಆ ಕಾಲದಲ್ಲಿ ಗಾಂಧೀಜಿ ಅಷ್ಟೊಂದು ಪ್ರಸಿದ್ಧಿಗೆ ಬಂದಿರಲಿಲ್ಲ. ಅದು ಗಾಂಧೀಜಿ ರಾಜಕೀಯ ಹೋರಾಟಕ್ಕೆ ಇಳಿಯುತ್ತಿದ್ದ ಆರಂಭಿಕ ಕಾಲ. ಗಾಂಧೀಜಿಯವರನ್ನು ಭೇಟಿಯಾಗುವ ಅವಕಾಶ ಕಾರಂತರಿಗೆ ಆಗಾಗ ಲಭಿಸುತ್ತಿತ್ತಲ್ಲದೆ, ಆಗ ಪ್ರಖರವಾಗಿದ್ದ ಬಾಲಗಂಗಾಧರ ತಿಲಕರನ್ನು ಭೇಟಿಯಾಗುವ ಅವಕಾಶವೂ ಒಮ್ಮೆ ಸಿಕ್ಕಿತು. ಕಾರಂತರ ಅಭ್ಯಾಸ ಆಗಷ್ಟೆ ಮುಗಿದಿತ್ತು.

ತಿಲಕರನ್ನು ಭೇಟಿಯಾದದ್ದು ಕಾರಂತರ ಜೀವನದ ಒಂದು ಪ್ರಮುಖ ಘಟ್ಟ, ಅವರ ಜೀವನಕ್ಕೆ ತಿರುವು ನೀಡಿದ ಘಟನೆ ಅದು.

ಅದು ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪರ್ವಕಾಲ. ತಿಲಕರು ಆಗ ತಾನೇ ಮಂಡಲೇ ಜೇಲಿನಿಂದ ಆರು ವರ್ಷಗಳ ಕಾರಾಗೃಹ ಶಿಕ್ಷೆ ಅನುಭವಿಸಿ ಹೊರಬಂದಿದ್ದರು. ಕೆಲದಿನಗಳಲ್ಲಿಯೇ ಮುಂಬಯಿಯಿಂದ ಇಂಗ್ಲಂಡ್‌ಗೆ ದೇಶದ ಸ್ವಾತಂತ್ರ್ಯದ ಕುರಿತು ಮಾತುಕತೆ ನಡೆಸಲು ಹೋಗಲಿದ್ದರು. ಕಾರಂತರು ತಾನು ಕೆಲಸ ಮಾಡುತ್ತಿದ್ದ ಪ್ರೌಢಶಾಲೆಯಿಂದ ಚರ್ಚ್‌ಗೇಟ್ ಮೂಲಕ ಮೂರ್‍ನಾಲ್ಕು ಮೈಲು ನಡೆದು ಹೋಗುತ್ತಿದ್ದಾಗ ಸಾಂಧ್‌ಹರ್ಸ್ಟ್ ಸೇತುವೆಯ ಅಡಿಯಲ್ಲಿ ಈ ಸಭೆ ನಡೆಯುತ್ತಿತ್ತು.

'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ಪಡೆದೇ ಪಡೆಯುವೆ' ಎಂದು ತಿಲಕರು ಘೋಷಿಸಿದ ಅವಿಸ್ಮರಣೀಯ ಭಾಷಣದ ಅಂಶವನ್ನೊಳಗೊಂಡಿದ್ದ ಕಾರ್ಯಕ್ರಮ ಅದಾಗಿತ್ತು. ತಿಲಕರ ಭಾಷಣದ ಮತ್ತು ವ್ಯಕ್ತಿತ್ವ ಕಾರಂತರ ಮೇಲೆ ಅತೀವ ಪ್ರಭಾವ ಬೀರಿತು. ಆಗ ತಿಲಕರ ಯುಗ ಮುಗಿದು ಗಾಂಧೀ ಯುಗ ಭಾರತದ ರಾಜಕೀಯದಲ್ಲಿ ಕಾಲಿಡುವುದರಲ್ಲಿತ್ತು. ತಿಲಕರು ತಮ್ಮ ಸಂಸ್ಕೃತ ಪಾಂಡಿತ್ಯ, ಪುಸ್ತಕಗಳು ಹಾಗೂ ಅಸ್ಖಲಿತ ಭಾಷಣಕ್ಕಾಗಿ ಪ್ರಸಿದ್ಧರಾಗಿದ್ದರು.

ಈ ಬಗೆಯ ವ್ಯಕ್ತಿತ್ವ ಕಾರಂತರೊಳಗೂ ರೂಪುಪಡೆಯುತ್ತಿತ್ತು. ಕಾರಂತರದು ಆರು ಅಡಿಗೆ ಸಮೀಪದ ಭವ್ಯ ವ್ಯಕ್ತಿತ್ವ . ನಿರ್ಭಿಡೆ, ನಿಷ್ಠುರತೆ, ಸತ್ಯಸಂಧತೆ, ಪ್ರಾಮಾಣಿಕತೆ, ಕಠಿಣ ಪರಿಶ್ರಮ, ಓದು, ಬರವಣಿಗೆ ಇವೆಲ್ಲ ಗುಣಗಳು ಕಾರಂತರಲ್ಲಿ ಆಗಲೇ ಹಾಸುಹೊಕ್ಕಾಗಿತ್ತು. ಹಿರಿಯರಿಂದ ಬಳುವಳಿಯಾಗಿ ಬಂದ ಅಧ್ಯಯನಶೀಲತೆ ಮತ್ತು ಪಾಂಡಿತ್ಯವೂ ಕಾರಂತರ ವ್ಯಕ್ತಿತ್ವವನ್ನು ರೂಪಿಸಿದವು.

ಮುಂಬಯಿಯಿಂದ ಮರಳಿದ ಕಾರಂತರು ೧೯೧೯ರ ಜನವರಿಯಲ್ಲಿ ಮಂಗಳೂರಿನಲ್ಲಿ ವಕೀಲಿ ವೃತ್ತಿ ಆರಂಭಿಸಿದರು. ಆಗ ಮಂಗಳೂರಿನಲ್ಲಿ ಪ್ರಸಿದ್ಧ ವಕೀಲರಾಗಿದ್ದ ಉಳ್ಳಾಲ ಕೃಷ್ಣಭಟ್ಟರ ಒಂದು ಮನೆಯನ್ನು ಬಾಡಿಗೆಗೆ ಪಡೆದು ಅವರ ಕೈಕೆಳಗೆ ವಕೀಲಿ ವೃತ್ತಿ ತೊಡಗಿದರು.

ಆಗ ನಾಡಿನಾದ್ಯಂತ ಆರ್ಯಸಮಾಜ ಚಳವಳಿಯು ಗರಿಗೆದರಿಕೊಂಡಿತ್ತು. ಮಂಗಳೂರಿನಲ್ಲಿಯೂ ಆ ಚಳವಳಿ ತೀವ್ರ ಸ್ವರೂಪದಲ್ಲಿ ನಡೆಯುತ್ತಿತ್ತು. ಸಾರ್ವಜನಿಕ ಸ್ವರೂಪದ ಚಟುವಟಿಕೆಗಳಲ್ಲಿ ತೀವ್ರಾಸಕ್ತರಾಗಿದ್ದ ಕಾರಂತರು ಆರ್ಯಸಮಾಜದಿಂದ ಪ್ರಭಾವಿತರಾಗಿ ಆ ಚಳವಳಿಯನ್ನು ಸೇರಿಕೊಂಡರು. ಆರ್ಯಸಮಾಜದ ಪಂಜಾಬೀ ನಾಯಕರಿಂದ ಪ್ರಭಾವಿತರಾಗಿ ಮಂಗಳೂರಿನಲ್ಲಿಯೂ ಆರ್ಯಸಮಾಜ ಮಂದಿರ ಕಟ್ಟುವ ಮನಸ್ಸು ಮಾಡಿದರು. ಇದಕ್ಕಾಗಿ ಉಳ್ಳಾಲ ಕೃಷ್ಣಭಟ್ಟರ ಮನವೊಲಿಸಿ ಅವರ ವಿಶಾಲವಾದ ಹಿತ್ತಿಲಿನಿಂದ ಅರವತ್ತು ಸೆಂಟ್ಸ್ ಜಾಗವನ್ನು ದಾನವಾಗಿ

ಪಡೆದರು. ಕಟ್ಟಡದ ನಿಧಿ ಸಂಗ್ರಹಣೆಗಾಗಿ ೧೯೨೧ರ ಏಪ್ರಿಲ್-ಮೇ ತಿಂಗಳುಗಳಲ್ಲಿ ಪಂಜಾಬ್ ಪ್ರವಾಸ ಮಾಡಿದರು.

ಆ ಸಂದರ್ಭದಲ್ಲಿ ಲಾಹೋರ್‌ನಲ್ಲಿ ಆರ್ಯಸಮಾಜದ ಮುಖಂಡ ಲಾಲಾ ಲಜಪತ್‌ರಾಯ್ ಅವರನ್ನು ಕಂಡರು. ಆದರೆ ಲಜಪತರಾಯರು ಕಾರಂತರ ಯೋಜನೆಯನ್ನು ಬೆಂಬಲಿಸಲಿಲ್ಲ. ಕಟ್ಟಡ, ಭವನ ಎಂದರೆ ಆಸ್ತಿ, ಆಸ್ತಿಯಿಂದ ಮುಂದೆ ಜಗಳ ಉಂಟಾಗುತ್ತದೆ. ಆದ್ದರಿಂದ ಆರ್ಯಸಮಾಜದ ಪ್ರಾರ್ಥನಾ ಸಭೆಗಳನ್ನು ಮರಗಳ ಕೆಳಗೆ ಮಾಡುವುದೇ ಉತ್ತಮ, ಎಂಬ ಸಲಹೆ ನೀಡಿದರು. ಆ ಸಲಹೆ ಕಾರಂತರಿಗೆ ಪಥ್ಯವಾಗಲಿಲ್ಲ. ಆರ್ಯಸಮಾಜ ಚಳವಳಿಯು ಒಂದು ಬಣದ ನಾಯಕರಾದ ಮಹಾತ್ಮ ಹಂಸರಾಜರ ನಾಯಕತ್ವದಲ್ಲಿ ಮತ್ತು ಇನ್ನೊಂದು ಬಣದ ನಾಯಕರಾದ ಸ್ವಾಮಿ ಸಿದ್ಧಾನಂದರ ನಾಯಕತ್ವದಲ್ಲಿ ಎರಡು ಹೋಳಾಗಿಹೋಯಿತು. ಕಾರಂತರು ಲಾಹೋರ್‌ನಲ್ಲಿದ್ದ ಮಹಾತ್ಮ ಹಂಸರಾಜರ ಬಣದವರು ನಡೆಸುತ್ತಿದ್ದ ಕಾಲೇಜನ್ನು ಸಂದರ್ಶಿಸಿದರು. ಅದೇ ಸಂದರ್ಭದಲ್ಲಿ ಐದು ವರ್ಷ ಸೆರೆಮನೆ ವಾಸ ಅನುಭವಿಸಿ ಬಂದಿದ್ದ ಲಾಲಾ ಧುನೀಚಂದ್ ಅವರನ್ನು ಭೇಟಿಯಾದರು. ಲಾಹೋರ್‌ನಲ್ಲಿ ಒಬ್ಬ ವಕೀಲರಲ್ಲಿ ಕೆಲಕಾಲ ನಿಂತರು. ಮುಂದೆ ಅನಾರ್ಕಲಿಯಲ್ಲಿದ್ದ ಆರ್ಯಸಮಾಜ ಕಟ್ಟಡದಲ್ಲಿ ಎರಡು ವಾರ ವಸತಿ ಹೂಡಿ ಅಲ್ಲೆಲ್ಲ ತಿರುಗಾಡಿದರು.

ಲಾಹೋರ್‌ನಿಂದ ಕಾರಂತರು ಹಿಸ್ಸಾರಿಗೆ ಹೋದರು. ಅಲ್ಲಿ ಕೆಲವು ದಿನ ಇದ್ದು ಫಿರೋಜ್‌ಪುರಕ್ಕೆ ತೆರಳಿ ಲಾಹೋರ್‌ಗೆ ಮರಳಿದರು. ಬಳಿಕ ಝೀಲಂಗೆ ಭೇಟಿ ನೀಡಿದರು. ಅಲ್ಲಿನ ಆರ್ಯಸಮಾಜದವರು ವಿಶೇಷವಾಗಿ ಸತ್ಕರಿಸಿ ದೋಣಿಯಲ್ಲಿ ಜಲವಿಹಾರ ಮಾಡಿಸಿದರು. ಅಲ್ಲಿಂದ ಅವರು ರಾವಲ್ಪಿಂಡಿಯಲ್ಲಿದ್ದ ಆರ್ಯಸಮಾಜ ಕಾಲೇಜಿಗೆ ಹೋದರು. ರಾಮ್ದಿತ್ತ್‌ಮಲ್ ಎಂಬವರು ಆಗ ಆ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಕಾರಂತರಿಗೆ ಕಟ್ಟಡ ಕಟ್ಟಲು ಎಷ್ಟು ಹಣ ಬೇಕಾಗುತ್ತದೆಂದು ಕೇಳಿದರು. ಕಾರಂತರು ತನಗೆ ಒಂದು ಸಾವಿರ ರೂಪಾಯಿ ಸಾಕು ಎಂದರು. ರಾಮ್‌ದಿತ್‌ಮಲ್ ಕಾರಂತರನ್ನು ಕೆಲವು ಶ್ರೀಮಂತ ವ್ಯಾಪಾರಿಗಳಲ್ಲಿಗೆ ಜಟಕಾದಲ್ಲಿ ಕರೆದುಕೊಂಡುಹೋದರು. ಒಂದೇ ದಿನದಲ್ಲಿ ಒಂದು ಸಾವಿರ ರೂಪಾಯಿ ಸಂಗ್ರಹವಾಯಿತು. ಅಲ್ಲಿಂದ ಅಂಬಾಲಕ್ಕೆ ಹೋಗಿ ಅಲ್ಲಿನ ಆರ್ಯಸಮಾಜದ ಕೆಲವು ಮುಖಂಡರನ್ನು ಭೇಡಿ ಮಾಡಿದರು. ಮುಂದೆ ಅಮೃತಸರಕ್ಕೆ ಹೋಗಿ ಅಲ್ಲಿ ಒಬ್ಬ ವಕೀಲರ ಅತಿಥಿಯಾದರು. ವಕೀಲರು ಕಾರಂತರನ್ನು ಊರಲ್ಲಿಡೀಕಾರಿನಲ್ಲಿ ತಿರುಗಾಡಿಸಿದ್ದಲ್ಲದೆ ಜಲಿಯನ್ ವಾಲಾಬಾಗ್

ದುರಂತ ನಡೆದ ಸ್ಥಳವನ್ನು ತೋರಿಸಿದರು. ಅಲ್ಲಿ ಸಿಖ್ಖರ ಸುವರ್ಣ ದೇವಾಲಯ ಹಾಗೂ ಇತರ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿ ದೆಹಲಿಗೆ ಹೋದರು.

ಈ ತಿರುಗಾಟದಲ್ಲಿ ಅವರಿಗೆ ಮೂರು ಸಾವಿರ ರೂಪಾಯಿ ಸಂಗ್ರಹವಾಯಿತು. ಸ್ಥಳೀಯ ದಾನಿಗಳು ಕೊಟ್ಟ ಇತರ ಹಣವನ್ನು ಸೇರಿಸಿ ಮಂಗಳೂರಿನಲ್ಲಿ ಆರ್ಯಸಮಾಜ ಮಂದಿರವನ್ನು ಕಟ್ಟಿಸಿದರು. ಮುಂದೆ ಕಾರಂತರು ಮಂಗಳೂರು ಪುರಸಭೆಯ ಸದಸ್ಯರಾದಾಗ ಆ ರಸ್ತೆಗೆ ಆರ್ಯಸಮಾಜ ರಸ್ತೆ ಎಂದು ಹೆಸರು ಇಡಿಸಿದರು. ಸ್ವಾಮಿ ಶ್ರದ್ಧಾನಂದ ಅನಾಥಾಲಯವೂ ಅಲ್ಲಿ ಸ್ಥಾಪನೆ ಆಯಿತು. ಕೊನೆಯ ತನಕವೂ ಕಾರಂತರು ಈ ಅನಾಥಾಲಯಕ್ಕೆ ಪ್ರತಿವರ್ಷ ದೇಣಿಗೆ ಕೊಡುತ್ತಿದ್ದರು. ಮಂಗಳೂರಿನ ಆರ್ಯಸಮಾಜ ರಸ್ತೆ ನಗರದ ಹೃದಯಭಾಗದಲ್ಲಿದ್ದು ಇಂದಿಗೂ ಒಂದು ಪ್ರಮುಖ ರಸ್ತೆಯಾಗಿ ಉಳಿದುಕೊಂಡಿದೆ.

■

## ೩. ಕುಟುಂಬ ಜೀವನ

ಕೆ. ಆರ್. ಕಾರಂತರ ತಂದೆ ಶೇಷ ಕಾರಂತರಿಗೆ ಶಿಕ್ಷಣದ ಬಗ್ಗೆ ಅತೀವ ಪ್ರೀತಿ ಇದ್ದುದರಿಂದ ಮಕ್ಕಳಿಗೆಲ್ಲ ಒಳ್ಳೆಯ ಶಿಕ್ಷಣ ಕೊಡಿಸಿದ್ದರು. ಆರಂಭದಲ್ಲಿ ಅವರು ಅನುಕೂಲವಂತರಾಗಿರದಿದ್ದರೂ ಜವಳಿ ವ್ಯಾಪಾರದಿಂದಾಗಿ ಹಣಕಾಸು ಮಾಡಿ ಆಸ್ತಿವಂತರಾಗಿದ್ದರು. ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಮಂಗಳೂರಿನಲ್ಲಿ ಒಂದು ಮನೆ ಖರೀದಿಸಿ ಅಲ್ಲಿ ಒಬ್ಬ ಅಡುಗೆಯವನನ್ನೂ ನೇಮಿಸಿದ್ದರು.

ಶೇಷ ಕಾರಂತರ ಹತ್ತು ಮಂದಿ ಮಕ್ಕಳೂ ವಿದ್ಯಾವಂತರಾಗಿ ಅವರೆಲ್ಲರೂ ಒಂದೊಂದು ಕ್ಷೇತ್ರದಲ್ಲಿ ಅಚ್ಚಳಿಯದ ಸಾಧನೆ ಮಾಡಿದ್ದು ಒಂದು ಪುಣ್ಯ ವಿಶೇಷವೆಂದೇ ಹೇಳಬೇಕು.

ಶೇಷ ಕಾರಂತರ ದೊಡ್ಡ ಮಗ ಕೆ. ಆರ್. ಕಾರಂತ, ಬಿ.ಎ. ಮತ್ತು ಕಾನೂನು ಪದವಿ ಪಡೆದು ನ್ಯಾಯಕ್ಷೇತ್ರ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಹೆಸರು ಮಾಡಿದರೆ, ಎರಡನೆಯವರಾದ ಕೆ. ಲಕ್ಷ್ಮೀನಾರಾಯಣ ಕಾರಂತರು (ಕೋ. ಲ. ಕಾರಂತ, ಕೆ. ಎಲ್. ಕಾರಂತ ಎಂದೇ ಪ್ರಖ್ಯಾತರಾದರು) ಬಿ.ಎ. ಎಲ್. ಟಿ. ಪದವಿ ಪಡೆದು ಹೆಸರಾಂತ ವಿಜ್ಞಾನ ಶಿಕ್ಷಕರಾದರು. ಆಡಳಿತಗಾರರು, ತೋಟಗಾರಿಕಾ ಬೆಳೆಗಳು, ಹಣ್ಣು ಹಂಪಲು ಕೃಷಿಯಲ್ಲಿ ತೊಡಗಿಕೊಂಡು ಹಲವಾರು ಪ್ರಯೋಗಗಳನ್ನು ನಡೆಸಿದರು. ಇವರು ನಾಟಿ ವೈದ್ಯರೂ ಆಗಿದ್ದರು. ಪಿತ್ಥಕಾಮಾಲೆ ರೋಗದ ಔಷಧದಲ್ಲಿ ಜಿಲ್ಲೆಯಾದ್ಯಂತ ಪ್ರಸಿದ್ಧರಾಗಿದ್ದರು. ಸಾವಿರಾರು ಮಂದಿ ಅವರಿಂದ ಔಷಧಿ ಪಡೆದು ರೋಗಮುಕ್ತರಾಗಿದ್ದಾರೆ. ಕೋಟದ ಪ್ರಸಿದ್ಧ ವಿವೇಕ ಶಿಕ್ಷಣ ಸಂಸ್ಥೆಗಳಿಗಾಗಿ ದುಡಿದವರು, ಇವರು ಸಂಶೋಧಿಸಿದ 'ಬಾರಾಮಾಸ್' ಎಂಬ ಹಲಸಿನಗಿಡ ಲೋಕಪ್ರಸಿದ್ಧವಾಗಿದೆ. ವರ್ಷದ ಹನ್ನೆರಡು ತಿಂಗಳೂ ಹಲಸಿನಕಾಯಿ ಬಿಡುವ ವಿಶೇಷ ಗಿಡ ಇದಾಗಿದೆ. ಪೇರಳೆ, ಸಪೋಟ, ನಿಂಬೆ, ಮಾವು ಹೀಗೆ ನೂರಾರು ತೋಟಗಾರಿಕಾ ಬೆಳೆಗಳಿಗೆ ಕಸಿಕಟ್ಟಿ ನೂತನವಾದ ವಿಶೇಷ ತಳಿಗಳನ್ನು ಆವಿಷ್ಕರಿಸಿದ ಶ್ರೇಯಸ್ಸು ಇವರದಾಗಿದೆ. ಇವರ ಕುರಿತು ಸಾಹಿತಿ ವೈದೇಹಿಯವರು 'ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು' ಎಂಬ ಕೃತಿ

ರಚಿಸಿದ್ದಾರೆ (ಅಕ್ಷರ ಪ್ರಕಾಶನ, ಸಾಗರ). ಕೋ.ಲ. ಕಾರಂತ; ವ್ಯಕ್ತಿ ಸಾಧನೆ' ಎಂಬ ಪುಸ್ತಕ ರಚಿಸಿದ್ದಾರೆ. (ಕೆ. ಆರ್. ಕಾರಂತ ಮತ್ತು ಕೆ. ಎಲ್. ಕಾರಂತ ಇಬ್ಬರೂ ತಮ್ಮ ಸಹೋದರ ಕೆ. ಶಿವರಾಮ ಕಾರಂತರಿಗಿಂತ ಕಡಿಮೆಯಿಲ್ಲದ ಸಾಧನೆ ಮಾಡಿದ್ದಾರೆ. ಆದರೆ ಕ್ಷೇತ್ರ ಬೇರೆಯಾದುದರಿಂದ ಶಿವರಾಮ ಕಾರಂತರಷ್ಟು ಪ್ರಸಿದ್ಧಿ ಲಭ್ಯವಾಗಲಿಲ್ಲ, ಅಷ್ಟೆ).

ಶೇಷ ಕಾರಂತರ ಮೂರನೆಯ ಮಗ ಕೆ. ವಾಸುದೇವ ಕಾರಂತ, ಬಿ.ಎ. (ಆನರ್ಸ್) ಮಾಡಿ ಎಲ್. ಡಿ. ಓದಿದರು. ೧೯೪೪ರಲ್ಲಿ ಮದರಾಸು ಸರಕಾರದ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಉದ್ಯೋಗಕ್ಕೆ ಸೇರಿದರು. ಅನಂತರ ಪ್ರಮುಖ ಪರಿವೀಕ್ಷಕರು ಆದರು. ಆಧ್ಯಾತ್ಮಿಕ ಒಲವು ಬೆಳೆಸಿಕೊಂಡ ಇವರು ಹಲವಾರು ಕಡೆಗಳಲ್ಲಿ ಯೋಗ ಶಿಬಿರ ಏರ್ಪಡಿಸಿ ನೂರಾರು ಮಂದಿಗೆ ಯೋಗ ಕಲಿಸಿದ್ದಾರೆ. ಸಾಲಿಗ್ರಾಮದ ಶ್ರೀ ಗುರು ನರಸಿಂಹ ದೇವಸ್ಥಾನದ ಜೀರ್ಣೋದ್ಧಾರ ಮತ್ತು ನವೀಕರಣಕ್ಕೆ ಧಾರಾಳ ಸಹಾಯ ಮಾಡಿದರು. ಅನೇಕ ಆಧ್ಯಾತ್ಮಿಕ ಕೃತಿಗಳನ್ನು ರಚಿಸಿ, ಪ್ರಕಟಿಸಿ, ಜನರಿಗೆ ಪುಕ್ಕಟೆಯಾಗಿ ವಿತರಿಸುತ್ತಿದ್ದರು. ಜನರ ಉದ್ಧಾರಕ್ಕೆ ವಿಶೇಷವಾಗಿ ಶ್ರಮಿಸುತ್ತಿದ್ದರು. ನಿವೃತ್ತರಾಗುವ ಕಾಲಕ್ಕೆ ಇವರು ಮದರಾಸು ಸಂಸ್ಥಾನದ ಮುಖ್ಯ ಅಭಿಯಂತರ ( ಛಿಪ್ ಎಂಜಿನಿಯರ್) ಆದರು.

ಶೇಷ ಕಾರಂತರ ನಾಲ್ಕನೆಯ ಮಗ ಕೆ. ಶಂಕರನಾರಾಯಣ ಕಾರಂತ, ಬಿ. ಎ. ಹಾಗೂ ಕಾನೂನು ಪದವೀಧರರು. ಕುಂದಾಪುರ ಮತ್ತು ಮಂಗಳೂರಿನಲ್ಲಿ ವಕೀಲರಾಗಿ ಸೇವೆ ಸಲ್ಲಿಸಿದರು. ಒಳ್ಳೆಯ ಹೆಸರು ಸಂಪಾದಿಸಿದರು.

ಐದನೆಯವರು ಕೋಟ ಶಿವರಾಮ ಕಾರಂತ, ಕಡಲ ತಡಿಯ ಭಾರ್ಗವ. ನಡೆದಾಡುವ ವಿಶ್ವಕೋಶ ಎಂದೆಲ್ಲ ಜನರಿಂದ ಪ್ರೀತಿಯಿಂದ ಕರೆಸಿಕೊಂಡವರು. ಸಾಹಿತ್ಯ ಕ್ಷೇತ್ರದಲ್ಲಿ ಇವರ ಸಾಧನೆ–ಸಿದ್ಧಿ ಲೋಕ ವಿದಿತವಾಗಿದೆ. ಭಾರತೀಯ ಜ್ಞಾನಪೀಠ ಪ್ರಶಸ್ತಿಯೂ ಇವರಿಗೆ ಸಂದಿತು.

ಆರನೆಯವರು ಕೆ. ನರಸಿಂಹ ಕಾರಂತ, ಶಿಕ್ಷಕರಾಗಿ ದುಡಿದರು. ಪಶುಪಕ್ಷಿ, ಹೈನುಗಾರಿಕೆ, ಪರಿಸರ ಬಗೆಗೆ ವಿಶೇಷವಾಗಿ ಕಾಳಜಿ ವಹಿಸಿ ಕೆಲಸ ಮಾಡಿದರು. ಹೈನುಗಾರಿಕೆ ಎಂದರೆ ವಿಶೇಷ ಪ್ರೀತಿ. ದೇಸಿ ತಳಿ ಅಭಿವೃದ್ಧಿಗಾಗಿ ದುಡಿದರು. ಸಲೀಂ ಅಲಿಯವರಂತೆ ಪಕ್ಷಿ ತಜ್ಞ. ಯಾವುದೇ ಪಕ್ಷಿ, ಪ್ರಾಣಿ, ಕೀಟಗಳ ಬಗ್ಗೆ ಇವರಿಗೆ ತಲಸ್ಪರ್ಶಿಯಾದ ಜ್ಞಾನವಿತ್ತು.

ಏಳನೆಯವರು ಕೆ. ಶಿವಯ್ಯ ಕಾರಂತ, ಎಲೆಕ್ಟ್ರಿಕಲ್ ಎಂಜಿನಿಯರ್ ಆಗಿ ಕರ್ನಾಟಕ ವಿದ್ಯುತ್ ಇಲಾಖೆಯಲ್ಲಿ ದುಡಿದರು.

ಎಂಟನೆಯವರು ಕೆ. ಪರಮೇಶ್ವರ ಕಾರಂತ, ಔಷಧಿ ಶಾಸ್ತ್ರದಲ್ಲಿ ಉನ್ನತ ಪದವಿ ಗಳಿಸಿದರು. ಸ್ವಿಜರ್‌ಲ್ಯಾಂಡ್‌ನಲ್ಲಿ ಪಿ.ಹೆಚ್.ಡಿ. ಪಡೆದರು. ಅನಂತರ ಹೈದರಾಬಾದ್‌ನಲ್ಲಿ ಸ್ವಂತ 'ಕಾರಂತ ಫಾರ್ಮಾಸ್ಯುಟಿಕಲ್ ವರ್ಕ್ಸ್‌' ಎಂಬ ಕಂಪನಿ ತೆರೆದರು. ಇದರ ಉತ್ಪಾದನೆ ದೇಶ ವಿದೇಶಗಳಲ್ಲಿ ಪ್ರಸಿದ್ಧವಾಗಿದೆ.

ಒಂಭತ್ತನೆಯವರು ಶ್ರೀದೇವಿ, ಪುತ್ತೂರಿನಲ್ಲಿ ಹೆಸರಾಂತ ವಕೀಲರಾಗಿದ್ದ ಸದಾಶಿವ ರಾಯರನ್ನು ವರಿಸಿದರು. ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಲ್ಲದೆ 'ರಾಮಕೃಷ್ಣ ಸಮಾಜ ಅನಾಥ ಮಕ್ಕಳ ಸೇವಾಶ್ರಮ'ಕ್ಕಾಗಿ ಕೊನೆಯವರೆಗೂ ದುಡಿದರು.

ಹತ್ತನೆಯವರು ಯಮುನಾ, ಮಂಗಳೂರಿನಲ್ಲಿ ಪ್ರಸಿದ್ಧ ವಕೀಲರಾಗಿದ್ದ ಸೋಮೇಶ್ವರದ ವೆಂಕಟರಾವ್ ಎಂಬವರನ್ನು ವರಿಸಿದರು. ಇವರೂ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಕೆ. ಆರ್. ಕಾರಂತರ ಸಹೋದರ, ಸಹೋದರಿಯರೆಲ್ಲ ಉನ್ನತ ವ್ಯಾಸಂಗ ಮಾಡಿದವರು. ಆ ಕಾಲದಲ್ಲಿ ಸಮಾಜದಲ್ಲಿ ಗೌರವಾನ್ವಿತ ಹುದ್ದೆಯಾಗಿದ್ದ ವಕೀಲಿ ಅಥವಾ ಅಧ್ಯಾಪಕ ಹುದ್ದೆ ಕೈಗೊಂಡರು.

ಕೆ. ಆರ್. ಕಾರಂತರು ಚಿಕ್ಕಂದಿನಿಂದಲೂ ಕಲಿಯುವುದಕ್ಕೆ ತುಂಬ ಚೂಟಿಯಾಗಿದ್ದರು. ಒಂದು ಸಾರಿ ಓದಿದರೆ ಅವರ ಮನಸ್ಸಿನಲ್ಲಿ ಅಚ್ಚೊತ್ತಿಬಿಡುತ್ತಿತ್ತು. ಅವರು ಶಾಲಾ ಕಲಿಕೆಗೆ ಎಷ್ಟು ಪ್ರಾಮುಖ್ಯ ಕೊಟ್ಟರೋ ಪಠ್ಯೇತರ ಚಟುವಟಿಕೆಗಳಿಗೂ ಅಷ್ಟೇ ಪ್ರಾಮುಖ್ಯ ಕೊಟ್ಟರು. ಹಾಗಾಗಿ ಮಹತ್ವವಾದುದನ್ನು ಸಾಧಿಸಲು ಅವರಿಗೆ ಸಾಧ್ಯವಾಯಿತು ಎಂದು ಕೆ. ಆರ್. ಕಾರಂತರ ಶಿಷ್ಯ ಹಾಗೂ ಅವರನ್ನು ಹತ್ತಿರದಿಂದ ಬಲ್ಲ ಜಿಲ್ಲಾ ನ್ಯಾಯಾಧೀಶರೂ ಆಗಿದ್ದ-ಬರಹಗಾರ ಸೇವ ನಮಿರಾಜ ಮಲ್ಲ ಒಂದೆಡೆ ಬರೆಯುತ್ತಾರೆ.

ಶಾಲಾ ಕಲಿಕೆಯ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಸಮಾನ ಇಂಬು ಕೊಡುವ ಮನೋಭಾವ ಅವರಿಗೆ ತಂದೆಯಿಂದ ಬಳುವಳಿಯಾಗಿ ಬಂದುದು. ಶೇಷ ಕಾರಂತರು ತಾವು ಸ್ಥಾಪಿಸಿದ ಗಿಳಿಯಾರಿನ ಶ್ರೀ ಶಾಂಭವೀ ವಿದ್ಯಾದಾಯಿನೀ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ಸರ್ವಾಂಗೀಣ ವಿಕಾಸವಾಗುವ ದೃಷ್ಟಿಯಿಂದ ನಾಟಕಾಭಿನಯ, ನೃತ್ಯ ಮೊದಲಾದವುಗಳಿಗೆ ಏರ್ಪಾಡು ಮಾಡಿದ್ದರು. ಶಾಲೆಯ ಉತ್ತರ ಭಾಗಕ್ಕೆ ತಾಗಿಕೊಂಡಂತಿದ್ದ ಇಪ್ಪತ್ತು ಸೆಂಟ್ಸ್ ಜಾಗವನ್ನು ಖರೀದಿಸಿ ಅಲ್ಲಿ ಸಭಾಭವನ ನಿರ್ಮಿಸಿದ್ದರು. ಶಾಲಾ ಮಕ್ಕಳ ದೈಹಿಕ ಬೆಳವಣಿಗೆಗೆ ವ್ಯಾಯಾಮ, ಈಜು ಮೊದಲಾದವುಗಳಿಗೆ ಏರ್ಪಾಡು ಮಾಡಿದ್ದರು. ವ್ಯಾಯಾಮ ಶಿಕ್ಷಕರನ್ನು

ನಿಯಮಿಸಿ ಕೊಂಡಿದ್ದರು. ಸಾಹಿತ್ಯದ ಬಗ್ಗೆ ಒಲವು ಬೆಳೆಸಲು ಸಹಕಾರಿಯಾಗುವಂತೆ ಆರ್. ಆರ್. ಡಿಗ್ಗಾವಿ ಎಂಬ ಸಾಹಿತ್ಯಪ್ರಿಯ ಶಿಕ್ಷಕರನ್ನು ಪ್ರಚೋದಿಸುತ್ತಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ, ಮಗ ಶಿವರಾಮ ಕಾರಂತ ಪುತ್ತೂರಿನಲ್ಲಿ ನಿಯಮಿತವಾಗಿ ನಡೆಸಿಕೊಂಡು ಬರುತ್ತಿದ್ದ ದಸರಾ ಕಾರ್ಯಕ್ರಮಕ್ಕೆ ನಾಡಿನ ಬೇರೆ ಬೇರೆ ಭಾಗಗಳಿಂದ ಬರುತ್ತಿದ್ದ ಹಿರಿಯ ಸಾಹಿತಿಗಳನ್ನು ತಮ್ಮೂರಿಗೂ ಬರಮಾಡಿಕೊಂಡು ವಾಚನ, ವ್ಯಾಖ್ಯಾನ, ಉಪನ್ಯಾಸ ಮೊದಲಾದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವಂತೆ ಏರ್ಪಾಡು ಮಾಡಿದ್ದರು. ಇಂತಹ ಸಂದರ್ಭಗಳಲ್ಲೆಲ್ಲ ಎಲ್ಲರೂ ಒಂದೊಂದು ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಕೆಲಸ ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು. ಇಂತಹ ಕಡೆಗಳಲ್ಲಿ ಮನೆಯ ಹಿರಿಯ ಮಗನಾದ ಕೆ. ಆರ್. ಕಾರಂತರದೇ ಬಹುಪಾಲು ಜವಾಬ್ದಾರಿ ಇರುತ್ತಿತ್ತು.

ರಾಮಕೃಷ್ಣ ಕಾರಂತರು ೧೯೧೭ರಲ್ಲಿ ರಮಾ ಎಂಬವರ ಕೈಹಿಡಿದರು. ಅವರಿಗೆ ಐದು ಮಂದಿ ಗಂಡು ಹಾಗೂ ಐದು ಮಂದಿ ಹೆಣ್ಣು ಮಕ್ಕಳು ಹುಟ್ಟಿದರು. ದೊಡ್ಡ ಮಗಳ ಹೆಸರು ಶಾಂತಿ, ಈಕೆಯ ನಂತರ ಕ್ರಮವಾಗಿ ವಸಂತಿ, ಸುಮತಿ, ರಮಾನಂದ, ದಯಾನಂದ, ಶಕುಂತಲಾ, ಭಾಸ್ಕರ, ಜಗದೀಶ, ವಿಜಯಲಕ್ಷ್ಮೀ ಮತ್ತು ಕಮಲನಯನ ಎಂಬವರು ಹುಟ್ಟಿದರು.

ಕೊನೆಯ ಮಗನಿಗೆ 'ಕಮಲನಯನ' ಎಂದು ಹೆಸರಿಟ್ಟಿರುವ ಬಗೆ ಕುತೂಹಲದಾಯಕವಾಗಿದೆ. ೧೯೪೨ರಲ್ಲಿ 'ಚಲೇಜಾವ್' ಚಳವಳಿಯಲ್ಲಿ ಭಾಗವಹಿಸಿ ಉಗ್ರ ಪ್ರತಿಭಟನೆ ನಡೆಸಿದ ರಾಮಕೃಷ್ಣ ಕಾರಂತರನ್ನು ಬ್ರಿಟಿಷ್ ಸರಕಾರವು ಬಂಧಿಸಿ ನೆಲ್ಲೂರು ಜೈಲಿನಲ್ಲಿಟ್ಟಿದ್ದರಂತೆ. ಬಜಾಜ್ ಇಂಡಸ್ಟ್ರೀಸ್‌ನ ಮಾಲೀಕರಾದ ಕಮಲನಯನ ಬಜಾಜ್‌ರನ್ನೂ ಅದೇ ಜೈಲಿನಲ್ಲಿ ಇಟ್ಟಿತ್ತಂತೆ. ಯೋಗಾಯೋಗವೋ ಎಂಬಂತೆ ಇಬ್ಬರನ್ನೂ ಒಂದೇ 'ಸೆಲ್'ನಲ್ಲಿ ಇಡಲಾಯಿತು. ಅವರನ್ನು ಜೈಲಿಗೆ ಕಳಿಸುವಾಗ ಇಬ್ಬರ ಹೆಂಡತಿಯರೂ ಗರ್ಭಿಣಿಯಾಗಿದ್ದರಂತೆ. ಜೈಲಿನಲ್ಲಿ ಸ್ನೇಹಿತರಾದ ಇಬ್ಬರೂ ತಮಗೆ ಗಂಡುಮಕ್ಕಳು ಹುಟ್ಟಿದರೆ ತಮ್ಮ ಜೈಲುವಾಸದ ನೆನಪಿಗಾಗಿ ಪರಸ್ಪರರ ಹೆಸರನ್ನು ಇಟ್ಟುಕೊಳ್ಳುವುದಾಗಿ ಮಾತಾಡಿಕೊಂಡಿದ್ದರಂತೆ. ಇಬ್ಬರಿಗೂ ಗಂಡು ಮಕ್ಕಳೇ ಹುಟ್ಟಿದರು! ಅದರಂತೆ ಕೆ. ಆರ್. ಕಾರಂತರು ತಮ್ಮ ಮಗನಿಗೆ 'ಕಮಲನಯನ' ಎಂದೂ ಕಮಲನಯನ ಬಜಾಜ್‌ರು ತಮ್ಮ ಮಗನಿಗೆ 'ರಾಮಕೃಷ್ಣ' ಎಂದೂ ನಾಮಕರಣ ಮಾಡಿದರಂತೆ!

ಕೆ. ಆರ್.ಕಾರಂತರ ದೊಡ್ಡ ಮಗಳು ಶಾಂತಿಯನ್ನು ಮಂಗಳೂರಿನಲ್ಲಿ ಪ್ರಸಿದ್ಧ ವಕೀಲರಾಗಿದ್ದ ಕುಚ್ಚೂರು ಬಾಬುರಾವ್ ಎಂಬರಿಗೆ ಮದುವೆ ಮಾಡಿಕೊಡಲಾಯಿತು. ಹೆಣ್ಣು ಮಕ್ಕಳಲ್ಲಿ ಈ ವಯೋವೃದ್ಧೆ ಮಾತ್ರ (ವಯಸ್ಸು ೯೩) ಈಗ ಬದುಕಿ

ಉಳಿದಿದ್ದಾರೆ. ಮಂಗಳೂರಿನಲ್ಲಿ ಮಗನ ಜೊತೆಗೆ ವಾಸಿಸುತ್ತಿದ್ದಾರೆ. ಓಡಾಡಲು ಆಗುವುದಿಲ್ಲ. ಮಲಗಿದ ಲ್ಲಿಂದಲೇ ತಂದೆಯ ಭವ್ಯ ವ್ಯಕ್ತಿತ್ವವನ್ನು, ರಾಜನಂತೆ ಬಾಳಿ ಬೆಳಗಿದ ಪರ್ವತೋಪಮ ವ್ಯಕ್ತಿಯ ನಡೆನುಡಿಯನ್ನು ವಿವರಿಸುತ್ತಾರೆ. ಶಾಂತಿಯವರ ಮಗ ಸುರೇಶರಾವ್ (ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆಗಿ ಪ್ರಸ್ತುತ ನಿವೃತ್ತ ಜೀವನ ಸಾಗಿಸುತ್ತಿದ್ದಾರೆ) ಅಜ್ಜನೊಂದಿಗೆ ಕಳೆದ ದಿನಗಳನ್ನು, ಅವರ ನ್ಯಾಯ ನಿಷ್ಠುರತೆಯನ್ನು, ಕಠಿಣ ದುಡಿಮೆಯನ್ನು, ಸಮಯ ಪರಿಪಾಲನೆಯನ್ನು ಸತ್ಯಸಂಧತೆಯನ್ನು, ಎಲ್ಲ ಅನುಕೂಲತೆಗಳಿದ್ದರೂ ಸರಳವಾಗಿ ಜೀವಿಸುತ್ತಿದ್ದ ಕ್ರಮವನ್ನು ನೆನಪಿಸಿಕೊಳ್ಳುತ್ತಾರೆ.

ಕೆ. ಆರ್. ಕಾರಂತರ ಹಿರಿಯ ಮಗ ರಮಾನಂದ ತನ್ನ ಮಕ್ಕಳೊಂದಿಗೆ ಅಮೆರಿಕಾದಲ್ಲಿ ಇಳಿ ಜೀವನವನ್ನು ಸಾಗಿಸುತ್ತಿದ್ದಾರೆ. ಎರಡನೆಯ ಮಗ ದಯಾನಂದ ಬೆಂಗಳೂರಿನಲ್ಲಿ ತಂದೆಯೊಂದಿಗೇ ನ್ಯಾಯವಾದಿಯಾಗಿದ್ದು ಒಳ್ಳೆಯ ಹೆಸರು ಸಂಪಾದಿಸಿದ್ದರು. ೧೯೯೮ರಲ್ಲಿ ನಡೆದ ಅಪಘಾತವೊಂದರಲ್ಲಿ ಅವರು ತೀರಿಕೊಂಡರು. ಅಜ್ಜನ ಮತ್ತು ತಂದೆಯ ಹಾದಿಯಲ್ಲೇ ಸಾಗಿರುವ ಮೊಮ್ಮಗ ಸಚಿನ್ ಕಾರಂತ ಕೂಡ ಬೆಂಗಳೂರಿನಲ್ಲಿ ನ್ಯಾಯವಾದಿಯಾಗಿ ದುಡಿಯುತ್ತಿದ್ದಾರೆ.

ಕೆ. ಆರ್. ಕಾರಂತರ ಮೂರನೆಯ ಮಗ ಭಾಸ್ಕರ ಕಾರಂತ ಮದರಾಸಿನ ಕಂಪೆನಿಯಲ್ಲಿ ಹಿರಿಯ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿ, ನಿವೃತ್ತಿಯ ನಂತರ ತಮ್ಮ ಪತ್ನಿಯ ಹುಟ್ಟೂರಾದ ಕಾರ್ಕಳದಲ್ಲಿ ಪತ್ನಿಯೊಂದಿಗೆ ನೆಲೆನಿಂತಿದ್ದಾರೆ. ಇವರ ಮಗಳು ಎಂಜಿನಿಯರ್ ಆಗಿ ಹೈದರಾಬಾದ್‌ನಲ್ಲೂ ಮಗ ಎಂಜಿನಿಯರ್ ಆಗಿ ಅಮೆರಿಕಾದಲ್ಲೂ ಕೆಲಸ ಮಾಡುತ್ತಿದ್ದಾರೆ. ಕೆ. ಆರ್. ಕಾರಂತರ ಉಳಿದ ಮಕ್ಕಳು ಈಗ ಬದುಕಿಲ್ಲ.

■

## ೪. ಪ್ರೇರಣೆ–ಪ್ರಭಾವ

ಕೆ. ಆರ್. ಕಾರಂತರು ತಮ್ಮ ಆತ್ಮಕಥೆಯನ್ನು ಬರೆಯಲು ಪ್ರಯತ್ನಿಸಿದರು. ಕೆಲಭಾಗಗಳನ್ನು ಬರೆದಿದ್ದರು ಎಂದು ತಿಳಿದುಬರುತ್ತದೆ. ಅದನ್ನು ಪಡೆಯಲು ಈ ಲೇಖಕ ಪ್ರಯತ್ನಿಸಿ ಸಫಲನಾಗಲಿಲ್ಲ. ಅದೆಲ್ಲಿಯೋ ಕಣ್ಮರೆಯಾಗಿರಬೇಕು ಎಂದು ಅವರ ಕುಟುಂಬವರ್ಗದವರು ಹೇಳುತ್ತಾರೆ.

ಅವರ ಕುರಿತಾದ ಸ್ಮರಣ ಸಂಚಿಕೆಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಅವರ ಆತ್ಮವೃತ್ತದ ಅಧ್ಯಾಯವೊಂದು ಸೇರಿಕೊಂಡಿದೆ. ಈ ಕೃತಿಯ ಆಶಯಕ್ಕೆ ತಕ್ಕದಷ್ಟು ಭಾಗವನ್ನು ಅದರಿಂದ ಆರಿಸಿಕೊಳ್ಳಲಾಗಿದೆ.

೧೯೦೪-೧೯೧೧ರ ಅವಧಿಯಲ್ಲಿ ಕೆ. ಆರ್. ಕಾರಂತರು ಕುಂದಾಪುರದ ಬೋರ್ಡ್ ಹೈಸ್ಕೂಲ್‌ನ ವಿದ್ಯಾರ್ಥಿಯಾಗಿದ್ದರು. ಆಗ ಆಂಗ್ಲ ದಿನಪತ್ರಿಕೆಗಳನ್ನು ಓದುವ ಹವ್ಯಾಸ ಅವರಿಗೆ ಬೆಳೆಯಿತು. ಆ ಕಾಲಕ್ಕೆ ದೇಶಾಭಿಮಾನಿಗಳಾಗಿದ್ದ ರಮಾನಂದ ಚಟರ್ಜಿಯವರು 'ಮಾಡರ್ನ್ ರಿವ್ಯೂ' ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಅದರಲ್ಲಿ ರಾಷ್ಟ್ರಾಭಿಮಾನವನ್ನು ಕೆರಳಿಸುವ ಲೇಖನಗಳು, ಸ್ವಾತಂತ್ರ್ಯ ಹೋರಾಟದ ವರದಿಗಳು ಪ್ರಕಟವಾಗುತ್ತಿದ್ದವು. ಅವುಗಳನ್ನೆಲ್ಲ ಓದಿ ಬಾಲಕ ರಾಮಕೃಷ್ಣ ಕಾರಂತರಿಗೆ ರೋಮಾಂಚನವಾಗುತ್ತಿತ್ತು. ಈ ರಾಷ್ಟ್ರಕ್ಕಾಗಿ ಏನಾದರೂ ಮಾಡಬೇಕೆಂಬ ತುಡಿತ ಆಗ ಹುಟ್ಟಿಕೊಂಡಿತು.

ಅನಂತರ ಮಂಗಳೂರು, ಮದರಾಸು ಮತ್ತು ಬೆಂಗಳೂರಿನಲ್ಲಿ ಓದುತ್ತಿದ್ದಾಗ ರಾಜಕೀಯ ಹೋರಾಟದ ದರ್ಶನ ಇನ್ನೂ ಹತ್ತಿರದಿಂದ ಆಯಿತು. ಪರದಾಸ್ಯದಲ್ಲಿ ನರಳುತ್ತಿದ್ದ ಭಾರತದ ನೋವಿನ ದರ್ಶನವಾಯಿತು.

ಈ ಮಧ್ಯೆ, ಸುಮಾರು ೧೯೧೪ರ ಅವಧಿಯಲ್ಲಿ ಮದರಾಸಿನ ಪ್ರಸಿದ್ಧ ನ್ಯಾಯವಾದಿ ಹಾಗೂ ಹೋರಾಟಗಾರ ಜಿ. ಎ. ನಟೇಶನ್ ಎಂಬವರ ಕಚೇರಿಯಲ್ಲಿ – ಆಗ ತಾನೇ ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿ ಬಂದಿದ್ದ ಮಹಾತ್ಮ ಗಾಂಧಿಯವರನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. "ನಟೇಶನ್ ಜೊತೆ ನಡೆಸಿದ ಸಂಭಾಷಣೆಯನ್ನು ಕೇಳಿಸಿಕೊಂಡೆ, ಇಲ್ಲಿಂದ ಮುಂದೆ ಸುಮಾರಾಗಿ ನನ್ನ ಹಾದಿ ಸ್ಪಷ್ಟವಾಗತೊಡಗಿತು" ಎಂದು ಕಾರಂತರು ಹೇಳಿಕೊಂಡಿದ್ದಾರೆ.

ಮುಂದೆ ಮುಂಬೈಯಲ್ಲಿ – ಮೊದಲ ಮಹಾಯುದ್ಧದ ಅವಧಿಯಲ್ಲಿ ಕಾನೂನು ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಅನೇಕ ಪ್ರಮುಖ ರಾಜಕಾರಣಿಗಳ ಭಾಷಣ ಕೇಳಿದರು. ೧೯೧೭ ಅಥವಾ ೧೯೧೮ರ ಒಂದು ಬೇಸಿಗೆಯಲ್ಲಿ ಚೌಪಾಟಿಯಲ್ಲಿ ಒಂದು ಕಾಂಗ್ರೆಸ್ ಪರಿಷತ್ತು ನಡೆದಾಗ ಕಾರಂತರು ಅದಕ್ಕೆ ಹಾಜರಾದರು. ಆ ಸಭೆ ಒಂದು ರಾತ್ರಿ ಹೊತ್ತು ನಡೆಯಿತು. ನಮ್ಮ ದೇಶದಿಂದ ಇಂಗ್ಲೆಂಡ್‌ಗೆ ರಾಜಕೀಯ ಸ್ಥಿತಿ ಕುರಿತು ಚರ್ಚಿಸಲು ಒಂದು ನಿಯೋಗ ಕೊಂಡೊಯ್ಯುವ ವಿಚಾರವಾಗಿ ಮಹತ್ವದ ತೀರ್ಮಾನ ಆಯಿತು.

ಮುಂಬೈಯಲ್ಲಿದ್ದಾಗ ಪ್ರತಿದಿನದ ರಾಜಕೀಯ ಹೋರಾಟದ ಪ್ರಥಮ ದರ್ಶನ ದೊರೆಯುತ್ತಿತ್ತು. ಅಸ್ಖಲಿತ ಭಾಷಣಕಾರರಾಗಿದ್ದ ಬಿ.ಜಿ. ಹಾರ್ನಿಮನ್ ಅವರ ಭಾಷಣಗಳನ್ನು ಕೇಳುತ್ತಿದ್ದರು. 'ಬಾಂಬೆ ಕ್ರಾನಿಕಲ್' ಎಂಬ ಪತ್ರಿಕೆಯನ್ನು ಸಂಪಾದಕರಾಗಿ ಅವರು ನಡೆಸುತ್ತಿದ್ದರು. ಅದರಲ್ಲಿ ಉಜ್ವಲ ದೇಶಾಭಿಮಾನದ ಲೇಖನಗಳು, ಬರಹಗಳು ಪ್ರಕಟವಾಗುತ್ತಿದ್ದವು. ಅವುಗಳನ್ನು ಓದುವುದೇ ಕಾರಂತರಿಗೆ ಖುಷಿ ತರುವ ವಿಚಾರವಾಗಿತ್ತು. ಆಗ ಮುಂಬೈಯಲ್ಲಿ ಲಾ ಪ್ರಾಕ್ಟೀಸ್ ಮಾಡುತ್ತಿದ್ದ ಮಹಮ್ಮದಾಲಿ ಜಿನ್ನಾ ಅವರು ಹೈಕೋರ್ಟ್‌ನಲ್ಲಿ ನಡೆಸುತ್ತಿದ್ದ ವಾದ ಪ್ರತಿವಾದಗಳನ್ನು ಕಾರಂತರು ಶ್ರದ್ಧೆಯಿಂದ ವೀಕ್ಷಿಸುತ್ತಿದ್ದರು. ಶ್ರೀಮತಿ ಆ್ಯನಿಬೆಸೆಂಟರು ಆರಂಭಿಸಿದ ಹೋಮ್‌ರೂಲ್ ಲೀಗಿನ ನಾಯಕ ಜಮ್ನಾದಾಸ್ ದ್ವಾರಕಾದಾಸ್ ಅವರ ಮೈನವಿರೇಳಿಸುವ ಭಾಷಣಗಳನ್ನು ಆಲಿಸುತ್ತಿದ್ದರು. ರಾಷ್ಟ್ರಾಭಿಮಾನ, ಹೋರಾಟ, ರಾಜಕೀಯ ಚಳುವಳಿಗಳು ಉತ್ತುಂಗ ಸ್ಥಿತಿಯಲ್ಲಿದ್ದ ಆಗಿನ ಪರಿಸ್ಥಿತಿಯಲ್ಲಿ ಕೆ. ಆರ್. ಕಾರಂತರೊಳಗೆ ಒಬ್ಬ ರಾಷ್ಟ್ರಭಕ್ತ ವ್ಯಕ್ತಿಯ ರೂಪೀಕರಣ ನಡೆಯುತ್ತಿತ್ತು. ಮಹಾತ್ಮ ಗಾಂಧೀಜಿಯವರು ರಾಜಕೀಯ ರಂಗಸ್ಥಳಕ್ಕೆ ಧುಮುಕಿ ಅದರ ನಾಯಕತ್ವ ವಹಿಸುವುದರ ಹಿಂದಿನ ಎರಡು ವರ್ಷಗಳು ಇಡೀ ದೇಶದ ರಾಜಕೀಯ ಚಳವಳಿಯಲ್ಲಿ ಅತ್ಯಂತ ಪ್ರಮುಖ ಘಟ್ಟವಾಗಿತ್ತು. ವೈಯಕ್ತಿಕವಾಗಿ ಕಾರಂತರ ಜೀವನದಲ್ಲೂ ಅದರ ಪ್ರಭಾವ ದಟ್ಟವಾಯಿತು.

೧೯೧೯ರಲ್ಲಿ ಕಾರಂತರು ಮಂಗಳೂರಿನಲ್ಲಿ ವಕೀಲಿ ವೃತ್ತಿ ಆರಂಭಿಸಿದ ಹೊಸದರಲ್ಲಿ ಉತ್ತರ ಕರ್ನಾಟಕದ ಪ್ರಸಿದ್ಧ ಕಾಂಗ್ರೆಸ್ ನಾಯಕರು ಮಂಗಳೂರಿನಲ್ಲಿ ಪಕ್ಷಪ್ರಚಾರದ ಮತ್ತು ರಾಷ್ಟ್ರಭಕ್ತಿಯ ಉದ್ಬೋಧಕ ಭಾಷಣ ಮಾಡಿ ಹೋದರು. ಅವರಲ್ಲಿ ಶ್ರೀನಿವಾಸರಾವ್ ಕೌಜಲಗಿ, ಕೀರ್ತನಕಾರರಾದ ಜಯರಾಯಾಚಾರ್ಯ ಕೊಪ್ಪಳ, ಮುದವೀಡು ಕೃಷ್ಣರಾವ್ ಮೊದಲಾದವರನ್ನು ಕಾರಂತರು ನೆನಪಿಸುತ್ತಾರೆ. ಇವರುಗಳ ಭಾಷಣದಿಂದಲೂ ಕಾರಂತರು ಉದ್ದೀಪಿತರಾದರು.

೧೯೨೦ರಲ್ಲಿ ಗಾಂಧೀಜಿ ಶೌಕತ್ ಅಲಿಯವರೊಂದಿಗೆ ಮಂಗಳೂರಿಗೆ

ಬಂದಿದ್ದರು. ಬಂದರು ಪ್ರದೇಶದಲ್ಲಿ ವಾಸಿಸುತ್ತಿದ್ದ ಮಾವ್‌ಜೀಶೇಟ್ ಎಂಬ ಗುಜರಾತಿ ವ್ಯಾಪಾರಸ್ಥರೊಬ್ಬರ ಮನೆಯಲ್ಲಿ ಅವರು ಉಳಿದುಕೊಂಡಿದ್ದರು. ಅವರ ಮನೆಯಲ್ಲಿ ನಡೆದ ಒಂದು ಪುಟ್ಟ ಭಾಷಣ ಮತ್ತು ಸೆಂಟ್ರಲ್ ಮೈದಾನದಲ್ಲಿ ನಡೆದ ಭಾರೀ ಸಭೆ ಗಾಂಧೀಜಿಯವರ ಮುಖ್ಯ ಕಾರ್ಯಕ್ರಮಗಳಾಗಿದ್ದವು. ಕಾರಂತರು ಆ ಎರಡೂ ಸಭೆಗಳಿಗೆ ಹೋದರು. ಗಾಂಧೀಜಿಯವರ ಜೊತೆ ಮಾತುಕತೆಯಾಡಿದರು.

ಈ ಎಲ್ಲದರ ಪರಿಣಾಮವಾಗಿ ಕೆ. ಆರ್. ಕಾರಂತರಿಗೆ ರಾಜಕೀಯದ ಕಡೆಗೆ ಒಲವು ಬಲವತ್ತರವಾಗತೊಡಗಿತು. ೧೯೨೧ರಲ್ಲಿ ಅಹ್ಮದಾಬಾದ್‌ನಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಪಾಲುಗೊಂಡರು. ಅಲ್ಲಿ ಮಂಜೂರಾದ ಠರಾವುಗಳಲ್ಲಿ ತ್ರಿಮುಖ ಬಹಿಷ್ಕಾರವು ಒಂದಾಗಿತ್ತು. ಬ್ರಿಟಿಷ್ ಆಡಳಿತವನ್ನು ಬಹಿಷ್ಕರಿಸುವುದು, ಬ್ರಿಟಿಷರ ಕಂಪನಿ ಬಟ್ಟೆಯನ್ನು ಬಹಿಷ್ಕರಿಸುವುದು ಮತ್ತು ಬ್ರಿಟಿಷ ಆಡಳಿತಕ್ಕೆ ಪೂರಕವಾಗಿ ತಾವು ತಾವು ಮಾಡುವ ವೃತ್ತಿಯನ್ನು ಬಹಿಸ್ಕರಿಸುವುದು – ಇವೇ ಆ ಮೂರು ಬಹಿಷ್ಕಾರಗಳಾಗಿದ್ದವು. ಅದರಂತೆ, ಕಾರಂತರು ಕೆಲಕಾಲ ವಕೀಲಿ ವೃತ್ತಿಯನ್ನು ಬಹಿಷ್ಕರಿಸಿದರು. ಮಂಗಳೂರಿನಲ್ಲಿ ಕಾರ್ನಾಡ್ ಸದಾಶಿವರಾಯರು, ಕಾಸರಗೋಡಿನಲ್ಲಿ ಶೆಡ್ಡೆ ಲಕ್ಷ್ಮಣರಾಯರು, ಕಾರ್ಕಳದಲ್ಲಿ ಪದ್ಮನಾಭ ಕಾಮತರು, ಕುಂದಾಪುರದಲ್ಲಿ ಮಹಾಬಲಹೊಳ್ಳರು ಇವರೆಲ್ಲ ಆಗ ವಕೀಲಿ ಬಿಟ್ಟವರಲ್ಲಿ ಪ್ರಮುಖರು.

೧೯೨೨ರ ಫೆಬ್ರವರಿಯಲ್ಲಿ ಮಂಗಳೂರಿನ ಜೈನ್ ಹಾಸ್ಟೆಲ್ ಬಳಿ ಕಾಂಗ್ರೆಸ್‌ನ ಕರ್ನಾಟಕ ಪ್ರಾಂತೀಯ ಪರಿಷತ್ತಿನ ಸಭೆ ನಡೆಯಿತು. ಸರೋಜಿನಿ ನಾಯ್ಡು ಅದರ ಅಧ್ಯಕ್ಷರಾಗಿದ್ದರು. ಆ ಕಾಲಕ್ಕೆ ಅದು ಭಾರೀ ದೊಡ್ಡದಾದ ಕಾರ್ಯಕ್ರಮವಾಗಿತ್ತು. ಈ ಪರಿಷತ್ತಿನ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಪ್ರಚಾರ ಬಹಳ ಬಿರುಸಿನಿಂದ ಸಾಗಿತ್ತು

ಈ ಸಂದರ್ಭದಲ್ಲಿ ಕೆ. ಆರ್. ಕಾರಂತರ ತಮ್ಮ ಶಿವರಾಮ ಕಾರಂತರು ಕೂಡ ಕಾಲೇಜು ಶಿಕ್ಷಣ ತ್ಯಜಿಸಿ ಸ್ವಾತಂತ್ರ್ಯಾಂದೋಲನಕ್ಕೆ ಧುಮುಕಿದರು. ಶಿವರಾಮ ಕಾರಂತರು ಕುಂದಾಪುರದಲ್ಲಿ ಖಾದೀ ಭಂಡಾರ ತೆರೆದರು. ಮಂಗಳೂರಿನ ವ್ಯಾಪಾರಸ್ಥರು ಆ ಕಾಲದಲ್ಲಿ ಚಳವಳಿಗೆ ಬೆಂಬಲವಾಗಿ ನಿಂತರು. ವ್ಯಾಪಾರಿಗಳ ಪೈಕಿ ನಾರಾಯಣ ಚಡ್ಡು ಬಾಳಿಗಾ ಎಂಬವರೊಬ್ಬರು ಚಳವಳಿಗೆ ಪೂರಕವಾಗಿ ಅಲ್ಲಲ್ಲಿ ಸಾರ್ವಜನಿಕ ಸಮಾರಂಭಗಳಲ್ಲಿ ಭಾಷಣ ಮಾಡುತ್ತಿದ್ದರು.

೧೯೨೪ರಲ್ಲಿ ಬೆಳಗಾವಿಯಲ್ಲಿ ಜರುಗಿದ ಕಾಂಗ್ರೆಸ್ ಮಹಾ ಅಧಿವೇಶನದಲ್ಲಿ

ಕಾರಂತರು ಭಾಗವಹಿಸಿದರು. ಅದೇ ಸಮಯದಲ್ಲಿ ಇಪ್ಪತ್ತೆಂಟು ಮಂದಿ ಸದಸ್ಯ ಸಂಖ್ಯಾಬಲವಿದ್ದ ಮಂಗಳೂರು ಪುರಸಭೆಯಲ್ಲಿ ಕಾರಂತರೂ ಸೇರಿದಂತೆ ಒಟ್ಟು ಏಳು ಮಂದಿ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದರು. ಪುರಸಭೆಯಲ್ಲಿ ವ್ಯಾಪಿಸಿದ್ದ ಭ್ರಷ್ಟಾಚಾರವನ್ನು ಹೋಗಲಾಡಿಸಲು ಅವರು ಕಾರಣಕರ್ತರಾದರು. ಇದರಿಂದಾಗಿ ಕಾಂಗ್ರೆಸ್ ಪಕ್ಷಕ್ಕೂ ಸದಸ್ಯರಿಗೂ ಒಳ್ಳೆಯ ಹೆಸರು ಬಂತು. ಮುಂದೆ ಪ್ರತಿ ಮೂರು ವರ್ಷಕ್ಕೊಮ್ಮೆ ಚುನಾವಣೆ ನಡೆದಾಗ ಕಾರಂತರೂ ಸೇರಿದಂತೆ ಹೆಚ್ಚು ಹೆಚ್ಚು ಮಂದಿ ಕಾಂಗ್ರೆಸ್ ಉಮೇದ್ವಾರರೇ ಗೆದ್ದು ಬರಲಾರಂಬಿಸಿದರು. ಆಗ ಪುರಸಭೆಯಲ್ಲಿ ಒಳ್ಳೆಯ ಕೆಲಸ ಮಾಡಿ ಹೆಸರು ಪಡೆದುಕೊಂಡವರೆಂದರೆ ಎಂ. ಮಾಧವರಾವ್, ಉಳ್ಳಾಲ ಸಂಜೀವ್ ರಾವ್ , ಬಾಷಾ ಯಾನೆ ಅಫಾಸಿ ಸಾಹೇಬ್. ವಕೀಲ ವೆಂಕಟರಾಯ ಬಾಳಿಗಾ. ಡಾ. ವಿಠ್ಠಲ ಶೆಟ್ಟಿ ಮೊದಲಾದವರು ಪ್ರಮುಖರು.

ಮುಂದೆ ೧೯೨೬ರಲ್ಲಿ ಕಾರಂತರು ಮದರಾಸು ಶಾಸನಸಭೆಗೆ ಸ್ವರಾಜ್ಯಪಕ್ಷದ ವತಿಯಿಂದ ಆಯ್ಕೆಯಾದರು. ೧೯೨೯ರಲ್ಲಿ ಗೌಹಾತಿಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಣಯವಾದಂತೆ, ಕಾರಂತರು ತನ್ನ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿದರು. ೧೯೩೭ರಲ್ಲಿ ಪುತ್ತೂರು-ಕಾಸರಗೋಡು ಕ್ಷೇತ್ರದಿಂದ ಮತ್ತೆ ಶಾಸನ ಸಭೆಗೆ ಚುನಾಯಿತರಾಗಿ ರಾಜಾಜಿಯವರ ಸಂಪುಟದಲ್ಲಿ ಪಾರ್ಲಿಮೆಂಟರಿ ಸೆಕ್ರೆಟರಿ ಆಗಿ ಕೆಲಸ ಮಾಡಿದರು. ಈ ಹುದ್ದೆ ಅವರಿಗೆ ಹಿಡಿಸದಿದ್ದುದರಿಂದ ಮರುವರ್ಷ ಅದಕ್ಕೆ ರಾಜಿನಾಮೆ ಸಲ್ಲಿಸಿದರು. ಶಾಸಕನಾಗಿ ಮುಂದುವರಿದರು. ೧೯೩೯ರಲ್ಲಿ ಎರಡನೇ ಪ್ರಪಂಚ ಮಹಾಯುದ್ಧ ಆರಂಭವಾದಾಗ ಶಾಸನಸಭಾ ಸದಸ್ಯರೆಲ್ಲ ರಾಜಿನಾಮೆ ನೀಡಿದರು. ಮಂತ್ರಿಮಂಡಲವೂ ರಾಜಿನಾಮೆ ನೀಡಿತು. ೧೯೪೧ರಲ್ಲಿ ಕಾರಂತರು ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿ ಒಂಬತ್ತು ತಿಂಗಳು ಜೈಲುವಾಸದ ಶಿಕ್ಷೆಗೆ ಒಳಗಾದರು. ೫೦೦ ರೂಪಾಯಿಗಳ ದಂಡಕ್ಕೂ ಒಳಗಾದರು. ಅವರನ್ನು ತಿರುಚಿನಾಪಳ್ಳಿಯ ಜೈಲಿನಲ್ಲಿ ಇಡಲಾಗಿತ್ತು. ಸ್ವಾತಂತ್ರ್ಯ ದೊರೆತ ಬಳಿಕ ದಂಡ ಕಟ್ಟಿದ ಹಣ ಅವರಿಗೆ ಮರಳಿ ಬಂದಿತು.

೧೯೪೨ರಲ್ಲಿ ಭಾರತದಾದ್ಯಂತ 'ಕ್ವಿಟ್ ಇಂಡಿಯಾ' ಚಳವಳಿ ಬಹಳ ಜೋರಾಗಿ ನಡೆಯಿತು. ಮದರಾಸು ಪ್ರಾಂತದಲ್ಲಿ ೩೨ ಮಂದಿ ಪ್ರಮುಖರನ್ನು ಚಳವಳಿಯ ಮುನ್ನವೇ ಬಂಧಿಸಲಾಯಿತು. ಅವರಲ್ಲಿ ಕೆ. ಆರ್. ಕಾರಂತರೂ ಒಬ್ಬರಾಗಿದ್ದರು. ಆರಂಭದ ಎರಡು-ಮೂರು ತಿಂಗಳು ಅವರನ್ನು ವೆಲ್ಲೂರು ಜೈಲಿನಲ್ಲಿ ಇರಿಸಲಾಗಿತ್ತು. ಅನಂತರ ಭದ್ರತೆಯ ದೃಷ್ಟಿಯಿಂದ ಬಿರಾರಿನ ಅಮರಾವತಿ ಜೈಲಿನಲ್ಲಿ ಇರಿಸಲಾಯಿತು. ಆಗ ಕಾರಂತರ ಜೊತೆ ಜೈಲಿನಲ್ಲಿ ಮದ್ರಾಸಿನ ಇತರ

ನಾಯಕರ ಜೊತೆ ವಿ.ವಿ. ಗಿರಿ, ಕಾಮರಾಜ ನಾಡಾರ್, ಟಿ. ಪ್ರಕಾಶಂ, ಟಿ.ವಿಶ್ವನಾಥನ್ ಮುಂತಾದ ಪ್ರಮುಖರಿದ್ದರು. ೧೯೪೪ರ ಡಿಸೆಂಬರ್ ೩೦ರಂದು ಕಾರಂತರ ಬಿಡುಗಡೆ ಆಯಿತು.

೧೯೪೬ರಲ್ಲಿ ಕೆ. ಆರ್. ಕಾರಂತರು ಪುತ್ತೂರು-ಕಾಸರಗೋಡು ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸಿ ಶಾಸನ ಸಭೆಗೆ ಅವಿರೋಧವಾಗಿ ಆಯ್ಕೆಯಾದರು. ಟಿ. ಪ್ರಕಾಶಂ ಸಂಪುಟದಲ್ಲಿ ಕಂದಾಯ ಸಚಿವರಾಗಿ ಸೇವೆ ಸಲ್ಲಿಸಿದರು. ಮರುವರ್ಷ, ಅಂದರೆ ೧೯೪೭ರ ಮಾರ್ಚ್ ತಿಂಗಳಲ್ಲಿ ಆ ಮಂತ್ರಿಮಂಡಲ ರಾಜಿನಾಮೆ ಕೊಡಬೇಕಾಯಿತು.

೧೯೫೧ರಲ್ಲಿ ಇಂಗ್ಲೆಂಡ್ ಸಂದರ್ಶಿಸಿದ ಕಾರಂತರು ಅಲ್ಲಿ ಲೇಬರ್ ಪಕ್ಷ ಕಾರ್ಯನಿರ್ವಹಿಸುವ ರೀತಿಯನ್ನು ಅಭ್ಯಾಸ ಮಾಡಿದರು. ನಮ್ಮ ದೇಶದಲ್ಲಿ, ಅದರಲ್ಲೂ ಮದ್ರಾಸಿನಲ್ಲಿ ಕಾಂಗ್ರೆಸ್ ಪಕ್ಷ ಬರಬರುತ್ತಾ ಮೌಲ್ಯರಹಿತವಾಗುತ್ತಿದ್ದುದನ್ನು ನೋಡಿ ಬೇಸರ ಹೊಂದಿ ಕಾಂಗ್ರೆಸ್ ಪಕ್ಷವನ್ನು ತ್ಯಜಿಸಿದರು. ಮುಂದೆ ಕೆ. ಎಂ.ಪಿ.ಪಿ. ಪಕ್ಷದ ಸದಸ್ಯರಾದರು. ಅನಂತರ ಮುಂಬೈಯಲ್ಲಿ ಪ್ರಜಾ ಸೋಶ್ಯಲಿಸ್ಟ್ ಪಕ್ಷವನ್ನು ಸ್ಥಾಪಿಸಿದವರಲ್ಲಿ ಕಾರಂತರೂ ಒಬ್ಬರು. ಆ ಪಕ್ಷದಲ್ಲಿ ಕಾರಂತರು ಸುಮಾರು ಹದಿನೈದು ವರ್ಷಗಳ ಕಾಲ ಕೆಲಸ ಮಾಡಿ, ಅನಂತರ ರಾಜಕೀಯವನ್ನು ತ್ಯಜಿಸಿದರು. ಪ್ರಸಿದ್ಧ ಇತಿಹಾಸಕಾರ ಡಾ. ಸೂರ್ಯನಾಥಕಾಮತರು ಬರೆದ "ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು" ಎಂಬ ಕೃತಿಯಲ್ಲಿ ಕೆ. ಆರ್ ಕಾರಂತರ ಹೋರಾಟದ ಬದುಕನ್ನು ಸೂಕ್ತವಾಗಿ ಕಾಣಿಸಲಾಗಿದೆ.

ರಾಜಕೀಯ ಮತ್ತು ವೃತ್ತಿ ಬದುಕಿನಲ್ಲಿ ತಾನು ಏನನ್ನಾದರೂ ಸಾಧಿಸಿದ್ದರೆ, ಅದರ ಹಿಂದೆ ಪ್ರೇರಣೆ ಮತ್ತು ಪ್ರಭಾವ ಶಕ್ತಿಯಾಗಿ ಕೆಲಸ ಮಾಡಿದವರು ತನ್ನ ತಂದೆ ಶೇಷ ಕಾರಂತರು ಎಂದು ಕೆ. ಆರ್. ಕಾರಂತರು ಸ್ಮರಿಸುತ್ತಾರೆ. ಶ್ರದ್ಧೆ, ಛಲ, ಕಠಿಣ ದುಡಿಮೆ, ಮುನ್ನೋಟ, ದಾರ್ಢ್ಯತೆ, ಶಿಸ್ತು ಮೊದಲಾದವುಗಳನ್ನು ಕಾರಂತರು ತಂದೆಯಿಂದ ಬಳುವಳಿಯಾಗಿ ಪಡೆದರು. ಸಾರ್ವಜನಿಕ ಸೇವಾಕ್ಷೇತ್ರಕ್ಕೆ ಧುಮುಕುವ ಇಚ್ಛೆಯೂ ತಂದೆಯಿಂದಲೇ ಪ್ರಾಪ್ತವಾಯಿತು.

ತಾನು ಚಿಕ್ಕವನಿದ್ದಾಗ ತಂದೆ ಶೇಷ ಕಾರಂತರು ಮಾಡಿದ ಕೆಲವು ಜನೋಪಯೋಗಿ ಕೆಲಸಗಳನ್ನು ಕೆ. ಆರ್. ಕಾರಂತರು ಜ್ಞಾಪಿಸಿಕೊಳ್ಳುತ್ತಾರೆ. ಗಿಳಿಯಾರು-ಬೇಳೂರು ಗ್ರಾಮದ ಜನರು ಕೋಟದ ಪೇಟೆಗೆ ಬರುವ ದಾರಿಯಲ್ಲಿ ಮಳೆಗಾಲದಲ್ಲಿ ನೀರು ಹರಿಯುವ, ಸದಾ ತುಂಬಿಕೊಂಡಿರುವ ಒಂದು ಹೊಳೆ ಇತ್ತು. ಜನರು ಪೇಟೆಗೆ ಬರಬೇಕಾದರೆ ದೋಣಿಯಲ್ಲೇ ಬರಬೇಕಾಗಿತ್ತು. ಶಾಲಾ

ಮಕ್ಕಳಿಗೆ ಅಪಾಯ ತಪ್ಪಿದ್ದಲ್ಲ. ಅದೇ ರೀತಿ ಪಶ್ಚಿಮದಲ್ಲಿ ಪಡುಕೆರೆಯಿಂದ ಪೇಟೆಗೆ ಬರುವ ದಾರಿಯಲ್ಲಿ ಸದಾ ಉಪ್ಪುನೀರಿನಿಂದ ತುಂಬಿರುವ ಒಂದು ಹಿನ್ನೀರ ಹೊಳೆ. ಪೇಟೆಗೆ ಬಂದು ಹೋಗುವವರಿಗೆ ತೀರ ಅಪಾಯಕಾರಿಯಾಗಿತ್ತು. ಶೇಷ ಕಾರಂತರು ತಮ್ಮದೇ ಖರ್ಚಿನಲ್ಲಿ ಈ ಎರಡೂ ಹೊಳೆಗಳಿಗೂ ಕಿರುಸೇತುವೆ ನಿರ್ಮಿಸಿಕೊಟ್ಟು ಜನರಿಗೆ ಅನುಕೂಲ ಮಾಡಿಕೊಟ್ಟರು. ಇದು ಬಾಲಕನಾದ ನನ್ನ ಮೇಲೆ ಒಳ್ಳೆಯ ಪ್ರಭಾವ ಬೀರಿತು ಎಂದು ಕೆ. ಆರ್. ಕಾರಂತರು ಬರೆಯುತ್ತಾರೆ.

ತಂದೆಯಾದ ಶೇಷ ಕಾರಂತರ ಇನ್ನೂ ಎರಡು ಸೇವೆಗಳನ್ನು ಕೆ. ಆರ್. ಕಾರಂತರು ಸ್ಮರಿಸುತ್ತಾರೆ: ಅಂದು ಕೋಟದಲ್ಲಿ ಅಂಚೆ ವ್ಯವಸ್ಥೆ ಇರಲಿಲ್ಲ. ಇಲಾಖೇತರ ಅಂಚೆ ಕಛೇರಿಯನ್ನು (Extra Departmental post offfice) ಮಂಜೂರು ಮಾಡಿಸಿ, ತನ್ನ ಜವಳಿ ಮಳಿಗೆಯಲ್ಲೇ ಒಂದು ಭಾಗವನ್ನು ಅದಕ್ಕಾಗಿ ಏರ್ಪಾಡು ಮಾಡಿಕೊಟ್ಟರು ಶೇಷ ಕಾರಂತರು. ಗುಂಡ್ಮಿ ದೊಡ್ಡ ಮನೆಯಿಂದ ಶ್ರೀನಿವಾಸಯ್ಯನವರನ್ನು ಅರೆಕಾಲಿಕ ಪೋಸ್ಟಮಾಸ್ಟರ್ ಆಗಿ ನೇಮಿಸಿಕೊಂಡರು. ಅವರು ನಿತ್ಯವೂ ಪಡುಕೆರೆಯಿಂದ ಅಲ್ಲಿಗೆ ಬಂದು ಟಪ್ಪಾಲು ವ್ಯವಸ್ಥೆಯ ಜವಾಬ್ದಾರಿಯನ್ನು ಎಷ್ಟೋ ವರ್ಷ ನಿರ್ವಹಿಸುತ್ತಿದ್ದರು. ಅವರಿಗೆ ಮಧ್ಯಾಹ್ನದ ಊಟದ ಏರ್ಪಾಡನ್ನು ತಂದೆಯವರೇ ಮಾಡಿಕೊಟ್ಟಿದ್ದರು. ಆ ಅಂಚೆ ಕಛೇರಿ ಹತ್ತಾರು ವರ್ಷ ಕಾರಂತರ ಮನೆಯಲ್ಲೇ ಇತ್ತು. (ಈಗ ಅದು ಸಬ್ ಪೋಸ್ಟ್ ಆಫೀಸ್ ಆಗಿ ಬೆಳೆದು ಬೇರೆ ಕಟ್ಟಡದಲ್ಲಿದೆ). ಇದು ಕೂಡ ನಮ್ಮ ತಂದೆಯವರ ಒಂದು ಜನೋಪಯೋಗಿ ಕೆಲಸವೇ ಆಗಿದೆ. ಎಂದು ಕಾರಂತರು ಸ್ಮರಿಸುತ್ತಾರೆ.

ಜನರ ಪ್ರಾಥಮಿಕ ಅವಶ್ಯಕತೆಗಳನ್ನು ಕಂಡು ಅದಕ್ಕೆ ಬೇಕಾದಂತೆ ಸ್ಪಂದಿಸಿದವರು ನಮ್ಮ ತಂದೆ. ಅವರ ರಕ್ತಗುಣವೇ ನನಗೂ ಬಂತು ಎಂದು ಕೆ. ಆರ್. ಕಾರಂತರು ಬರೆಯುತ್ತಾರೆ: ಅಂದು ಕೋಟದಲ್ಲಿ ಆಸ್ಪತ್ರೆಯಿರಲಿಲ್ಲ. ವೈದ್ಯಾಧಿಕಾರಿಗಳೂ ಇರಲಿಲ್ಲ. ಸಣ್ಣ ಪುಟ್ಟ ಆರೋಗ್ಯದ ತೊಂದರೆಗಳಿಗೆ ವೈದ್ಯಕೀಯ ಸವಲತ್ತುಗಳಿರಲಿಲ್ಲ. ತಂದೆಯವರು ಕೆಲವು ಕಾಯಿಲೆಗಳಿಗೆ ಸ್ವತಃ ಔಷಧಿ ಕೊಡುತ್ತಿದ್ದರು. ಆಮಶಂಕೆ, ವಾಯುಪೀಡೆ, ಸನ್ನಿಪಾತ, ಜ್ವರ ಮುಂತಾದವುಗಳಿಗೆ ಔಷಧ ಕೊಡುತ್ತಿದ್ದರು. ಹಣ ತೆಗೆದುಕೊಳ್ಳುತ್ತಿರಲಿಲ್ಲ. ಹಳ್ಳಿಯ ಜನರು ಕಾಯಿಲೆ ಬಿದ್ದರೆ ಕಂಬಳಿಯಲ್ಲಿ ಸುತ್ತಿಕೊಂಡು ಅವರನ್ನು ಪೇಟೆಗೆ ಹೊತ್ತುಕೊಂಡು ಹೋಗಬೇಕಾಗುತ್ತಿತ್ತು. ಔಷಧಿಗಾಗಿ ಉಡುಪಿ ಅಥವಾ ಕುಂದಾಪುರಕ್ಕೆ ಹೋಗಬೇಕಾಗಿತ್ತು.

ನಮ್ಮ ತಂದೆಯವರ ಪ್ರಯತ್ನದಿಂದ ಕೋಟಕ್ಕೆ ಲೋಕಲ್ ಫಂಡ್ ಆಸ್ಪತ್ರೆ ಮಂಜೂರಾಯಿತು. ಪೇಟೆಯಲ್ಲಿ ಅದಕ್ಕೆ ಕಟ್ಟಡ ದೊರೆಯದ ಕಾರಣ ಬೇರೆಡೆಗೆ ಅದನ್ನು ಸ್ಥಳಾಂತರಿಸುವ ಯೋಜನೆಯಿತ್ತು. ಆದರೆ ನಮ್ಮ ತಂದೆಯವರು ಶಾಲೆಗಾಗಿ ಕಟ್ಟಿಸಿದ ಕಟ್ಟಡದ ಒಂದು ಭಾಗವನ್ನು ಬಾಡಿಗೆ ಇಲ್ಲದೆ ಆಸ್ಪತ್ರೆಗೆ

ಬಿಟ್ಟುಕೊಟ್ಟರು. ಮಂಗಳೂರಿನಿಂದ ಕೋಟಕ್ಕೆ ಬಂದ ವೈದ್ಯಾಧಿಕಾರಿ ಡಾ. ನಾರಾಯಣ ಶೆಟ್ಟರಿಗೆ ಎಲ್ಲ ರೀತಿಯ ನೆರವು ಕೊಟ್ಟರು. ವೈದ್ಯಾಧಿಕಾರಿಗಳೊಂದಿಗೆ ರೋಗಿಗಳ ಆರೈಕೆ ಅನುಪಾನಗಳಿಗಾಗಿ ಸಹಕರಿಸಲು ಬಂದಿದ್ದ ಶ್ರೀಮತಿ ಚಂದೂ ಬಾಯಿ ಎಂಬ ಶುಶ್ರೂಷಕಿಗೆ ವಾಸಿಸಲು ಶಾಲೆಯ ಪಕ್ಕದಲ್ಲಿ ಅನುಕೂಲ ಮಾಡಿಕೊಟ್ಟರು. ಇದರಿಂದಾಗಿ ಅವರ ವೈದ್ಯಕೀಯ ಸೇವೆ ಕೋಟ ಪರಿಸರಕ್ಕೆ ಮುಂದಿನ ಮೂವತ್ತಾರು ವರ್ಷಗಳ ಕಾಲ ಸಿಗುವಂತಾಯಿತು. ಅವರೀರ್ವರೂ ಕೋಟದ ಜನತೆಯ ಆರೋಗ್ಯ ಕಾಪಾಡಲು ಸೇವೆಸಲ್ಲಿಸುತ್ತ ಕೋಟದವರೇ ಆಗಿ ಹೋದರು. (ಈಗ ಆ ಆರೋಗ್ಯ ಘಟಕ ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಸ್ವಂತ ಕಟ್ಟಡ, ಹೊರರೋಗಿಗಳ ಹಾಗೂ ಒಳರೋಗಿಗಳ ಆರೈಕೆ ನೋಡಿಕೊಳ್ಳುವ ಆಸ್ಪತ್ರೆಯಾಗಿದೆ.) ಆಧುನಿಕ ಸಮಾಜಕ್ಕೆ ಕಲ್ಯಾಣ ರಾಜ್ಯ ನೀಡುವ ಆಶಯ ಹೊತ್ತ ಸರಕಾರದ ಅಶನ ವಸನ ವಸತಿ ಆರೋಗ್ಯ ಎಂಬ ಪರಿಕಲ್ಪನೆಯನ್ನು ಇದಕ್ಕಿಂತ ಚೆನ್ನಾಗಿ ಅನುಷ್ಠಾನಕ್ಕೆ ತರಲು ಸಾಧ್ಯವೇ? ನಿಸ್ಸಂಶಯವಾಗಿ ತಂದೆಯ ವ್ಯಕ್ತಿತ್ವ ನನ್ನ ಮೇಲೆ ಗಾಢ ಪರಿಣಾಮ ಬೀರಿತು ಎಂದು ಕೆ. ಆರ್. ಕಾರಂತರು ತಿಳಿಸುತ್ತಾರೆ.

ತಮ್ಮ ತಂದೆಯ ಜೀವನಕ್ಕೆ ಸಂಬಂಧಿಸಿ ಇನ್ನೂ ಒಂದು ಘಟನೆಯನ್ನು ಅವರು ಉದಾಹರಿಸುತ್ತಾರೆ: ನಮ್ಮ ತಂದೆಯವರು ತಮ್ಮ ನಿಸ್ವಾರ್ಥ ಜನಸೇವೆಯಿಂದಾಗಿ ಎಲ್ಲರ ಅಭಿಮಾನ ಗಳಿಸಿದ್ದರು. ಅವರ ಮಾತಿಗೆ ಎಲ್ಲರೂ ಮನ್ನಣೆ ಕೊಡುತ್ತಿದ್ದರು. ಜನಜೀವನದಲ್ಲಿ ಆಗಾಗ ಜಗಳ, ಹೊಟ್ಟೆಕಿಚ್ಚು, ಆಸ್ತಿಪಾಸ್ತಿಗಳ ವಿವಾದ ಸಾಮಾನ್ಯ. ಆಗ ಜನರು ನ್ಯಾಯ ತೀರ್ಮಾನಕ್ಕಾಗಿ ದೂರದ ಕುಂದಾಪುರ ಅಥವಾ ಉಡುಪಿಗೆ ನ್ಯಾಯವಾದಿಗಳ ಸಹಾಯ ಪಡೆಯಲು ಹೋಗಬೇಕಾಗಿತ್ತು. ಆದರೆ ನಮ್ಮ ತಂದೆಯವರು ಗಳಿಸಿದ ಜನಮನ್ನಣೆಯಿಂದ ಸಣ್ಣ ಪುಟ್ಟ ಜಗಳಗಳ ತೀರ್ಮಾನಕ್ಕಾಗಿ ನಮ್ಮಲ್ಲಿಗೆ ಜನರು ಬರುತ್ತಿದ್ದರು. ತಂದೆಯವರು ವಿಚಾರಣೆ ನಡೆಸಿ, ಇತ್ತಂಡದವರಿಗೂ ಹಿತವಾಗುವ ಸೂಕ್ತ ನ್ಯಾಯ ತೀರ್ಮಾನ ಕೊಟ್ಟುಬಿಡುತ್ತಿದ್ದರು. ಇದರಿಂದ ಜನರಿಗೆ ಆರ್ಥಿಕ ನಷ್ಟವಾಗುವುದು ತಪ್ಪುತ್ತಿತ್ತು. ತಂದೆಯವರ ನ್ಯಾಯತೀರ್ಮಾನದಿಂದಾಗಿ ಅವರಿಗೆ ಇನ್ನಷ್ಟು ಜನಮನ್ನಣೆ ದೊರೆಯಿತು. ಇದರಿಂದಾಗಿ ತಂದೆಯವರ ಬಗ್ಗೆ ನಮಗೆ ತುಂಬ ಅಭಿಮಾನವುಂಟಾಗಿತ್ತು. ಅವರೇ ನಮಗೆ ಮಾದರಿ ವ್ಯಕ್ತಿ (Role model) ಆದರು ಎನ್ನುತ್ತಾರೆ ಕೆ. ಆರ್. ಕಾರಂತರು.

ಇದರ ಜೊತೆಗೆ, ಸ್ವಾತಂತ್ರ್ಯ ಹೋರಾಟ ಮತ್ತು ರಾಷ್ಟ್ರ ನಿರ್ಮಾಣದ ದಿನಮಾನಗಳಾಗಿದ್ದ ಆಗಿನ ಪರಿಸರವೂ ಕೆ. ಆರ್. ಕಾರಂತರನ್ನು ದೊಡ್ಡ ವ್ಯಕ್ತಿಯನ್ನಾಗಿ ರೂಪಿಸಿತು.

■

## ೫. ವಕೀಲರಾಗಿ ಕಾರಂತರು

ಆಗಿನ ಕಾಲದಲ್ಲಿ ಅಡ್ವೋಕೇಟ್ ವೃತ್ತಿಯು ಸಮಾಜ ಜೀವನದ ಅತ್ಯುನ್ನತ ಸ್ತರದಲ್ಲಿದ್ದ ಒಂದು ವೃತ್ತಿಯಾಗಿತ್ತು. ಸಹಜವಾಗಿ ಕೆನೆಪದರದಲ್ಲಿದ್ದ ವ್ಯಕ್ತಿಗಳೆಲ್ಲ ವಕೀಲಿ ವೃತ್ತಿಯನ್ನು ಆರಿಸಿಕೊಳ್ಳುತ್ತಿದ್ದರು.

ವಕೀಲರಾದವರೆಲ್ಲ ತತ್ವನಿಷ್ಠೆ ತೋರಿಸುತ್ತಾರೆ ಎಂದೇನಿಲ್ಲ. ಗಳಿಕೆಯ ಮುಂದೆ ಅದು ಗೌಣವಾಗಿ ಬಿಡುಬುದುಂಟು. ಆದರೆ ವಕೀಲರಾಗಿದ್ದರೂ ತತ್ವನಿಷ್ಠೆಯನ್ನು ಮೆರೆದ ವ್ಯಕ್ತಿ ಕಾರಂತರು ಎಂದು ಅವರ ಕಿರಿಯ ಸಹೋದ್ಯೋಗಿಗಳೆಲ್ಲ ಸ್ಮರಿಸುತ್ತಾರೆ. ತನ್ನ ಬಳಿಗೆ ಬಂದ ದಾವೆಗಳು ಎಷ್ಟೇ ಕ್ಲಿಷ್ಟವಾಗಿದ್ದರೂ ಕಾರಂತರು ಅದನ್ನು ಸ್ವೀಕರಿಸುತ್ತಿದ್ದರು. ಅದಕ್ಕೆ ಸಂಬಂಧಸಿದ ದಾಖಲೆಗಳನ್ನೆಲ್ಲ ಕಷ್ಟಪಟ್ಟು ಸಂಗ್ರಹಿಸಿ, ಕೋರ್ಟ್‌ನಲ್ಲಿ ವಾದಿಸುತ್ತಿದ್ದರು ಮತ್ತು ಕಕ್ಷಿದಾರರಿಗೆ ಗೆಲುವನ್ನೂ ಸಂಪಾದಿಸಿಕೊಡುತ್ತಿದ್ದರು.

ಕಳೆದ ಶತಮಾನದ ನಾಲ್ಕನೇ ದಶಕದಿಂದ ಸುಮಾರು ಏಳನೇ ದಶಕದವರೆಗೆ ನಮ್ಮ ನಾಡು ಹಲವಾರು ಪಲ್ಲಟಗಳನ್ನು ಕಂಡಿತು. ಬ್ರಿಟಿಷರು ನಿಧಾನವಾಗಿ ಅಧಿಕಾರವನ್ನು ಭಾರತೀಯರ ಕೈಗೆ ಹಸ್ತಾಂತರಿಸುತ್ತ ಅಂತಿಮವಾಗಿ ೧೯೪೭ರಲ್ಲಿ ಸ್ವಾತಂತ್ರ್ಯವನ್ನು ಕೊಟ್ಟರು. ಉಂಬಳಿಗಮಾನ್ಯ ಪದ್ಧತಿ, ದೊಡ್ಡ ದೊಡ್ಡ ಜಮೀನ್ದಾರಿಕೆ, ಅಳಿಯಕಟ್ಟು ಪದ್ಧತಿ (ಮಾತೃಮೂಲೀಯ ಕುಟುಂಬ ವ್ಯವಸ್ಥೆ) ಮೊದಲಾದ ಹಿಂದಿನ ವ್ಯವಸ್ಥೆಗಳಿಗೆ ಪೆಟ್ಟು ಬಿದ್ದ ದಶಕಗಳೂ ಅವೇ ಆಗಿವೆ. ಧರ್ಮಸ್ಥಳ ದೇವಸ್ಥಾನ ಮತ್ತು ಅದರ ಆಸ್ತಿಪಾಸ್ತಿಗಳು ವೈಯಕ್ತಿಕ ಸೊತ್ತು; ಎಂಡೋಮೆಂಟ್ ವ್ಯವಸ್ಥೆಗೆ ಸೇರತಕ್ಕದ್ದಲ್ಲ ಎಂಬ ದಾವೆ, ಉಡುಪಿ ಮಠಗಳ ದಾವೆ ಈ ಮುಂತಾಗಿ ಹತ್ತು ಹಲವು ಕ್ಲಿಷ್ಟಕರವಾದ, ಸಂಕೀರ್ಣ ಮತ್ತು ಎಂತಹ ನುರಿತ, ಪರಿಣತ ವಕೀಲರೂ ಸ್ವೀಕರಿಸಲು ಹಿಂಜರಿಯುತ್ತಿದ್ದ ದಾವೆಗಳನ್ನು ಕೆ. ಆರ್. ಕಾರಂತರು ನಿರ್ಭೀತಿಯಿಂದ, ಸಂತೋಷದಿಂದ ಸ್ವೀಕರಿಸಿ ಅವುಗಳನ್ನೆಲ್ಲ ಗೆದ್ದುಕೊಟ್ಟುದು ವಿಶೇಷವಾಗಿತ್ತು. ಆ ಕಾರಣವಾಗಿಯೇ ಕಾಸರಗೋಡು ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವರ ಹೆಸರು ಮನೆಮಾತಾಯಿತು.

ಹಿರಿಯ ಪತ್ರಕರ್ತರಾದ ಬನ್ನಂಜೆ ರಾಮಾಚಾರ್ಯರು ಉಡುಪಿಯ

ಕೃಷ್ಣಾಪುರದ ದಾವೆಯ ಕುರಿತು ನೆನಪು ಮಾಡುವುದು ಹೀಗೆ- ೧೯೪೬ರ ಒಂದು ದಿನ. ಕೃಷ್ಣಾಪುರ ಮಠದಲ್ಲಿ ತುಂಬ ಸಂಭ್ರಮವಿತ್ತು. ಪರ್ಯಾಯ ಪೀಠದ ಶ್ರೀ ಪೇಜಾವರ ಸ್ವಾಮೀಜಿಯವರಿಗೆ ಕೃಷ್ಣಾಪುರ ಮಠದಲ್ಲಿ ಆ ದಿನ ಸನ್ಮಾನ. ಮಠ ತುಂಬ ಜನ - ಪಂಡಿತರು. ಆಮಂತ್ರಿತರು, ಸಭಿಕರು, ಮಧ್ಯಾಹ್ನದ ಊಟಕ್ಕೆ ಎಲ್ಲ ಸಿದ್ಧವಾಗಿ ಇನ್ನೇನು ಊಟ ಆರಂಭಿಸಬೇಕು - ಅಷ್ಟರಲ್ಲಿ ಮಂಗಳೂರಿನಿಂದ ತುರ್ತು ಸಂದೇಶವೊಂದು ಬಂತು. ಮಠದ ಆಡಳಿತದ ವಿವಾದದಲ್ಲಿ ಸರಕಾರ ಮೇಲ್ವಿಚಾರಕರೊಬ್ಬರನ್ನು ನೇಮಿಸಿದ್ದು, ಅವರು ಸ್ವಾಮಿಗಳ ಮೇಲೆ ಕ್ರಿಮಿನಲ್ ದೂರು ನೀಡಿ ಅಂದು ತೀರ್ಪು ಬರಬೇಕಿದ್ದ ದಿನವಾಗಿತ್ತು. ತೀರ್ಪು ಹೇಳುವ ಸಮಯದಲ್ಲಿ ಮಂಗಳೂರು ಜಿಲ್ಲಾ ನ್ಯಾಯಾಲಯದಲ್ಲಿ ಸ್ವಾಮೀಜಿ ಹಾಜರಿರುವಂತೆ ಆದೇಶಿಸಿ ವಾರಂಟ್ ಹೊರಟಿದೆ ಎಂಬ ಸುದ್ದಿ ಬಂದಿತ್ತು. ತಕ್ಷಣ ಸ್ವಾಮೀಜಿ ಜಾಗೃತರಾದರು. ಕೈಗೆ ಹಾಕಿಕೊಂಡ ನೀರನ್ನು ಅಲ್ಲೇ ಚೆಲ್ಲಿದರು. ಪಕ್ಕದಲ್ಲಿ ಕುಳಿತ ಪೇಜಾವರ ಸ್ವಾಮೀಜಿಗೆ ಹೇಳಿದರು- 'ಸ್ವಾಮಿಗಳು ಇಲ್ಲೇ ಇರಬೇಕು, ಊಟ, ಸಮಾರಂಭ ಎಲ್ಲ ಮುಗಿಸಿ ಸಂಜೆ ನಂತರವೇ ತೆರಳಬೇಕು' ಎಂದು ಕೃಷ್ಣಾಪುರ ಮಠಾಧೀಶರು ಕಾಲ್ನಡಿಗೆಯಲ್ಲೇ ನಡೆದು ಭೂಗತರಾಗಿದ್ದರು. ನ್ಯಾಯಾಲಯದಲ್ಲಿ ತೀರ್ಪು ಹೇಳಬೇಕಾದರೆ ಸ್ವಾಮೀಜಿಯವರು ಉಪಸ್ಥಿತರಿರಬೇಕು. ಅವರಿಲ್ಲದೆ ತೀರ್ಪು ಹೇಳಲಿಕ್ಕಾಗಲಿಲ್ಲ. ಸ್ವಾಮೀಜಿ ಗುಟ್ಟಾಗಿ ಶ್ರೀರಂಗಪಟ್ಟಣಕ್ಕೆ ಹೋಗಿ ಅಲ್ಲಿನ ಮಹಡಿಯೊಂದರಲ್ಲಿ ಉಳಿದಿದ್ದರು. ಹೀಗೆ ಕೆಲವು ತಿಂಗಳುಗಳೇ ಸಂದಿರಬೇಕು.

ಈ ಮಧ್ಯೆ ಸ್ವಾಮಿಗಳನ್ನುಳಿಸಲು ಕೆ. ಆರ್. ಕಾರಂತರನ್ನೇ ಹಿಡಿಯಬೇಕಾಯಿತು. ಕಾರಂತರು ಇಡೀ ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿದರು. ಅದೊಂದು ಅಪೂರ್ವ ಪ್ರಕರಣ. ತೀರ್ಪು ಸಿದ್ಧವಾಗಿ ನೀಡದೇ ಹೋದ ಪ್ರಕರಣ. ಅಪೀಲು ಮಾಡಬೇಕೆಂದರೆ ತೀರ್ಪೇ ಕೊಟ್ಟಿರಲಿಲ್ಲ! ಈ ಪ್ರಕರಣದಲ್ಲಿ ಕೃಷ್ಣಾಪುರ ಮಠಕ್ಕೆ ಅನ್ಯಾಯವಾಗಿದೆ ಎಂದು ಕಾರಂತರಿಗೆ ಅನ್ನಿಸಿತು. ತಾನು ಈ ಬಗ್ಗೆ ಹೋರಾಡಬೇಕು ಎಂದು ತೋರಿತು. ಹಾಗಾಗಿ ದೃಢ ಮನಸ್ಸಿನಿಂದ ದಾವೆಯನ್ನು ಸ್ವೀಕರಿಸಿದರು.

ಕೃಷ್ಣಾಪುರ ಮಠದಲ್ಲಿಲ್ಲದ ದಾಖಲೆಗಳನ್ನು ಎಲ್ಲೆಲ್ಲಿಂದಲೋ ಹುಡುಕಿಸಿ ತರಿಸಿದ ಕಾರಂತರು, ಕೆಲವು ಕಡೆ ಸ್ವತಃ ಹೋಗಿ ಹಳೆಯ ದಾಖಲೆಗಳನ್ನು ಸಂಪಾದಿಸಿ ತಂದರು. ಅಷ್ಟು ಛಲ-ನಿಷ್ಠೆ-ಕರ್ತವ್ಯ ಪರಾಯಣತೆ ಕಾರಂತರಲ್ಲಿತ್ತು. ದಾಖಲೆಗಳೆಲ್ಲ ಸಿದ್ಧವಾದ ಬಳಿಕ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿದರು. ಅದರಲ್ಲಿ ಯಶಸ್ಸನ್ನು ಪಡೆದರು. ಆ ಪ್ರಕರಣ ಕಾನೂನಿನ ದೃಷ್ಟಿಯಲ್ಲಿ ಅಪರೂಪದ್ದಾಗಿತ್ತು. ತೀರ್ಪು ನೀಡುವ ಹಂತದಲ್ಲಿ ಸ್ಥಗಿತವಾಗಿದ್ದದ್ದು ಬೇರೆ ಕೋರ್ಟಿಗೆ ವರ್ಗಾವಣೆ ಆಯಿತು. ಅಂತಿಮವಾಗಿ ಸ್ವಾಮೀಜಿಗೆ ಅದರಲ್ಲಿ ಜಯ

ಪ್ರಾಪ್ತಿಯಾಯಿತು.

ಆ ಸಮಯದಲ್ಲಿ ವಕೀಲ ಕಾರಂತರು ಉಡುಪಿಯಲ್ಲಿ ಒಂದು ದಂತಕತೆಯಾಗಿದ್ದರು. ಎಲ್ಲ ಕಡೆಯೂ ಅವರ ಕುರಿತು ಮಾತುಕತೆ, ಗುಣಗಾನ. ಆಜಾನುಬಾಹು ಮನುಷ್ಯ; ವರ್ಚಸ್ವೀ ಮುಖ. ಕಾರಂತರು ಮಠಕ್ಕೆ ಬಂದರೆಂದರೆ ಕಂಡವರೆಲ್ಲ ಹೆದರುವವರೇ. ಗೌರವ ಮತ್ತು ಭಯದಿಂದ ನಮಸ್ಕರಿಸುತ್ತಿದ್ದರು.

ಉಡುಪಿಯಲ್ಲಿ ಶ್ರೀಕೃಷ್ಣನ ಪೂಜೆ ಅಷ್ಟಮಠಗಳೊಳಗೆ ಪರ್ಯಾಯ ವ್ಯವಸ್ಥೆಯಲ್ಲಿ ಬರುತ್ತದೆ. ಅಂದರೆ ಎಂಟು ಮಠಗಳು ಎರೆಡೆರಡು ವರ್ಷಕ್ಕೊಮ್ಮೆ ಶ್ರೀಕೃಷ್ಣನ ಪೂಜೆ ಮತ್ತು ದೇವಸ್ಥಾನ ನಿರ್ವಹಣೆ ನೋಡಿಕೊಂಡು ಬರುವ ವ್ಯವಸ್ಥೆ ಇದೆ. ಕೃಷ್ಣಾಪುರ ಮಠದ ಈ ಘಟನೆ ಆದ ನಂತರದಲ್ಲೇ ಕೃಷ್ಣಾಪುರ ಮಠದ ಪರ್ಯಾಯ ಸರದಿಯು ಬಂತು. ಸ್ವಾಮೀಜಿ ಪರ್ಯಾಯ ನಡೆಸಿದರು. ಎರಡು ವರ್ಷಗಳ ಪರ್ಯಾಯದ ಅಂತ್ಯದಲ್ಲಿ ಸ್ವಾಮೀಜಿ ವಕೀಲ ಕೆ. ಆರ್. ಕಾರಂತರನ್ನು ಮಠಕ್ಕೆ ಕರೆಸಿ ಸನ್ಮಾನ ಮಾಡಿದರು. ಆಗ ನಡೆದ ಘಟನೆ ಹೃದಯಸ್ಪರ್ಶಿ. ನೆರೆದ ಸಾರ್ವಜನಿಕರ ಎದುರು ಸ್ವಾಮೀಜಿ ಕಾರಂತರಿಗೆ ಸನ್ಮಾನ ಮಾಡುತ್ತ ಹೇಳಿದರು–"ಈ ಎರಡು ವರ್ಷಗಳ ಪರ್ಯಾಯದಲ್ಲಿ ನಾವೇನಾದರೂ ಪುಣ್ಯಗಳಿಸಿದ್ದಿದ್ದರೆ ಅವೆಲ್ಲ ನಿಮಗೆ!"

ಬಹುಶಃ ಇದಕ್ಕಿಂತ ದೊಡ್ಡ ಸನ್ಮಾನ, ಸಂಭಾವನೆ ಯಾವುದೂ ಇರಲಾರದು!

ವಕೀಲ ಕಾರಂತರದು ರಾಜಮರ್ಜಿ ಎನ್ನುತ್ತಾರೆ ಬನ್ನಂಜೆ ರಾಮಾಚಾರ್ಯರು. ಆ ಠೀವಿ, ಆ ಗತ್ತು, ಆ ಶಿಸ್ತು, ಆ ಕಠೋರವಾದ ಮಾತು ಅವರದೇ ಸ್ವತ್ತು ಎಂಬುದು ಅವರ ವಿಶ್ಲೇಷಣೆ. ಒಮ್ಮೆ ಮಂಗಳೂರಿನಲ್ಲಿ ಕಾರಂತರ ಕಚೇರಿಯಲ್ಲಿ ಕುಳಿತಿದ್ದಾಗ ಅವರ ಗುಮಾಸ್ತರೊಂದಿಗೆ ಮಾತಾಡುತ್ತಿದ್ದರಂತೆ ಬನ್ನಂಜೆಯವರು; ಮಾತು ಸ್ವಲ್ಪ ಗಟ್ಟಿಯಾಯಿತು ಎಂದು ತೋರುತ್ತದೆ. ಒಳಗಿನಿಂದ ಕಾರಂತರು ಗುಡುಗಿದರು. 'ಶ್ರೀನಿವಾಸಾ, ಯಾರು ಅದು ಮಾತಾಡುತ್ತಿರುವುದು? ಅವರಿಗೆ ಹೇಳು–ಒಂದೋ ನಾನು ಮಾತಾಡಬೇಕು, ಇಲ್ಲಾ ಅವರು. ಅವರು ಮಾತಾಡುವುದಾದರೆ ನಾನು ಎದ್ದು ಮನೆಗೆ ಹೋಗುತ್ತೇನೆ'. ಇಷ್ಟು ಮಾತು ಕೇಳಿಸಿಕೊಂಡವರೇ ಬನ್ನಂಜೆಯವರು ಮೆಲ್ಲನೆದ್ದು ಕಾರಂತರ ಕೋಣೆ ಪ್ರವೇಶಿಸಿದರಂತೆ, "ಓಹೋ! ನೀವಾ? ನನಗೆ ಬೆನ್ನಿಗೆ ಕಣ್ಣಿದೆಯೇ ಸ್ವಾಮಿ? ನೀವು ಬಂದು ಕುಳಿತಿದ್ದು ನನಗೆ ಹೇಗೆ ಗೊತ್ತಾಗಬೇಕು?" ಎಂದು ಅವರದೇ ಶೈಲಿಯಲ್ಲಿ ಸಮಾಧಾನ ಹೇಳಿ ಮಾತಿಗೆ ತೊಡಗಿದರಂತೆ. ಒಳಗೆ ಹೋದರೂ ಕಾರಂತರು ಚಾಟಿ ಬೀಸುವುದನ್ನು ತಪ್ಪಿಸಲಿಲ್ಲ!

ದಾವೆಗಳು ಕೋರ್ಟಿನಲ್ಲಿ ಮುಂದೂಡುವುದು ಸ್ವಾಭಾವಿಕವಷ್ಟೆ. ಅದನ್ನು ಕಕ್ಷಿದಾರರಿಗೆ ತಿಳಿಯಹೇಳುವಾಗಲೂ ಕಾರಂತರದೇ ವಿಶಿಷ್ಟ ಶೈಲಿ. "ಹದಿನೇಳಕ್ಕೆ ಹೋಯಿತಯ್ಯ ನಿಮ್ಮ ಕೇಸು. ಅಲ್ಲಿಯವರೆಗೆ ಹರಕು ಚಾಪೆ ಹಾಸಿಕೊಂಡು ಮಲಗಿ. ಆ ದಿನ ಎದ್ದುಕೊಂಡು ಬನ್ನಿ".

ಯಾವ ಕಕ್ಷಿಗಾರನೇ ಇರಲಿ, ಆತ ಎಷ್ಟು ದೊಡ್ಡವನೇ ಆಗಿರಲಿ, ಕಾರಂತರ ಹತ್ತಿರ ಸತ್ಯ ಹೇಳದೆ ಮುಚ್ಚುಮರೆ ಮಾಡಿದರೆ ಅವರು ಬೈದುಬಿಡುತ್ತಿದ್ದರು. ತನಗೆ ತೃಪ್ತಿಯಾದರೆ ಮಾತ್ರ ಅವರು ಆ ಕೇಸು ತೆಗೆದುಕೊಳ್ಳುತ್ತಿದ್ದರು. 'ಕಾರಂತರು ದೊಡ್ಡ ತಲೆಮಾರಿನ ದೊಡ್ಡವ್ಯಕ್ತಿ. ದೊಡ್ಡತನ ಕಳೆದುಕೊಳ್ಳದೇ ಬಾಳಿದರು. ಎಂದೂ ಸಣ್ಣತನ ಅವರ ಬದುಕಿನಲ್ಲಿ ತಲೆಹಾಕಲಿಲ್ಲ. ಇಂತಹ ಜನ ಅಪರೂಪ' ಎನ್ನುತ್ತಾರೆ ಬನ್ನಂಜೆ ರಾಮಾಚಾರ್ಯರು.

'ಕಾರಂತರು ವಕಾಲತ್ತು ಮಾಡುವ ರೀತಿ, ಕಕ್ಷಿಗಾರನ ಕುರಿತು ಅವರು ವಹಿಸಿಕೊಳ್ಳುವ ಜವಾಬ್ದಾರಿ ಸ್ವಲ್ಪ ಅಚ್ಚರಿಯನ್ನೇ ಉಂಟುಮಾಡುತ್ತಿತ್ತು' ಎಂದು ಕಾರಂತರ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಇನ್ನೊಬ್ಬ ವಕೀಲ ಭಾಸ್ಕರ ಶೆಟ್ಟಿ ಕಟ್ಟೆಮಾರ್ ಹೇಳುತ್ತಾರೆ. 'ಅವರು ವಕಾಲತ್ತು ಮಾಡುವ ರೀತಿಯಲ್ಲಿ ತತ್ವನಿಷ್ಠೆ ಕೂಡ ಇತ್ತು' ಎನ್ನುತ್ತಾರವರು.

೧೯೫೮ರಲ್ಲಿ ಕಾರಂತರು ಹೈಕೋರ್ಟ್ ವಕೀಲರಾಗಿ ಕೆಲಸ ಮಾಡಲು ಬೆಂಗಳೂರಿಗೆ ತೆರಳಿದರಷ್ಟೆ. ಆಗ ಮಂಗಳೂರಿನಿಂದ ಹಲವಾರು ಅಪೀಲುಗಳ ವಕಾಲತ್ತು ಅವರಿಗೆ ಸಿಗುತ್ತಿತ್ತು. ಆಗ ಸಿವಿಲ್ ಜಡ್ಜ್ (ಸಬ್ ಜಡ್ಜ್) ಕೋರ್ಟ್‌ನಲ್ಲಾದ ಎಲ್ಲಾ ತೀರ್ಮಾನಗಳಿಗೆ ಹೈಕೋರ್ಟ್‌ಗೆ ಅಪೀಲು (ಮೇಲ್ ಮನವಿ) ಹೋಗಬಹುದಾಗಿತ್ತು. ಆದರೆ ೧೯೬೦ರ ದಶಕದಲ್ಲಿ ಇಪ್ಪತ್ತು ಸಾವಿರ ರೂಪಾಯಿಗಿಂತ ಕಡಿಮೆ ಬೆಲೆಯ ವ್ಯಾಜ್ಯಗಳಲ್ಲಿ ಸಿವಿಲ್ ಜಡ್ಜರ (ಸಬ್ ಜಡ್ಜ್) ತೀರ್ಮಾನದ ಮೇಲೆ ಜಿಲ್ಲಾ ಜಡ್ಜರಲ್ಲಿಯೇ ಮೇಲ್ಮನವಿ ಸಲ್ಲಿಸಬಹುದು, ಉಚ್ಚ ನ್ಯಾಯಾಲಯಕ್ಕೆ ಬರಬೇಕಾಗಿಲ್ಲ ಎಂಬ ಕಾನೂನು ತಿದ್ದುಪಡಿ ಆಯಿತು. ಹಾಗಾಗಿ ಕಾರಂತರಲ್ಲಿದ್ದ ಹಲವಾರು ದಾವೆಗಳು ಬೆಂಗಳೂರಿನಿಂದ ಮಂಗಳೂರಿನಲ್ಲಿರುವ ಜಿಲ್ಲಾ ಕೋರ್ಟ್‌ಗೆ ವರ್ಗವಾದವು. ಆಗ ಜಿಲ್ಲಾ ಕೋರ್ಟ್‌ಗಳು ವರ್ಗವಾದ ಕೇಸ್ ಫೈಲುಗಳನ್ನು ಕಕ್ಷಿಗಾರರಿಗೆ ಹಿಂದಿರುಗಿಸುವಾಗ ಕೇಸ್ ಫೈಲುಗಳನ್ನು ಮಾತ್ರ ಹಿಂದಿರುಗಿಸಲಿಲ್ಲ. ಕಕ್ಷಿಗಾರರು ಕೊಟ್ಟಿದ್ದ ಸಂಭಾವನೆಯಲ್ಲಿ (ಫೀಸ್) ತಾನು ಮಾಡಿದ್ದ ಕೆಲಸದ ಬಗ್ಗೆ ಮಾತ್ರ ಸ್ವಲ್ಪಾಂಶ ತೆಗೆದುಕೊಂಡು ಉಳಿದ ಹಣವನ್ನು ಹಿಂದಿಗಿರುಗಿಸಿದರು! ಇಂತಹ ವೃತ್ತಿಪ್ರೀತಿ, ತತ್ವನಿಷ್ಠೆ ಮತ್ತು ಕಕ್ಷಿಗಾರರ ಬಗೆಗಿನ ಕಾಳಜಿ ಬೇರೆ ಯಾರಲ್ಲಿದೆ?

ಕಾರಂತರ ಶುದ್ಧ ಹಸ್ತದ ಬಗ್ಗೆ ಭಾಸ್ಕರ ಶೆಟ್ಟಿ ಇನ್ನೊಂದು ಉದಾಹರಣೆ ಹೇಳುತ್ತಾರೆ: ಅಳಿಯ ಸಂತಾನ ತಿದ್ದುಪಡಿ ಕಾಯ್ದೆ ೧೯೬೧ರನ್ನು ರದ್ದು ಮಾಡಬೇಕೆಂದು ಕೋರಿದ ರಿಟ್ ಅರ್ಜಿಯೊಂದನ್ನು ಕಾರಂತರ ಮೂಲಕ ೧೯೬೫ರ ಸುಮಾರಿಗೆ ಸುಪ್ರೀಂ ಕೋರ್ಟ್‌ನಲ್ಲಿ ದಾಖಲು ಮಾಡಲಾಗಿತ್ತು. ಈ ಕೇಸನ್ನು ಸುಪ್ರೀಂ ಕೋರ್ಟ್‌ನಲ್ಲಿ ಕಾರಂತರ ವತಿಯಿಂದ ಆಗಿನ ಅಟಾರ್ನಿ ಜನರಲ್ ಆಗಿದ್ದ ಎಂ.ಸಿ. ಸೆಟಲ್ವಾಡ್ ಎಂಬವರು ನಿರ್ವಹಿಸುತ್ತಿದ್ದರು. ಸೆಟಲ್ವಾಡ್‌ರಿಗೆ ಕೇಸಿನ ಸಂಬಂಧ ಹದಿನಾರು ಸಾವಿರ ರೂಪಾಯಿಗಳನ್ನು ಸಂದಾಯ ಮಾಡಲಾಗಿತ್ತು. ಕಕ್ಷಿದಾರರಿಗೆ ಆ ಕೇಸಿನಲ್ಲಿ ಜಯ ಲಭಿಸಿತು. ಕೇಸು ಮುಕ್ತಾಯವಾಗಿ ಸುಮಾರು ಆರು ತಿಂಗಳ ಬಳಿಕ ಭಾಸ್ಕರ ಶೆಟ್ಟಿ ಕಟ್ಟೆಮಾರ್ ಅವರಿಗೆ ಬೆಂಗಳೂರಿಗೆ ಬರಬೇಕೆಂದು ಕಾರಂತರು ಪತ್ರ ಬರೆದು ತಿಳಿಸಿದರು. ಕಟ್ಟೆಮಾರ್ ಅವರು ಬೆಂಗಳೂರಿಗೆ ಹೋದಾಗ ಹತ್ತು ಸಾವಿರ ರೂಪಾಯಿಗಳ ಚೆಕ್ ಅನ್ನು ಕಟ್ಟೆಮಾರ್ ಅವರ ಕೈಗೆ ಕೊಟ್ಟು ಕಾರಂತರು "ಸೆಟಲ್ವಾಡರು ನನ್ನ ಹೆಸರಲ್ಲಿ ಈ ಹಣವನ್ನು ಕಳುಹಿಸಿ ನಿಮಗೆ ಹಿಂದಿರುಗಿಸಲು ಹೇಳಿದ್ದಾರೆ. ನ್ಯಾಯದ ರಕ್ಷಣೆಗಾಗಿ ಕೋರ್ಟ್‌ನ ನ್ಯಾಯಪೀಠದ ಆಜ್ಞೆಗಳ ಮೇಲೆ ಸುಪ್ರೀಂ ಕೋರ್ಟ್‌ನವರೆಗೆ ನೀವು ನ್ಯಾಯರಕ್ಷಣೆಗಾಗಿ ಹೋರಾಡಿದ ಖುಷಿಯಿಂದಾಗಿ ಅವರು ಈ ಹಣವನ್ನು ಹಿಂದಿರುಗಿಸಿದ್ದಾರೆ, ತೆಗೆದುಕೊಳ್ಳಿ!" ಎಂದರಂತೆ.

ಕಟ್ಟೆಮಾರ್ ಹೇಳುತ್ತಾರೆ – "ಸುಮಾರು ಆರು ತಿಂಗಳ ಬಳಿಕ, ಸೆಟಲ್ವಾಡ್ ಅಷ್ಟೊಂದು ದೊಡ್ಡ ಮೊತ್ತವನ್ನು ಕಾರಂತರ ಹೆಸರಿನಲ್ಲಿ ಕಳಿಸಿ ನಮಗೆ ಹಿಂತಿರುಗಿಸುವಂತೆ ತಿಳಿಸಿದ್ದಾರೆ. ಕಾರಂತರು ಸ್ವಲ್ಪವೂ ವಿಳಂಬಿಸದೆ ನಮಗದನ್ನು ನೀಡಿದ್ದಾರೆ. ಒಂದು ವೇಳೆ ಕಾರಂತರು ಆ ಹಣವನ್ನು ತಾವೇ ಇಟ್ಟುಕೊಂಡು ನಮಗೆ ಹಿಂದಿರುಗಿಸದೇ ಇರಬಹುದಾಗಿತ್ತು. ಹಿಂದಿರುಗಿಸದಿದ್ದರೆ ನಮಗೆ ಗೊತ್ತೇ ಆಗುತ್ತಿರಲಿಲ್ಲ. ಆದರೆ ಕಾರಂತರ ಸತ್ಯನಿಷ್ಠೆ, ಪ್ರಾಮಾಣಿಕತೆ ಮತ್ತು ಶುದ್ಧ ಚಾರಿತ್ರ್ಯಕ್ಕೆ ಇದೊಂದೇ ಉದಾಹರಣೆ ಸಾಕು!"

ಧರ್ಮಸ್ಥಳದ ಆಡಳಿತಕ್ಕೆ ಸಂಬಂಧಿಸಿದಂತೆ ಧಾರ್ಮಿಕ ದತ್ತಿ ಇಲಾಖೆಯ ದಾವೆ ೧೯೬೦ರ ದಶಕದಲ್ಲಿ ಬಹಳ ಪ್ರಸಿದ್ಧವಾದುದಾಗಿತ್ತು. ಮಂತ್ರಿಯಾಗಿದ್ದಾಗ ಇಲಾಖೆಯ ಪರವಾಗಿ ಮಾತಾಡಿದ್ದ ಕಾರಂತರಿಗೆ, ನ್ಯಾಯವಾದಿಯೂ ದುಡಿಯಲಾರಂಭಿಸಿದಾಗ ಧರ್ಮಸ್ಥಳದ ಪರವಾಗಿ ವಾದಿಸುವುದು ಉಭಯಸಂಕಟವಾಗಿ ಕಂಡಿತು. (ಕಾರಂತರು ಅಪ್ರತಿಮ ವಕೀಲ ಮತ್ತು ಅತಿಸೂಕ್ಷ್ಮ ವಿಷಯಗಳನ್ನು ಹಿಡಿದುಕೊಂಡು ವಾದಿಸಿ ದಾವೆಗಳನ್ನು ಗೆದ್ದುಕೊಡುವ ವೀರಾಗ್ರಣಿ ನ್ಯಾಯವಾದಿಯಾಗಿದ್ದುದರಿಂದ ದೊಡ್ಡ ದೊಡ್ಡ ದಾವೆಗಳೆಲ್ಲ ಅವರಿಗೇ ಬರುತ್ತಿದ್ದವು).

ಈ ಕೇಸು ಕೋರ್ಟ್‌ನಲ್ಲಿ ವಾದಕ್ಕೆ ಬಂದಾಗ ವಾದ ಮಾಡಲು ಮದ್ರಾಸ್‌ನಿಂದ ಎಂ.ಕೆ. ನಂಬಿಯಾರರನ್ನು ಕರೆಸಬೇಕೆಂದು ಕಾರಂತರು ಹೇಳಿದರು.

"ನೀವು ಯಾಕೆ ವಾದ ಮಾಡುವುದಿಲ್ಲ?" ಕಟ್ಟೆಮಾರ್ ಕಾರಂತರನ್ನು ಕೇಳಿದರು.

"ನಾವೇ ಎಲ್ಲ ಸೇರಿ ಅದು ಎಂಡೋಮೆಂಟ್‌ಗೆ ಸೇರಬೇಕೆಂದು ಹೇಳಿ ಈಗ ಅದಕ್ಕೆ ವಿರುದ್ಧವಾಗಿ ಹೇಗೆ ವಾದ ಮಾಡಲಿ?" ಕಾರಂತರು ಕೇಳಿದರು.

"ಆದರೆ ಅದು ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ವಿಷಯ.... ಆಗ ನೀವು ಸಚಿವರಾಗಿದ್ದಿರಿ. ಈಗ ನ್ಯಾಯವಾದಿ ಅಲ್ಲವೇ? ಈಗ ಇದು ವೃತ್ತಿಗೆ ಸಂಬಂಧಿಸಿದ ವಿಷಯವಲ್ಲವೇ?" ಕಟ್ಟೆಮಾರ್ ಪ್ರಶ್ನೆ.

"ಅಲ್ಲ. ಅದು ಹಾಗಲ್ಲ. ನಮ್ಮ ಹಿಂದಿನ ಅಭಿಪ್ರಾಯಕ್ಕೆ ವಿರುದ್ಧವಾಗಿ ಕೆಲಸ ಮಾಡಲು ಆತ್ಮಸಾಕ್ಷಿ ಒಪ್ಪುವುದಿಲ್ಲ" ಕಾರಂತರೆಂದರು, "ಆದರೂ ನೀವು ಚಿಂತಿಸುವ ಅಗತ್ಯವಿಲ್ಲ. ನಂಬಿಯಾರ್ ನಿಪುಣ ವಕೀಲ. ಒಳ್ಳೇ ವಾದ ಮಂಡಿಸುತ್ತಾರೆ. ನಿಮಗೆ ಗೆಲುವು ದೊರೆಯುತ್ತದೆ.".

ಅವರು ಹೇಳಿದ ಹಾಗೆಯೇ ಆಯಿತು. ಧರ್ಮಸ್ಥಳಕ್ಕೆ ಗೆಲುವಾಯಿತು. ಸುಮಾರು ೧೯೪೭ರಲ್ಲಿ ಕಾರಂತರು ಅವಿಭಾಜ್ಯ ಮದ್ರಾಸ್ ರಾಜ್ಯದಲ್ಲಿ (ಮದರಾಸು ಸಂಸ್ಥಾನ) ಕಂದಾಯ ಮಂತ್ರಿಯಾಗಿದ್ದಾಗ ಧರ್ಮಸ್ಥಳವು ಧಾರ್ಮಿಕ ದತ್ತಿ ಇಲಾಖೆಗೆ ಸೇರಬೇಕೆಂದು ಹೇಳುತ್ತಿದ್ದರು. ಆದರೆ ಈಗಿನ ಅವರ ವಕೀಲ ವೃತ್ತಿಗೂ ಸರಕಾರದಲ್ಲಿ ಮಂತ್ರಿಯಾಗಿದ್ದಾಗಿನ ಧೋರಣೆಗೂ ಸಂಬಂಧ ಕಲ್ಪಿಸಬೇಕಾಗಿರಲಿಲ್ಲ. ಆದರೂ ಸುಮಾರು ಇಪ್ಪತ್ತು ವರ್ಷಗಳ ನಂತರವೂ ತತ್ವನಿಷ್ಠೆಯಿಂದ ತನಗೆ ಬರಬಹುದಾಗಿದ್ದ ದೊಡ್ಡ ವಕಾಲತ್ ಫೀಸಿನ ಲಾಭದ ಕುರಿತು ಕುಂಚಿತ್ತೂ ಚಿಂತಿಸದೆ, ಆ ಕೆಲಸವನ್ನು ಅರ್ಹ ಇನ್ನೊಬ್ಬರಿಗೆ ವಹಿಸಿಬಿಟ್ಟರು. ಇದು ಕಾರಂತರ ವ್ಯಕ್ತಿತ್ವ.

ಕಾರಂತರ ವಿಶೇಷ ಗುಣವೆಂದರೆ ಕಕ್ಷಿಗಾರರು ಅವರಲ್ಲಿ ವಿಶ್ವಾಸವಿಟ್ಟು ಸಮಸ್ಯೆಯನ್ನು ಅವರಿಗೆ ಒಪ್ಪಿಸಿದರೆ, ಅವರು ತಮ್ಮ ಕಕ್ಷಿಗಾರರನ್ನು ರಕ್ಷಿಸುವ ಜವಾಬ್ದಾರಿಯನ್ನು ತಾನೇ ವಹಿಸಿಕೊಳ್ಳುತ್ತಿದ್ದರು. ರಾಜಿ ವ್ಯವಹಾರಗಳಿದ್ದರೂ ಕೂಡ, ತನ್ನ ಸ್ವಂತ ಜವಾಬ್ದಾರಿಯಿಂದಲೇ ಕಕ್ಷಿಗಾರರ ಹಿತವನ್ನು ಕಾಪಾಡುತ್ತಿದ್ದರು. ತನ್ನ ಕಕ್ಷಿಗಾರ ತಪ್ಪು ಮಾಡಿದರೆ ಅಥವಾ ಅಸಾಧ್ಯ ರೀತಿಯ ವಾದಗಳನ್ನು ವಹಿಸಿದರೆ ಆತನನ್ನು ಬೆದರಿಸಿ ಸರಿದಾರಿಗೆ ತರುತ್ತಿದ್ದರು.

ಕಾರಂತರು ಸ್ವಾವಲಂಬಿ ಮತ್ತು ನಿರಹಂಕಾರಿ ಎಂಬುದಕ್ಕೆ ಕಟ್ಟೆಮಾರ್ ಒಂದು

ಘಟನೆ ಹೇಳುತ್ತಾರೆ – '೧೯೬೨-೬೩ರ ಸುಮಾರಿಗೆ ಸುಪ್ರೀಂ ಕೋರ್ಟ್‌ನಲ್ಲಿದ್ದ ಅಪೀಲೊಂದರ ಕುರಿತು ನವದೆಹಲಿಗೆ ಹೋಗಿದ್ದೆವು. ಅದು ಚಳಿಗಾಲದ ಸಮಯ. ಹೋಗುವ ಮೊದಲು ಬೆಂಗಳೂರಿನಲ್ಲಿ ಅವರೇ ನನ್ನನ್ನು ಕಮರ್ಷಿಯಲ್ ಸ್ಟ್ರೀಟ್‌ನಲ್ಲಿರುವ ಅಂಗಡಿಯೊಂದಕ್ಕೆ ಕರೆದುಕೊಂಡು ಹೋಗಿ ಉಣ್ಣೆಯ ಬಟ್ಟೆಗಳನ್ನು ತೆಗೆದುಕೊಳ್ಳಲು ಹೇಳಿದರು. ನಾನು ಸ್ವೆಟರ್ ಮಾತ್ರ ತೆಗೆದುಕೊಂಡುದನ್ನು ನೋಡಿ, ಅವರೇ ಉಣ್ಣೆಯ ಚಡ್ಡಿಯನ್ನು ಹುಡುಕಿ ಅದನ್ನೂ ತೆಗೆದುಕೊಳ್ಳುವಂತೆ ಹೇಳಿದರು. ಅವನ್ನು ಕೊಂಡುಕೊಂಡುದರಿಂದಾಗಿ ದೆಹಲಿಯ ಅತೀವ ಚಳಿಯಲ್ಲಿ ನಾನು ಬದುಕಿ ಉಳಿದುಕೊಂಡೆ. ನವದೆಹಲಿಯಲ್ಲಿ ನಾನೂ ಅವರೂ ಒಂದೇ ಹೋಟಲಿನಲ್ಲಿ ಉಳಿದುಕೊಂಡಿದ್ದೆವು. ನಾನು ಒಂದು ದಿನ ಅವರ ಬೆಡ್‌ಶೀಟನ್ನು ಕೊಡವಿ ಹಾಸಿಗೆಯನ್ನು ಒಪ್ಪ ಓರಣ ಮಾಡಿದೆ. ಅವರು ಹಿರಿಯರು, ಗೌರವಾನ್ವಿತರು ಎಂದು ಹಾಗೆ ಮಾಡಿದೆ. ಅದನ್ನು ನೋಡಿ ಅವರು, "ನೀವು ಹಾಗೆಲ್ಲ ನನ್ನ ಕೆಲಸ ಮಾಡಬೇಡಿ. ನನಗೆ ಅದು ಸರಿಬೀಳುವುದಿಲ್ಲ" ಎಂದರು. ಸಮಯ ಇರಲಿ, ಇಲ್ಲದಿರಲಿ ತನ್ನ ಕೆಲಸವನ್ನು ತಾನೇ ಮಾಡಬೇಕೆಂಬ ನಿಲುವು ಕಾರಂತರದು.

ಕಾರಂತರು ಆಗ ಸುಪ್ರಸಿದ್ಧ ವಕೀಲರಾಗಿದ್ದರೂ ಸಂಪತ್ತು ಮಾಡಿದವರಲ್ಲ. ತನ್ನಲ್ಲಿ ಶಕ್ತಿಯಿದೆ, ಯಾವಾಗ ಬೇಕಾದರೂ ತಾನು ಧನಸಂಚಯನ ಮಾಡಿಯೇನು ಎಂಬ ಆತ್ಮವಿಶ್ವಾಸವೇ ಅದಕ್ಕೆ ಕಾರಣ. ಈ ಆತ್ಮವಿಶ್ವಾಸ ಕೆಲವೊಮ್ಮೆ ಅವರನ್ನು, ಅವರ ಕುಟುಂಬದವರನ್ನು ತೊಂದರೆಗೀಡು ಮಾಡುತ್ತಿದ್ದುದೂ ಉಂಟು. ಕಾರಂತರು ಮೂರು ವರ್ಷ ಕಾರಾಗೃಹವಾಸದಲ್ಲಿದ್ದಾಗ ಅವರ ಕುಟುಂಬದವರಿಗೆ ಆರ್ಥಿಕ ತೊಂದರೆ ಉಂಟಾಯಿತು. ೧೯೪೪-೪೫ರಲ್ಲಿ ಉಳಿದ ಮುಖಂಡ ರೊಂದಿಗೆ ಇವರಿಗೂ ಬಿಡುಗಡೆ ಆಯಿತು. ಹೊರಗೆ ಬಂದವರಿಗೆ ಒಂದು ಕ್ಷಣ ವಿಶ್ರಮಿಸಲು ಆಗದೆ, ಕೂಡಲೇ ವಕೀಲಿ ವೃತ್ತಿ ಆರಂಭಿಸಬೇಕಾಯಿತು.

ಕಾಸರಗೋಡಿನ ಹಿರಿಯ ನ್ಯಾಯವಾದಿ, ಕರ್ನಾಟಕ ಏಕೀಕರಣ ಸಮಿತಿಯ ಪದಾಧಿಕಾರಿಗಳಲ್ಲೊಬ್ಬರಾಗಿರುವ ಎ.ವಿ. ಶ್ಯಾನುಭೋಗ್ ಅವರು ಕಿರಿಯ ನ್ಯಾಯವಾದಿಯಾಗಿ ಕೆ. ಆರ್. ಕಾರಂತರ ಬಳಿ ವೃತ್ತಿ ಕಲಿಕೆ ಆರಂಭಿಸಿದರು. ಕೆ. ಆರ್. ಕಾರಂತರು ತುಂಬ ಕೋಪಿಷ್ಠರು. ಅವರ ಬಳಿ ವೃತ್ತಿ ಕಲಿಕೆ ತುಂಬ ಕಷ್ಟ ಎಂದು ಶ್ಯಾನುಭೋಗರನ್ನು ಮಿತ್ರರು ಹೆದರಿಸಿದರಂತೆ. ಆದರೆ ಶ್ಯಾನುಭೋಗರಿಗೆ ಕಾರಂತರ ಹೆಸರು, ವೃತ್ತಿಪರತೆ ಮತ್ತು ಜ್ಞಾನದ ವಿಷಯವಾಗಿ ಗೊತ್ತಿದ್ದುದರಿಂದ ಅವರ ಬಳಿಯೇ ಕಲಿಯಬೇಕು ಎಂದು ಹಟತೊಟ್ಟರು. ಹೀಗೆ ೧೯೫೪ರಿಂದ ಶ್ಯಾನುಭೋಗರು ಕಾರಂತರ ಬಳಿ ಕಿರಿಯ ವಕೀಲರಾಗಿ ವೃತ್ತಿ ಜೀವನ ಆರಂಭಿಸಿದರು.

ನನಗಾದ ಅನುಭವವೇ ಬೇರೆ ಎನ್ನುತ್ತಾರೆ ಎ.ವಿ. ಶ್ಯಾನುಭೋಗರು: ಅವರು ತಮ್ಮ ಕಚೇರಿಯಲ್ಲಿ ಒಳ್ಳೆಯ ಶಿಸ್ತು ಮತ್ತು ಕ್ರಮಗಳನ್ನು ರೂಢಿಸಿಕೊಂಡಿದ್ದರಲ್ಲದೆ ಉನ್ನತ ಧ್ಯೇಯಗಳನ್ನು ಅಳವಡಿಸಿಕೊಂಡಿದ್ದ ವ್ಯಕ್ತಿಯಾಗಿದ್ದರು. ಹೊಸದಾಗಿ ಒಂದು ದಾವೆ ಬಂದಾಗ ರಿಜಿಸ್ಟರ್ ನೋಟೀಸ್ ಕಳಿಸಲು ಬೇಕಾದ ಮಾಹಿತಿಗಳನ್ನು ತಯಾರಿಸಲು ಒಬ್ಬೊಬ್ಬರಿಗೆ ವಹಿಸಿಕೊಡುವ ಕ್ರಮ ಕಾರಂತರದ್ದು. ಒಮ್ಮೆ ಅವರು ಒಂದು ಕೇಸಿನ ಕಟ್ಟು ನೀಡಿ ಅದಕ್ಕೆ ಸಂಬಂಧಿಸಿದಂತೆ ರಿಜಿಸ್ಟರ್ ನೋಟೀಸ್ ಕಳಿಸಲು ಬೇಕಾದ ಕಾನೂನಿನ ಕ್ರಮಗಳನ್ನು ತಯಾರಿಸಿ ಒಪ್ಪಿಸುವಂತೆ ನನಗೆ ಆದೇಶಿಸಿದರು. ನಾನು ಬಹಳ ಮುತುವರ್ಜಿಯಿಂದ ಅದನ್ನು ತಯಾರಿಸಿದೆ. ಗುರುಗಳಾದ ಕಾರಂತರು ಬೇರೆ ಕೋಣೆಯಲ್ಲಿ ಕುಳಿತಿರುತ್ತಿದ್ದರು. ಹೊರಬದಿಯಲ್ಲಿ ನಾವು ಕಿರಿಯ ವಕೀಲರು, ಸಹೋದ್ಯೋಗಿಗಳು ಕೂರುತ್ತಿದ್ದೆವು. ಯಾರನ್ನು ಕರೆಯುತ್ತಾರೋ ಅವರಿಗೆ ಮಾತ್ರ ಕೋಣೆಯೊಳಗೆ ಪ್ರವೇಶ. ಈ ಮಾಹಿತಿ ನೀಡಲು ನನಗೆ ಕರೆ ಬಂದಾಗ ನನಗೆ ಭಯದಿಂದ ಕಾಲು ಮೇಲೇಳಲಿಲ್ಲ. ಅಂತೂ ಹೇಗೋ ಸುಧಾರಿಸಿಕೊಂಡು ವಿವರಗಳನ್ನೆಲ್ಲ ತೆಗೆದುಕೊಂಡು ಅವರ ಕೋಣೆ ಪ್ರವೇಶಿಸಿದೆ. ಆಗ ಅವರು ಬಹಳ ವಾತ್ಸಲ್ಯದಿಂದ ಕುಳಿತುಕೊಳ್ಳಲು ಹೇಳಿ, ಕೇಸಿನ ಮಾಹಿತಿ ಕೇಳಿದರು. ನಾನು ತಯಾರಿಸಿದ ವಿವರಗಳನ್ನು ಅವರ ಕೈಗಿತ್ತಾಗ ವಾತ್ಸಲ್ಯದಿಂದ ಕುಳಿತುಕೊಳ್ಳಲು ಹೇಳಿದರು. ಓದಿದ ಬಳಿಕ ಕೆಲವು ಪ್ರಶ್ನೆಗಳನ್ನು ಕೇಳಿದರು ಸಮರ್ಪಕ ಉತ್ತರಗಳನ್ನೇ ಹೇಳಿದೆ. ಆಗ ಕಕ್ಷಿಗಾರರು ಕೂಡ ಅಲ್ಲೇ ಇದ್ದರು. ನನ್ನನ್ನು ಅಲ್ಲೇ ಇರಲು ಹೇಳಿ ಗುಮಾಸ್ತ ಶ್ರೀನಿವಾಸರಾಯರನ್ನು ಒಳಗೆ ಕರೆಸಿಕೊಂಡರು. ಶೀಘ್ರಲಿಪಿಯಲ್ಲಿ ರಿಜಿಸ್ಟರ್ ನೋಟೀಸ್ ತಯಾರಿಸುತ್ತ ಮಧ್ಯೆ ಮಧ್ಯೆ ವಿವರಗಳನ್ನು ನನ್ನಲ್ಲಿ ಕೇಳುತ್ತಿದ್ದರು. ಕೊನೆಗೆ ನೂರು ರೂಪಾಯಿ ಫೀಸು ಕೊಡುವಂತೆ ಕಕ್ಷಿಗಾರರಿಗೆ ತಿಳಿಸಿದರು. ಜೂನಿಯರ್ ಲಾಯರ್ ಆಗಿದ್ದ ನನಗೆ ಇಪ್ಪತ್ತೈದು ರೂಪಾಯಿ ಕೊಡಿದರು. ತುಂಬ ಕ್ಲಿಷ್ಟಕರವಾದ ಕೇಸ್ ಆಗಿತ್ತು ಅದು. ಕಕ್ಷಿಗಾರ ತೆರಳಿದ ಬಳಿಕ ಇದೇ ರೀತಿ ಶ್ರದ್ಧೆಯಿಂದ ಪರಿಶ್ರಮದಿಂದ ಕೆಲಸ ಮಾಡಬೇಕು; ಆಗ ಮಾತ್ರ ಒಳ್ಳೆಯ ವಕೀಲನಾಗಿ ಹೆಸರು ಸಂಪಾದಿಸಲು ಸಾಧ್ಯ ಎಂದು ತಿಳಿಸಿ ಹೇಳಿದರು.

ಆ ದಿನದಿಂದ ಕಾರಂತರ ಬಗ್ಗೆ ವಿಶೇಷವಾದ ಆದರಾಭಿಮಾನ ನನ್ನಲ್ಲಿ ಬೆಳೆಯಿತು. ಅವರು ಸಹೃದಯರು ಎಂದು ನಾನು ತಿಳಿದುಕೊಂಡೆ. ಕಕ್ಷಿಗಾರರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳದಿದ್ದರೆ ಬೈದುಬಿಡುತ್ತಿದ್ದರು. ಕೇಸಿನ ಕಟ್ಟನ್ನು ಸಿಟ್ಟಿನಿಂದ ಬಿಸಾಡಿದ ಪ್ರಸಂಗಗಳೂ ಇವೆ. ಇದ್ದುದ್ದನ್ನು ಇದ್ದ ಹಾಗೆ, ಕಂಡದ್ದನ್ನು ಕಂಡ ಹಾಗೆ ಹೇಳಿಬಿಡುತ್ತಿದ್ದರು.

"ವಕೀಲ ವೃತ್ತಿಯಲ್ಲಿ ಕಾರಂತರು ಉನ್ನತ ಸ್ಥಾನ ಗಳಿಸಿದರು. ಎಲ್ಲ ಅರ್ಹ ಕೆಲಸಗಳಿಗೂ ಬೆಂಬಲ ನೀಡುತ್ತಿದ್ದರು. ಯಾವ ಲಾಭದ ಆಸೆಯೂ ಇಲ್ಲದೆ ಜನಸೇವೆ ಮಾಡಿದರು" ಎಂದು ಹಿರಿಯ ಪತ್ರಕರ್ತರಾಗಿದ್ದ ಖಾದ್ರಿ ಶಾಮಣ್ಣ ಒಂದೆಡೆ ಬರೆಯುತ್ತಾರೆ.

ಕಾಸರಗೋಡಿನ ಇನ್ನೊಬ್ಬ ಹಿರಿಯ ಮುಖಂಡ, ವಿದ್ವಾಂಸ ಮತ್ತು ಕಾರಂತರೊಂದಿಗೆ ಒಡನಾಡಿದ ಪ್ರಾಂಶುಪಾಲ ಖಂಡಿಗೆ ಶ್ಯಾಮಭಟ್ಟರು "ಅವರೊಬ್ಬ ಅದ್ವಿತೀಯ ನ್ಯಾಯವಾದಿಗಳಾಗಿದ್ದರು. ಅವರ ವೃತ್ತಿಗೆ ಸಂಬಂಧಿಸಿದ ಕಾರ್ಯಗಳಿಗೆ ವಿಶೇಷ ಮಹತ್ವ ನೀಡುತ್ತಿದ್ದರು. ಕಾಯಕವೇ ಕೈಲಾಸ ಎಂಬುದು ಅವರ ಧೋರಣೆ. ಅವರು ತೆಗೆದುಕೊಂಡ ವ್ಯಾಜ್ಯಗಳನ್ನು ಸರಿಯಾಗಿ ಅಭ್ಯಾಸ ಮಾಡುತ್ತಿದ್ದರು. ಅತಿ ಸಣ್ಣ ವಿಷಯವನ್ನು ವಾದದಲ್ಲಿ ಬಿಡುತ್ತಿರಲಿಲ್ಲ. ಯಾವುದನ್ನು ಅಡಗಿಸಿಡುತ್ತಿರಲಿಲ್ಲ. ಕಿರಿಯ ಸಹಾಯಕ ನ್ಯಾಯವಾದಿಗಳು ವ್ಯಾಜ್ಯದ ವಿವರಗಳನ್ನು ಸರಿಯಾಗಿ ತಿಳಿದುಕೊಳ್ಳುವಂತೆ ಹೇಳುತ್ತಿದ್ದರು. ಅವರು ವಾದಿಸುವ ಸಂದರ್ಭಗಳಲ್ಲಿ ಆಯಾ ವ್ಯಾಜ್ಯಕ್ಕೆ ಸಂಬಂಧಿಸಿದ ಇತರೇ ನ್ಯಾಯಾಲಯಗಳ ತೀರ್ಪುಗಳನ್ನು ಸಾಧಾರವಾಗಿ, ಸಮಯಕ್ಕೆ ಸರಿಯಾಗಿ ಒದಗಿಸುವಂತೆ ಅವರ ಸಹಾಯಕರಿಗೆ ತಿಳಿಯಹೇಳುತ್ತಿದ್ದರು" ಎಂದು ಹೇಳುತ್ತಾರೆ.

ತಾನು ಹಿಡಿದ ಕೆಲಸದಲ್ಲಿ ಪೂರ್ಣವಾಗಿ ಮಗ್ನವಾಗುವುದು ಕೆ. ಆರ್. ಕಾರಂತರ ಜಾಯಮಾನವಾಗಿತ್ತು. ತನ್ನ ಜೊತೆಯಲ್ಲಿದ್ದವರನ್ನೂ ಕೆಲಸಗಳಲ್ಲಿ ಸಂಪೂರ್ಣ ಶ್ರದ್ಧೆ ಇಡುವಂತೆ ಪ್ರೇರೇಪಿಸುತ್ತಿದ್ದರು. ಬರೆಹದಲ್ಲಿ, ಬೆರಳಚ್ಚು ಮಾಡಿದ ಪತ್ರಗಳಲ್ಲಿ, ದಾಖಲೆಗಳಲ್ಲಿ ತಪ್ಪುಗಳಿರುವುದನ್ನು ಅವರು ಸಹಿಸುತ್ತಿರಲಿಲ್ಲ. ಹಾಳೆಯ ನಾಲ್ಕು ಬದಿಗಳಲ್ಲೂ ಸರಿಯಾಗಿ ಸ್ಥಳ ಬಿಟ್ಟು (ಮಾರ್ಜಿನ್) ಬರೆಯುವುದು, ಬರೆಸುವುದು ಅವರ ಕ್ರಮವಾಗಿತ್ತು. ಮನೆ ಇರಲಿ, ಕಚೇರಿ ಇರಲಿ, ಸಣ್ಣ ಸಣ್ಣ ಕೆಲಸಗಳಲ್ಲಿಯೂ ಅಚ್ಚುಕಟ್ಟನ್ನು ಬಯಸುತ್ತಿದ್ದರು. ಕಿರಿಯ ನ್ಯಾಯವಾದಿಗಳಿಗೆ ಸಹಾಯ ಮಾಡುತ್ತಿದ್ದರು. ಆದರೆ ತಪ್ಪನ್ನು, ಅವ್ಯವಸ್ಥೆಯನ್ನು ಸಹಿಸುತ್ತಿರಲಿಲ್ಲ.

ಸಮಯದ ಬೆಲೆಯನ್ನು ಕಾರಂತರು ಸರಿಯಾಗಿ ಅರಿತಿದ್ದರು. ಯಾವುದೇ ಕೆಲಸವನ್ನು ಸಮಯಕ್ಕೆ ಸರಿಯಾಗಿ ಮಾಡುತ್ತಿದ್ದರು. ಇತರರೂ ಸಮಯದ ಸದುಪಯೋಗ ಮಾಡಬೇಕೆಂದು ಹೇಳುತ್ತಿದ್ದರು. ನ್ಯಾಯಸ್ಥಾನಕ್ಕೆ ನ್ಯಾಯಾಧೀಶರು ಬರುವಲ್ಲಿ ಸ್ವಲ್ಪ ವಿಳಂಬವಾದರೂ ಅಸಮಾಧಾನಗೊಳ್ಳುತ್ತಿದ್ದರು. ತಾನು ವಾದಿಸಿದ ವಿಷಯವನ್ನು ಸಂಶಯ ನಿವಾರಣೆಗಾಗಿ ನ್ಯಾಯಾಧೀಶರು ಪುನಃ ಪುನಃ ಹೇಳುವಂತೆ ನಿರ್ದೇಶಿಸಿದರೆ ಕಾರಂತರಿಗೆ ಹಿತವಾಗುತ್ತಿರಲಿಲ್ಲ.

ಕೃಷಿಪ್ರಧಾನ ದೇಶವಾದ ಭಾರತದಲ್ಲಿ ಕೃಷಿಕರ ಏಳಿಗೆಯಿಂದಲೇ ಭಾರತದ ಅಭಿವೃದ್ಧಿ ಸಾಧ್ಯ ಎಂಬುದು ಕಾರಂತರ ನಂಬಿಕೆಯಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯ (ಆಗ ದಕ್ಷಿಣ ಕನ್ನಡ ಜಿಲ್ಲೆಯು ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳನ್ನೊಳಗೊಂಡಿದ್ದ ಪ್ರದೇಶವಾಗಿತ್ತು.) ಕೃಷಿಕರ ಏಳಿಗೆಗಾಗಿ ಜಿಲ್ಲೆಯ ಪ್ರಮುಖ ಮುಂದಾಳುಗಳೊಂದಿಗೆ – ಕೃಷಿಕರೊಂದಿಗೆ ಶ್ರಮಿಸುತ್ತಿದರು. ಕೃಷಿಕರ ಹಾಗೂ ಇತರ ಕುಟುಂಬಗಳಲ್ಲಿ ತಲೆದೋರಿದ ವಿವಾದಗಳನ್ನು ಪಂಚಾಯ್ತಿದಾರರಾಗಿ (Arbitrator) ತೀರಿಸಿದ ಸಂದರ್ಭಗಳು ಹಲವಾರು. ಅಂತಹ ಕೆಲಸಗಳಿಗೆ ಅವರು ಸ್ವೀಕರಿಸುತ್ತಿದ್ದ ಪ್ರತಿಫಲ ತುಂಬ ಕಡಿಮೆಯಾಗಿತ್ತು. ಪಂಚಾಯ್ತಿದಾರರಾಗಿ ನ್ಯಾಯ ತೀರಿಸುವಾಗ ಕೆಲವೊಮ್ಮೆ ಎರಡು ಪಕ್ಷದವರಿಗೂ ಸಂಪೂರ್ಣ ತೃಪ್ತಿಯಾಗುವುದು ಸಾಧ್ಯವಿರಲಿಲ್ಲ. ಒಂದು ಸಲ ಕಾರಂತರು ಚುನಾವಣೆ[illegible] ನಿಂತಿದ್ದ ಸಂದರ್ಭದಲ್ಲಿ ಅವರ ತೀರ್ಮಾನದಿಂದ ಅಸಮಾಧಾನಗೊಂಡಿದ್ದ ಪ್ರಮು[illegible] ರೊಬ್ಬರನ್ನು ಸಂದರ್ಶಿಸುವಂತೆ (ರಾಜಕೀಯ ದೃಷ್ಟಿಯಿಂದ) ಕಾರ್ಯಕರ್[illegible]ರು ಕೇಳಿಕೊಂಡಾಗ ಕಾರಂತರು, 'ಆಗಬಹುದು. ಆದರೆ "Not to say that my judgement is wrong" (ಭೇಟಿಯಾಗುವೆ; ಆದರೆ ನನ್ನ ತೀರ್ಮಾನ ತಪ್ಪಾಗಿತ್ತು ಎಂದು ವಿಷಾದ ಸೂಚಿಸಲಾರೆ) ಎಂದು ಹೇಳಿದರು. ಇದು ಅವರ ಆತ್ಮಾಭಿಮಾನದ ಔನ್ನತ್ಯವನ್ನು ತೋರಿಸುತ್ತದೆ.

ಬಿ.ವಿ. ಕಕ್ಕಿಲ್ಲಾಯರು ರಾಜಕೀಯ ಮುಖಂಡರಾಗಿ, ಸಾಮಾಜಿಕ ಕಾರ್ಯಕರ್ತರಾಗಿ ಹೆಸರಾದವರು. ಕಕ್ಕಿಲ್ಲಾಯರ ಹೆಸರು ಹೋರಾಟದೊಂದಿಗೆ ಥಳಕು ಹಾಕಿಕೊಂಡಿದೆ. ಕಕ್ಕಿಲ್ಲಾಯರು ಕಮ್ಯೂನಿಸ್ಟ್ ಪಕ್ಷದವರಾದರೂ ಚಿಕ್ಕಂದಿನಲ್ಲಿ ಕೆ.ಆರ್.ಕಾರಂತರನ್ನು ನೋಡಿ ತನ್ನ ವ್ಯಕ್ತಿತ್ವ ರೂಪಿಸಿಕೊಂಡವರು. ವಿದ್ಯಾರ್ಥಿಯಾಗಿದ್ದಾಗ ವಿದ್ಯಾರ್ಥಿ ಸಂಘದ ಹೋರಾಟಗಳಿಗೆ ಕಾರಂತರ ಮಾರ್ಗದರ್ಶನ ಪಡೆಯುತ್ತಿದ್ದರು. ಅ[illegible]ರು ಕಾರಂತರ ನ್ಯಾಯನಿಷ್ಠುರತೆ ಬಗ್ಗೆ, ಬಡವರ ಬಗ್ಗೆ ಇದ್ದ ಕಳಕಳಿಯ ಬಗ್ಗೆ ವಿವರಿಸುತ್ತಾರೆ.

"ಗ್ಲ್ಯಾಳರ ಕಾಲದಲ್ಲಿ ಮದ್ರಾಸ್‌ನಲ್ಲಿ ಗವರ್ನರ್ ಆಡಳಿತ ಇತ್ತು. ಶಾಸಕರಾಗಿದ್ದ ಕಾರಂತರು ಆಗ ಮಂಗಳೂರಿನಲ್ಲಿ ವಕೀಲಿವೃತ್ತಿ ನಡೆಸುತ್ತಿದ್ದರು. ಆ ಸಮಯದಲ್ಲಿ ಕಾಸರಗೋಡು ತಾಲೂಕಿನ ಪನತ್ತಡಿ ಎಂಬ ಗುಡ್ಡಗಾಡು ಪ್ರದೇಶದ ಕುಗ್ರಾಮದ ರೈತರಿಗೆ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದುದನ್ನು 'ದೇಶಾಭಿಮಾನಿ' ಎಂಬ ಮಲಯಾಳಂ ಪತ್ರಿಕೆ ಬಯಲಿಗೆಳೆಯಿತು. ಒಬ್ಬ ಅಧಿಕಾರಿಯ ದುರಾಡಳಿತ ಮತ್ತು ಭ್ರಷ್ಟಾಚಾರವನ್ನು ಕಟುವಾಗಿ ಬರೆಯಿತು. ಸಂಬಂಧಪಟ್ಟ ಅಧಿಕಾರಿ ಆ ಪತ್ರಿಕೆಯ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿದ.

ವಾಸ್ತವಾಂಶಗಳನ್ನು ದಾಖಲಿಸಿ, ನ್ಯಾಯಾಲಯದ ಮುಂದೆ ಜವಾಬ್ದಾರಿಯುತ ಸಾಕ್ಷಿದಾರರೊಬ್ಬರು ನಿಜಸ್ಥಿತಿಯನ್ನು ಮಂಡಿಸದಿದ್ದರೆ ಆ ಪತ್ರಿಕೆಯು ಹೊರಲಾರದ ದಂಡ ತೆರಬೇಕಾಗುತ್ತಿತ್ತು. ಸಂಪಾದಕರು ಶಿಕ್ಷೆಗೆ ಗುರಿಯಾಗುತ್ತಿದ್ದರು. ಅದೊಂದು ಇಕ್ಕಟ್ಟಿನ ಪ್ರಸಂಗವಾಗಿತ್ತು. (ಪತ್ರಿಕೆ ಮತ್ತು ನಾವೆಲ್ಲ ಕಮ್ಯೂನಿಸ್ಟರಾಗಿದ್ದೆವು ಮತ್ತು ಕೆ. ಆರ್. ಕಾರಂತರು ಕಾಂಗ್ರೆಸಿಗರಾದ್ದರು ಎಂಬುದನ್ನು ಉಲ್ಲೇಖಿಸಬೇಕು).

ಇಂತಹ ಸನ್ನಿವೇಶದಲ್ಲಿ ನಾನು ಮತ್ತು ಕಾಂಞಂಗಾಡಿನ ಮುಖಂಡರಾದ ಕೆ. ಮಾಧವನ್ ಎಂಬವರು ಕೆ. ಆರ್. ಕಾರಂತರನ್ನು ಭೇಟಿಮಾಡಿ ಸಮಸ್ಯೆಯನ್ನು ವಿವರಿಸಿದೆವು. ಭ್ರಷ್ಟಾಚಾರಕ್ಕೂ ಅಕ್ರಮಗಳಿಗೂ ವಿರೋಧಿಯಾಗಿದ್ದ ಕಾರಂತರು ಕೂಡಲೇ ಪನತ್ತಡಿಗೆ ಹೋಗಲು ನಿರ್ಧರಿಸಿದರು. ಅವರ ಜೊತೆಯಲ್ಲಿ ನಾನು, ಮಾಧವನ್, ನನ್ನ ಅಣ್ಣ ಶ್ರೀಧರ ಕಕ್ಕಿಲ್ಲಾಯ ಮತ್ತು ಇನ್ನೊಬ್ಬ ಮುಖಂಡರಾದ ಡಾ. ಪರ್ತಜೆ ನಾರಾಯಣ ಭಟ್ಟರು ಪನತ್ತಡಿಗೆ ಹೋದೆವು. ಕಾರಂತರು ಪ್ರತಿಯೊಬ್ಬ ನೊಂದ ರೈತನನ್ನೂ ವಿಚಾರಿಸಿ, ಹೇಳಿಕೆ ಬರೆದುಕೊಂಡು, ರುಜು ಮತ್ತು ಸಾಕ್ಷಿ ಪಡೆದು ದಾಖಲೆ ಮಾಡಿಕೊಂಡರು. ಈ ಹೇಳಿಕೆಗಳ ಆಧಾರದಲ್ಲಿ ಒಂದು ವರದಿ ತಯಾರಿಸಿ ಸರಕಾರಕ್ಕೆ ಕಳಿಸಿಕೊಟ್ಟರು. ನ್ಯಾಯಾಲಯದಲ್ಲಿ ಸ್ವತಃ ಹಾಜರಾಗಿ ಸಾಕ್ಷಿ ನುಡಿದು, ದಾಖಲೆಗಳನ್ನೆಲ್ಲ ಹಾಜರುಪಡಿಸಿದರು. ಕಾರಂತರ ಸಾಕ್ಷಿಯ ಬಲದಿಂದ ಪತ್ರಿಕೆಯ ಮೇಲಿನ ಖಟ್ಲೆ ವಜಾ ಆಯಿತಷ್ಟೇ ಅಲ್ಲ, ಖಟ್ಲೆ ಹೂಡಿದ್ದ ಅಧಿಕಾರಿಯು ವಾಗ್ದಂಡನೆಗೆ ಒಳಗಾದ. 'ದೇಶಾಭಿಮಾನ' ಪತ್ರಿಕೆಯನ್ನು ಕಾರಂತರು ಅದು ಮಾಡಿದ ಜನಸೇವೆಗಾಗಿ ಶ್ಲಾಘಿಸಿದರು. ಅದರ ರಕ್ಷಣೆಗೆ ಇಷ್ಟೆಲ್ಲ ತೊಂದರೆ ತೆಗೆದುಕೊಂಡರು. ಕಾರಂತರ ಶ್ರೇಷ್ಠ ವ್ಯಕ್ತಿತ್ವಕ್ಕೂ ರಾಜಕೀಯ ಸದ್ವರ್ತನೆಗೂ ಪ್ರಜಾಪ್ರತಿನಿಧಿಯೆಂಬ ಸ್ಥಾನದ ಕರ್ತವ್ಯಪಾಲನೆಗೂ ಈ ಘಟನೆ ಒಂದು ಉದಾಹರಣೆಯಾಗಿದೆ." ಎಂದು ಬಿ.ವಿ. ಕಕ್ಕಿಲ್ಲಾಯರು ಕಾರಂತರ ಸತ್ಯಪರ ನಿಲುವನ್ನು ಹೊಗಳುತ್ತಾರೆ.

ಕಾರಂತರು ಅಂದು ಪನತ್ತಡಿಗೆ ಭೇಟಿ ನೀಡಿದ ನೆನಪಿಗಾಗಿ ಸ್ವಲ್ಪ ಸಮಯದಲ್ಲೇ ಅಲ್ಲಿ ಒಂದು ಕಿರಿಯ ಪ್ರಾಥಮಿಕ ಶಾಲೆ ಆರಂಭವಾಯಿತು. (ಅಜ್ಞಾನ ತುಂಬಿಕೊಂಡಿದ್ದ ಮತ್ತು ಹೇಳಿಕೆಗಳಿಗೆ ಎಡಗೈ ಹೆಬ್ಬೆಟ್ಟು ಒತ್ತುತ್ತಿದ್ದ ಹಳ್ಳಿಗರಿಗೆ ಕಾರಂತರು ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದ್ದರು). ಅನಂತರ ಅದು ಪ್ರೌಢಶಾಲೆಯಾಗಿ ಪರಿವರ್ತನೆಗೊಂಡು ಕಾರಂತರಿಗೊಂದು ಸ್ಮಾರಕದಂತೆ ತಲೆಯೆತ್ತಿ ನಿಂತಿದೆ.

ನ್ಯಾಯವಾದಿಗಳಾಗಿ ಕಾರಂತರ ನ್ಯಾಯ ಪಕ್ಷಪಾತತನ, ಉದಾರತೆ, ಎಲ್ಲ ಅಲ್ಪತೆಗಳನ್ನೂ ಮೀರಿದ ಉನ್ನತ ಧ್ಯೇಯನಿಷ್ಠೆಗಳನ್ನು ಬಿ.ವಿ.ಕಕ್ಕಿಲ್ಲಾಯರು ಇನ್ನೊಂದು

ಉದಾಹರಣೆಯ ಮೂಲಕ ಸ್ಪಷ್ಟಪಡಿಸುತ್ತಾರೆ: ಒಮ್ಮೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್‌ಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರರಾಗಿದ್ದ ಉದ್ಯಮಪತಿಯೊಬ್ಬರ ವಿರುದ್ಧ ನಾನು ಕಮ್ಯೂನಿಸ್ಟ್ ಉಮೇದ್ವಾರನಾಗಿ ಸ್ಪರ್ಧಿಸಿದೆ. ನನ್ನನ್ನು ಹಿಂತೆಗೆಸಲು ನಡೆದ ಪ್ರಯತ್ನವನ್ನು ನಾನು ತಿರಸ್ಕರಿಸಿದೆ. ನಾನು ಕೆಲವೇ ಮತಗಳಿಂದ ಸೋತೆ. ಆದರೆ ನನ್ನ ಎದುರಾಳಿಯ ಜಯವು ಹಣ. ಕಾರು, ಕಾಫಿ, ತಿಂಡಿ, ಊಟ ಮೊದಲಾದ ಆಮಿಷಗಳನ್ನೊಡ್ಡಿ ಪಡೆದದ್ದೆಂದು ನಾನು ನ್ಯಾಯಾಲಯದಲ್ಲಿ ಖಟ್ಲೆ ಹೂಡಿದೆ. ಆರೋಪಗಳು ಸಾಬೀತಾದವು. ಎದುರಾಳಿಯ ಸ್ಥಾನ ರದ್ದಾಯಿತು. ಮೇಲ್ಮನವಿಯಲ್ಲೂ ಅದೇ ತೀರ್ಮ ಖಾಯಂ ಆಯಿತು. ಆ ಖಟ್ಲೆಯಲ್ಲಿ ನನ್ನ ಪರವಾಗಿ ಜಿಲ್ಲಾ ನ್ಯಾಯಾಲಯದಲ್ಲೂ ಶ್ರೇಷ್ಠನ್ಯಾಯಾಲಯದಲ್ಲೂ ಉಚಿತವಾಗಿ ವಕಾಲತ್ತು ವಹಿಸಿ ನ್ಯಾಯ ಗೆಲ್ಲಿಸಿಕೊಟ್ಟವರು ರಾಮಕೃಷ್ಣ ಕಾರಂತರು. ಅವರ ದೃಷ್ಟಿಯಲ್ಲಿ ಅದು ಚುನಾವಣಾ ಅಕ್ರಮವಾದುದರಿಂದ ರಾಜಕೀಯ ಪರಿಶುದ್ಧತೆಗಾಗಿ ನಡೆಸಿದ ಹೋರಾಟವಾಗಿತ್ತು. ನ್ಯಾಯವಾದಿಯಾಗಿ ಅವರು ಅತ್ಯಂತ ಸಮರ್ಥರಾಗಿದ್ದರಷ್ಟೇ ಅಲ್ಲ, ಆದರ್ಶವಂತರೂ ನಿರ್ದಾಕ್ಷಿಣ್ಯ ಪ್ರವೃತ್ತಿಯವರೂ ಆಗಿದ್ದರು. ಕೆ. ಆರ್. ಕಾರಂತರು ಕಾಂಗ್ರೆಸಿಗರಾಗಿದ್ದರು ಎಂಬುದನ್ನು ಇಲ್ಲಿ ಮತ್ತೊಮ್ಮೆ ನೆನಪಿಸಿಕೊಳ್ಳಬೇಕಾಗಿದೆ.

ಕಾರಂತರು ಹಣಕ್ಕೆ ಎಂದೂ ಆಸೆಪಟ್ಟವರಲ್ಲ; ಅವರು ಬಯಸಿದ್ದರೆ ಆ ಕಾಲಕ್ಕೇ ಕೋಟಿ ಕೋಟಿ ಸಂಪಾದಿಸಬಹುದಾಗಿತ್ತು. ಹಿಂದೆ ಉಲ್ಲೇಖಿಸಿದ ಕೃಷ್ಣಾಪುರ ಮಠದ ದಾವೆಯ ಸಂಬಂಧ ಪಾರುಪತ್ಯಗಾರರು ಕಾರಂತರಿಗೆ "ನಮ್ಮದು ಮಠ, ದೊಡ್ಡ ಸಂಭಾವನೆ ಕೊಡಲು ಸಾಧ್ಯವಾಗದು. ತಂದಿರುವ ಈ ಎರಡು ಸಾವಿರ ರೂಪಾಯಿ ಒಪ್ಪಿಸಿಕೊಳ್ಳಬೇಕು" ಎಂದರಂತೆ.

ಕಾರಂತರಿಗೆ ಎಲ್ಲಿತ್ತೋ ಏನೋ; ಬಂದೇ ಬಿಟ್ಟಿತು ಕೋಪ. "ನಿಮ್ಮ ಸ್ವಾಮೀಜಿಗಳಿಗೇನು ದುಡ್ಡು ಜಾಸ್ತಿಯಿದೆಯೇ? ನಾನು ಹಣಕ್ಕಾಗಿ ಈ ಕೇಸು ವಹಿಸಿಕೊಂಡವನಲ್ಲ. ಸ್ವಾಮಿಜಿಗಳಿಗೆ ಅನ್ಯಾಯವಾಗಿದೆ, ನ್ಯಾಯ ಸಿಗಲಿ ಎಂಬ ದೃಷ್ಟಿಯಿಂದ ವಹಿಸಿಕೊಂಡೆ" ಎಂದವರೇ ಅದರಲ್ಲಿ ಅರ್ಧದಷ್ಟು ಮಾತ್ರ ತೆಗೆದುಕೊಂಡು ಉಳಿದರ್ಧವನ್ನು ಒಗೆದೇ ಬಿಟ್ಟರಂತೆ! ಇದು ಹಣದ ಬಗ್ಗೆ ಕಾರಂತರಿಗಿದ್ದ ಧೋರಣೆ.

ನ್ಯಾಯಾಲಯವೆಂಬುದು ಅನ್ಯಾಯಕ್ಕೊಳಗಾದವರಿಗೆ ನ್ಯಾಯ ದೊರಕಿಸಿ ಕೊಡಬೇಕು, ಅದು ಸತ್ಯಪರವಾಗಿರಬೇಕು ಎಂಬ ನಿಲುವು ಕಾರಂತರದು.

'ನಿರ್ಭೀತ ವ್ಯಕ್ತಿ' ಎಂಬುದಕ್ಕೆ ಒಂದು ಭಾಷ್ಯದಂತಿದ್ದರು ಅವರು. ಸತ್ಯವೆಂಬುದು ಮನದಟ್ಟಾದರೆ ಅವರು ಯಾರಿಗೂ ತಲೆಬಾಗುತ್ತಿರಲಿಲ್ಲ. ೧೯೩೯ರಲ್ಲಿ ಎರಡನೇ

ಪ್ರಪಂಚ ಮಹಾಯುದ್ಧ ಆರಂಭವಾದ ಸಂದರ್ಭದ ಒಂದು ಘಟನೆ ನೆನಪಿಸಿಕೊಂಡರೆ ಅವರ ನಿರ್ಭೀತ ವ್ಯಕ್ತಿತ್ವ ಮನವರಿಕೆಯಾಗದಿರದು: ಆಗ ದೇಶದಾದ್ಯಂತ 'ಆರ್ಡಿನೆನ್ಸ್' ಜಾರಿಯಾಗಿತ್ತು. (ಆರ್ಡಿನೆನ್ಸ್ ಎಂದರೆ ಸ್ವಾತಂತ್ರ್ಯವಿಲ್ಲದ ಕಠಿಣ ಆಡಳಿತ. ಒಂದು ರೀತಿಯಲ್ಲಿ ಪೊಲೀಸ್ ರಾಜ್ಯ.) ಬ್ರಿಟೀಷ್ ಸಾಮ್ರಾಜ್ಯದ ಸ್ವೇಚ್ಛಾಚಾರದ, ನಿರಂಕುಶ ಪ್ರಭುತ್ವದ ಕರಾಳನೃತ್ಯ ಎಲ್ಲೆಂದರಲ್ಲಿ ನಡೆಯುತ್ತಿತ್ತು. ಯಾರೂ ಪ್ರಶ್ನೆ ಮಾಡುವಂತಿರಲಿಲ್ಲ. ಇಂತಹ ಸಂದರ್ಭದಲ್ಲಿ ಆಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಿಸ್ಟರ್ ಗಾನ್ ಎಂಬ ಬ್ರಿಟಿಷ್ ಅಧಿಕಾರಿ ಜಿಲ್ಲಾಧಿಕಾರಿಯಾಗಿ ನಿರಂಕುಶಪ್ರಭುವಾಗಿದ್ದ. ಮಿ. ಗಾನ್‌ಗೆ ಸೌಜನ್ಯ, ನ್ಯಾಯಪರತೆ ಎಂದರೆ ಏನೆಂದೇ ಗೊತ್ತಿರಲಿಲ್ಲ. ಎಲ್ಲರ ಮೇಲೂ ಅಧಿಕಾರದ ದರ್ಪ ತೋರಿಸುತ್ತಿದ್ದ. ಮಿ. ಗಾನ್ ಸ್ವಾರ್ಥಿಯೂ ಆಗಿದ್ದ. ಆಗ ಅವನು ಒಂದು ಬಾಡಿಗೆ ಮನೆಯಲ್ಲಿ ವಾಸವಾಗಿದ್ದ. ಆದರೆ ಮನೆಯ ಮಾಲಿಕರಿಗೆ ಬಾಡಿಗೆ ಕೊಡುವ ಪರಿಪಾಟ ಇಟ್ಟುಕೊಂಡಿರಲಿಲ್ಲ. ಬಾಡಿಗೆ ಯಾಕೆ ಕೊಡಬೇಕು? ತಾನು ಯಾರ ಮನೆಯಲ್ಲಿ ಬಾಡಿಗೆಗಿರುವೆನೋ ಅದು ಆ ಮನೆಯ ಮಾಲಿಕರಿಗೆ ಭೂಷಣ ಎಂಬುದು ಅವನ ಧೋರಣೆಯಾಗಿತ್ತು! ಮನೆಯ ಮಾಲಿಕಳಾದ ಶ್ರೀಮತಿ ಬ್ರಿಟ್ಟೋ ಎಂಬ ಮಹಿಳೆಗೆ ಈ ವಾದಸರಣಿ ಹಿಡಿಸಲಿಲ್ಲ. ಈ ಮಹಿಳೆಯಲ್ಲಿ ಕೆಚ್ಚೂ ಇತ್ತು. ಅಂದರೆ ಆಕೆ ಅಂಜುಗುಳಿಯಾಗಿರಲಿಲ್ಲ. ಬಾಡಿಗೆ ಕೊಡದ ಮಿ. ಗಾನ್ ವಿರುದ್ಧ ಕೋರ್ಟ್‌ನಲ್ಲಿ ಖಟ್ಲೆ ಹೂಡಲು ನಿಶ್ಚಯಿಸಿದಳು. ಆಗ ಮಂಗಳೂರಿನಲ್ಲಿ ಪ್ರಸಿದ್ಧರಾಗಿದ್ದ ಎಲ್ಲ ವಕೀಲರನ್ನೂ ಎಡತಾಕಿದಳು. ಆದರೆ ಜಿಲ್ಲಾಧಿಕಾರಿ ವಿರುದ್ಧ ನಿಲ್ಲಲು ಯಾರೂ ಸಿದ್ಧರಿರಲಿಲ್ಲ. ಬ್ರಿಟ್ಟೋ ಹಿಡಿದ ಹಟ ಬಿಡಲಿಲ್ಲ. ಆಕೆ ಸೀದಾ ಕೆ. ಆರ್. ಕಾರಂತರಲ್ಲಿಗೆ ಬಂದಳು. ಕಾರಂತರು ತಮ್ಮ ಸ್ವಭಾವಕ್ಕನುಗುಣವಾಗಿ ಹಿಂದೆ ಮುಂದೆ ಯೋಚಿಸದೆ ಗಾನ್ ವಿರುದ್ಧ ದಾವೆ ಹೂಡಲು ಸಿದ್ಧವಾದರು. ಎಲ್ಲ ದಾಖಲೆಗಳನ್ನೂ ಸಿದ್ಧಪಡಿಸಿ ದಾವೆಯನ್ನು ದಾಖಲು ಮಾಡಿಯೇ ಬಿಟ್ಟರು. ಗಾನ್ ಕೋರ್ಟ್‌ನ ಪಂಜರಕ್ಕೆ ಹತ್ತಿ ಪಾಟೀಸವಾಲಿಗೆ ಉತ್ತರಿಸಬೇಕಾಗಿ ಬಂತು. ಗಾನ್ ಕಾರಂತರ ತೀಕ್ಷ್ಣ ಪ್ರಶ್ನೆ ಹಾಗೂ ವಾಗ್ಜಾಲದಲ್ಲಿ ಸಿಲುಕಿ ತತ್ತರಿಸಿ ಹೋದ. ಕೊನೆಗೆ ಆತ ಕೋರ್ಟ್‌ನಲ್ಲಿ ತಪ್ಪೊಪ್ಪಿಕೊಂಡು ಹಿಂದಿನ ಬಾಕಿ ಸಹಿತ ಬಾಡಿಗೆ ಕೊಡಬೇಕಾಗಿ ಬಂತು.

೧೯೩೧-೩೫ರ ಅವಧಿಯಲ್ಲಿ ಅಡಿಕೆಯ ಬೆಲೆ ಕುಸಿದು ಕೃಷಿಕರೆಲ್ಲ ಕಂಗಾಲಾಗಿದ್ದರು. ಕಾಸರಗೋಡು ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆ ಪ್ರಮುಖ ಬೆಳೆ. ಆಗ ಕಾರಂತರು ಅಡಿಕೆ ಬೆಳೆಗಾರರ ಸಂಘ ಸ್ಥಾಪಿಸಿ, ಶ್ರಮಿಸಿ, ರೈತರ ಕಣ್ಣೀರನ್ನು ಒರೆಸಲು ಪ್ರಯತ್ನಿಸಿದರು. ಕಾರಂತರ ಈ ಪ್ರಯತ್ನದಿಂದಾಗಿ

ಆಗಿನ ಬ್ರಿಟಿಷ್ ಸರಕಾರ ಅಡಿಕೆ ಬೆಳೆಗಾರರ ಹಿತಕಾಯಲು ಕೆಲವೊಂದು ಕ್ರಮಗಳನ್ನು ಕೈಗೊಂಡಿತು. ಕಾರಂತರ ಈ ಪ್ರಯತ್ನದ ನಂತರ ಅವರು ದಕ್ಷಿಣ ಕನ್ನಡ ಜಿಲ್ಲೆಯ ಅಡಿಕೆ ಬೆಳೆಯುವ ಪ್ರದೇಶದಲ್ಲಿ ಸಾಕಷ್ಟು ಪ್ರಸಿದ್ಧರಾದರು. ಈ ಪ್ರದೇಶವೇ ಮುಂದೆ ಅವರ ಚುನಾವಣಾ ಕ್ಷೇತ್ರವಾಯಿತು.

ಕಾರಂತರಿಗೆ ಆತ್ಮವಿಶ್ವಾಸವಿತ್ತೇ ಹೊರತು ಅಹಂಕಾರವಿರಲಿಲ್ಲ. ಆಗಿನ ಇನ್ನೊಬ್ಬ ಮುಂದಾಳು, ಹೋರಾಟಗಾರ ಕೆ. ಬಿ. ಜಿನರಾಜ ಹೆಗ್ಡೆ ಮತ್ತು ಭಸ್ಕರ ಶೆಟ್ಟಿ ಕಟ್ಟೆಮಾರ್ ಅವರಿಗೆ ಅಳಿಯಸಂತಾನ (ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ) ತಿದ್ದುಪಡಿ ಕಾಯ್ದೆ-೧೯೬೧ರ ವಿರುದ್ಧ ಹೋರಾಡಲು ಅವರಿಗೆ ಸಮರ್ಥ ವಕೀಲರೊಬ್ಬರ ಅವಶ್ಯಕತೆ ಇತ್ತು. (ಇಬ್ಬರೂ ಮಾತೃಪ್ರಧಾನ ಕುಟುಂಬ ಪದ್ಧತಿಗೆ ಸೇರಿದವರು)

ದೆಹಲಿಯಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಈ ಕೇಸಿನ ಕುರಿತು ವಾದ ಮಾಡಲು ಸೀನಿಯರ್ ವಕೀಲರನ್ನು ನೇಮಿಸುವ ಪ್ರಸ್ತಾಪ ಬಂದಾಗ, ದೆಹಲಿಯಲ್ಲಿದ್ದು ಆ ಕೇಸನ್ನು ನಿರ್ವಹಿಸುತ್ತಿದ್ದ ಕಿರಿಯ ವಕೀಲರಾದ ಗಣಪತಿ ಅಯ್ಯರ್ ಎಂಬವರು ಕಾರಂತರಿಗೆ "ನೀವೇ ಈ ಅಪೀಲಿನ ವಾದ ಮಾಡಿರಿ, ಅಳಿಯ ಸಂತಾನ, ನಿಸ್ಸಂತತಿ ಇತ್ಯಾದಿ ವಿಷಯಗಳ ಕುರಿತು ಇಲ್ಲಿನವರಿಗೆ ಹೆಚ್ಚಿನ ಅನುಭವ ಇಲ್ಲ. ಆದಕಾರಣ ನೀವೇ ವಾದ ಮಾಡುವುದು ಒಳ್ಳೆಯದು" ಎಂದರು. ಈ ಮಾತನ್ನು ಭಾಸ್ಕರ ಶೆಟ್ಟಿ ಕಟ್ಟೆಮಾರ್ ಕೂಡ ಅನುಮೋದಿಸಿದರು. ಆದರೆ ಕಾರಂತರು ಅದನ್ನು ಒಪ್ಪಲಿಲ್ಲ. ಕಾರಂತರು ಈ ಕೇಸನ್ನು ವಹಿಸಿಕೊಂಡರೆ ಒಳ್ಳೆಯದು ಎಂಬ ಅಭಿಪ್ರಾಯವಿದ್ದ ಕಟ್ಟೆಮಾರ್ ಕಾರಂತರನ್ನು ಮತ್ತೆ ಮತ್ತೆ ಒತ್ತಾಯಿಸಿದರು. ಈ ಒತ್ತಾಯಕ್ಕೆ ಕಾರಂತರು ಕೊಟ್ಟ ಉತ್ತರವೆಂದರೆ – "ಬೇಡ ಸ್ವಾಮಿ. ಇದು ದೊಡ್ಡ ವ್ಯಾಜ್ಯ. ಕೆಳಗಿನ ಕೋರ್ಟುಗಳಲ್ಲೆಲ್ಲ ಸೋತು ಹೋಗಿದೆ. ಇನ್ನು ಈ ಕೊನೆಯ ಘಟ್ಟದಲ್ಲಿ ಸೋತು ಹೋದರೆ ನನಗೆ ಕೆಟ್ಟ ಹೆಸರು ಬರುತ್ತದೆ. ಆದ ಕಾರಣ ಬೇರೆ ಹಿರಿಯರು ಇದನ್ನು ನಿರ್ವಹಿಸಲಿ" ಎಂದುಬಿಟ್ಟರು. ಆಗ ಕಟ್ಟೆಮಾರ್ "ನಾವು ಸೋತರೂ ಗೆದ್ದರೂ ಚಿಂತಿಲ್ಲ. ತಾವೇ ವಾದ ಮಾಡಬೇಕು" ಎಂದು ಒತ್ತಾಯಿಸಿದರು.

"ಹಾಗಾದರೆ ಸರಿ, ದೇವರು ಇಟ್ಟ ಹಾಗೆ ಆಗುತ್ತದೆ" ಎಂದು ಹೇಳಿ ಕಾರಂತರು ವಾದ ಮಾಡಲು ಒಪ್ಪಿದರು. ಆದರೂ ನವದೆಹಲಿಗೆ ಹೋಗುವ ಮೊದಲು ಅವರು ಮದರಾಸಿಗೆ ಹೋಗಿ ಅಲ್ಲಿನ ಪ್ರಸಿದ್ಧ ವಕೀಲರೊಬ್ಬರೊಡನೆ ಈ ದಾವೆಯ ವಾದ ಮಾಡಲು ಬರುವಂತೆ ಆಹ್ವಾನಿಸಿದರು. ಆಮೇಲೆ ಕಾರಂತರು, "ಮದರಾಸಿನ ವಕೀಲರ ಫೀಸ್ ತುಂಬಾ ಆಗುತ್ತದೆ, ಖರ್ಚು ವಿಪರೀತ ಬರಬಹುದು.

ನವದೆಹಲಿಯಲ್ಲೇ ಇರುವ ಸೀನಿಯರ್ ವಕೀಲರೊಬ್ಬರನ್ನು ನೇಮಿಸುವ" ಎಂದು ಹೇಳಿದರು.

ಈ ವಿಷಯಗಳೆಲ್ಲವೂ ಏನು ತಿಳಿಸುತ್ತವೆಂದರೆ, ಕಾರಂತರಿಗೆ ತಾನೇ ನಿಪುಣ ಅಥವಾ ತಾನೇ ಮೇಲು ಎಂಬ ಅಹಂಕಾರವಿರಲಿಲ್ಲ. ಅವರು ಇತರರಲ್ಲಿರುವ ಸಾಮರ್ಥ್ಯವನ್ನು ಗುರುತಿಸುತ್ತಿದ್ದು, ಅಂಥವರಿಗೆ ಮನ್ನಣೆ ನೀಡುತ್ತಿದ್ದರು.

೧೯೫೪ರಲ್ಲಿ ಕಾರಂತರು ಮಂಗಳೂರನ್ನು ತ್ಯಜಿಸಿ ಬೆಂಗಳೂರಿನಲ್ಲಿ ಉಚ್ಚ ನ್ಯಾಯಾಲಯದಲ್ಲಿ ವಕೀಲ ವೃತ್ತಿ ಮಾಡಲು ತೆರಳಿದಾಗ ಅವರಿಗೆ ೬೪ ವರ್ಷ ವಯಸ್ಸಾಗಿತ್ತು. ಈ ವಯಸ್ಸಿನಲ್ಲಿ ಹೊಸ ಸಾಹಸವನ್ನು ಕೈಗೊಂಡ ಅವರ ಎಂಟೆದೆ ಮಂಗಳೂರಿನ ಅವರ ಸಹೋದ್ಯೋಗಿಗಳಿಗೆ ಅಚ್ಚರಿಯನ್ನುಂಟುಮಾಡಿತ್ತು. ನಿವೃತ್ತಿಯ ವಯಸ್ಸು ದಾಟಿ ಆರು ವರ್ಷಗಳ ಬಳಿಕ ಅವರು ಪ್ರವೃತ್ತಿಯ ಮಾರ್ಗ ಹಿಡಿದುದು ಅವರಲ್ಲಿರುವ ಅತೀವ ಆತ್ಮವಿಶ್ವಾಸವನ್ನು ತೋರಿಸುತ್ತದೆ.

ಕೆ.ಆರ್. ಕಾರಂತರು ನುಡಿದಂತೆ ನಡೆದು ತೋರಿಸುವ ಸಾಹಸಿ. ಬೆಂಗಳೂರಿಗೆ ಹೋದ ಮೇಲೆ ಉಚ್ಚ ನ್ಯಾಯಾಲಯದಲ್ಲಿ ಅವರು ಇನ್ನಷ್ಟು ಪ್ರಸಿದ್ಧಿಗೆ ಬಂದರು. ಅವರ ಎರಡನೇ ಮಗ ದಯಾನಂದ ತಂದೆಯೊಂದಿಗೆ ದುಡಿಯುತ್ತ ತಾನೂ ಪ್ರಸಿದ್ಧಿಗೆ ಬಂದು ಯಶ ಗಳಿಸಿದರು.

ಕನ್ನಡದ ಹಿರಿಯಣ್ಣ ಮಾಸ್ತಿಯವರಿಗೆ ಕಾರಂತರ ಜೊತೆಗೆ ನಿಕಟ ಒಡನಾಡವಿತ್ತು. ಅವರು ಕಾರಂತರ ಬಗ್ಗೆ ಬರೆಯುತ್ತ "ಕೆ. ಆರ್. ಕಾರಂತರು ತುಂಬ ಬುದ್ಧಿವಂತರು. ತುಂಬ ಶಕ್ತರು; ತುಂಬ ದಕ್ಷರು. ಅಪರೂಪದ ನಯವಿನಯ, ಗಾಢವಾದ ದೇಶಭಕ್ತಿಯ ಈ ನಮ್ಮ ನಾಯಕರು ಯಾವ ಪ್ರತಿಫಲವನ್ನೂ ನಿರೀಕ್ಷಿಸದೆ ಜನತೆಗೆ ಸೇವೆ ಸಲ್ಲಿಸಿದರು. ನಿಸ್ವಾರ್ಥದ ಮೇಲ್ಪಂಕ್ತಿಯಾದರು. ಅದೇ ನಯವಿನಯ ನಿಸ್ವಾರ್ಥದಿಂದ ಎಲ್ಲ ಜನರ ಪ್ರೀತಿಗೆ ಪಾತ್ರರಾದರು, ಗೌರವವನ್ನು ಗಳಿಸಿದರು" ಎಂದು ಹೇಳುತ್ತಾರೆ.

ಜಿ.ಕೆ. ಗೋವಿಂದ ಭಟ್ ಅವರು ನ್ಯಾಯವಾದಿಯಾಗಿ, ಅನಂತರ ನ್ಯಾಯಾಧೀಶರಾಗಿ, ಅಮೇಲೆ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತರಾದವರು. ಅವರಿಗೆ ಕೆ. ಆರ್. ಕಾರಂತರೊಂದಿಗೆ ಸ್ನೇಹ ಮತ್ತು ನಿಕಟ ಸಂಪರ್ಕವಿತ್ತು. ತನ್ನ ನಿಪುಣ ಸಹೋದ್ಯೋಗಿಯೊಬ್ಬನನ್ನು ನಿರ್ವ್ಯಾಜ ಅಂತಃಕರಣದಿಂದ ಜಿ.ಕೆ. ಗೋವಿಂದ ಭಟ್ ಶ್ಲಾಘಿಸಿದ್ದು ಹೀಗೆ– "ನ್ಯಾಯವಾದಿ ಯಾಗಿ ಕಾರಂತರು ಕಠಿಣ ದುಡಿಮೆಯಲ್ಲಿ ನಂಬಿಕೆ ಇಟ್ಟಿದ್ದರು. ಪ್ರಕರಣದ ಪೂರ್ಣ ಅಧ್ಯಯನ ಮಾಡುತ್ತಿದ್ದರು. ನಿಜಾಂಶಗಳ ಸಂಗ್ರಹದಲ್ಲಿ ಅವರದು

ಎತ್ತಿದ ಕೈ. ಅವುಗಳನ್ನು ಅವರು ತನ್ನ ಕಕ್ಷಿಗಾರನ ವಿರೋಧಿಯು ನಿಜವಾದ ಖಳ ಎನ್ನುವಂತೆ ಚಿತ್ರಿಸಿ ತನ್ನ ಕಕ್ಷಿಗಾರನಿಗೆ ನ್ಯಾಯಾಧೀಶರ ಸಹಾನುಭೂತಿ ಸಿಗುವಂತೆ ಪೋಣಿಸಿ ವಾದಿಸುತ್ತಿದ್ದರು. ಪಾಟೀ ಸವಾಲಿನಲ್ಲಿ ಅವರು ಉತ್ತಮ ಎನಿಸಿದ್ದರು. ನಾನು ಅವರ ಜತೆಯಲ್ಲಿದ್ದು ವಾದಿಸಿದ್ದೇನೆ. ಪರಸ್ಪರ ವಿರುದ್ಧವಾಗಿ ವಾದಿಸಿದ್ದೇವೆ. ನನ್ನ ಮೇಲೆ ವಿಶೇಷವಾಗಿ ಅಚ್ಚೊತ್ತಿರುವ ಅವರ ಗುಣವೆಂದರೆ ತನ್ನ ವಾದವನ್ನು ಸಿದ್ಧಪಡಿಸುವಲ್ಲಿ ಅವರಿಗಿದ್ದ ಪರಿಪೂರ್ಣತೆ ಮತ್ತು ವ್ಯಕ್ತಿಪರತೆ".

೧೯೪೦ರ ದಶಕದಲ್ಲಿ ಎಂ.ಸಿ.ಬಿ. ಕೋಮನ್, ಐಸಿಎಸ್ ಎಂಬವರು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ನ್ಯಾಯಾಧೀಶರಾಗಿದ್ದರು. ಯಾವುದೇ ಸಿವಿಲ್ ಮೊಕದ್ದಮೆಯಲ್ಲಿ ಕಾರಂತರು ತನ್ನ ಮುಂದೆ ವಾದಿಸಿದರೆ ಅವರ ವಿರುದ್ಧ ತೀರ್ಪು ನೀಡಲು ಕಷ್ಟವಾಗುತ್ತಿತ್ತೆಂದು ಕೋಮನ್ ಹೇಳುತ್ತಿದ್ದರಂತೆ. ಕಾರಂತರು ಅಂತಹ ಅರಿಭಯಂಕರ ಆಗಿದ್ದರು. ತಮ್ಮ ವಾದವನ್ನು ಸರಿಯಾಗಿ ಆಲಿಸದೆ ನಿದ್ರೆ ತೂಗುತ್ತಿದ್ದ ನ್ಯಾಯಾಧಿಪತಿಗಳೊಬ್ಬರನ್ನು ಪ್ರತಿಭಟಿಸಿ ತರಾಟೆಗೆ ತೆಗೆದುಕೊಂಡಿದ್ದರಂತೆ.

ಕಾಸರಗೋಡು ಕರ್ನಾಟಕದ ಅವಿಭಾಜ್ಯ ಅಂಗ; ಅದನ್ನು ಅನ್ಯಾಯವಾಗಿ ಕೇರಳಕ್ಕೆ ಸೇರಿಸಲಾಗಿದೆ ಎಂದು ಜಸ್ಟಿಸ್ ಮಹಾಜನ ಅವರಿಗೆ ಸರಿಯಾಗಿ ಮನವರಿಕೆ ಮಾಡಿಕೊಟ್ಟಿದ್ದು ಕೆ. ಆರ್. ಕಾರಂತರು. ಕಾರಂತರಿಂದಾಗಿಯೇ ಮಹಾಜನ ವರದಿಯು ಕರ್ನಾಟಕಕ್ಕೆ ಅನುಕೂಲಕರವಾಗಿ ಪರಿಣಮಿಸಿತು. ಈ ತಮ್ಮ ಅವಿರತ ಕೆಲಸಕ್ಕಾಗಿ ಅವರು ಪ್ರತಿಫಲವನ್ನು ತೆಗೆದುಕೊಳ್ಳಲಿಲ್ಲ. ಕಾಸರಗೋಡಿಗಾಗಿ ನಿಸ್ವಾರ್ಥವಾಗಿಯೇ ದುಡಿದರು.

ಕೆ. ಆರ್. ಕಾರಂತರು ೧೯೭೪ರವರೆಗೂ–ಅಂದರೆ ತನ್ನ ೮೦ನೇ ವಯಸ್ಸಿನವರೆಗೂ – ನ್ಯಾಯವಾದಿಯಾಗಿ ಉಚ್ಚ ನ್ಯಾಯಾಲಯದಲ್ಲಿ ದುಡಿದರು! ಈಗಿನವರು ಈ ರೀತಿಯ ದುಡಿಮೆಯನ್ನು ಊಹಿಸುವುದುಂಟೆ? ಕೆ. ಆರ್. ಕಾರಂತರ ಕ್ಷಮತೆ ಅಷ್ಟು ಗಟ್ಟಿಯಾಗಿತ್ತು. ಕಾರಂತರ ಆರೋಗ್ಯದ ಬಗ್ಗೆ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಒಂದು ಘಟನೆ ಉದಾಹರಿಸುತ್ತಾರೆ: ೧೯೬೦ರ ಸುಮಾರಿನಲ್ಲಿ ಒಮ್ಮೆ ಕಾರಂತರು ಹೊಸೂರು, ಕೊಳ್ಳೆಗಾಲ ಮೊದಲಾದೆಡೆ ಪ್ರವಾಸ ಹೋಗಿದ್ದರು. ಕನ್ನಡಪರ ಪ್ರಚಾರವಾದುದರಿಂದ ಮಾಸ್ತಿಯವರೂ ಹೋಗಿದ್ದರಂತೆ. ಕಾರಂತರಿಗೆ ಒಂದು ದಿನ ಜ್ವರ ಬಂದುಬಿಟ್ಟಿತಂತೆ. ಆ ದಿನ ಸ್ನಾನ ಬೇಡ ಎಂದು ಯಾರು ಎಷ್ಟು ಹೇಳಿದರೂ ಕೇಳದೆ ಕಾರಂತರು ತಣ್ಣೀರಿನಲ್ಲಿ ಸ್ನಾನ ಮಾಡಿಯೇ ಬಿಟ್ಟರು. ಅದು ಅವರ ಮಾಮೂಲಿ ಅಭ್ಯಾಸ. ಅನಂತರ ಕಾರ್ಯಕ್ರಮದಲ್ಲಿಯೂ ಭಾಗವಹಿಸಿದರು. ಅವರ ಸಾಹಸ ಅತಿಯಾಯಿತೆಂದು ಮಾಸ್ತಿ ಭಾವಿಸಿದರು.

ಆದರೆ ಕಾರಂತರಿಗೆ ಯಾವ ತೊಂದರೆಯೂ ಆಗಲಿಲ್ಲ. ಮಾರನೆಯ ದಿನ ಅವರ ಜ್ವರ ಬಿಟ್ಟಿತು. ಅನಂತರ ಅವರೆಲ್ಲ ಬೆಂಗಳೂರಿಗೆ ಹಿಂದಿರುಗಿದರು. ಕಾರಂತರು ಒಂದು ದಿನ ಮಾಸ್ತಿಯವರ ಅತಿಥಿಯಾಗಿದ್ದು ಮಾರನೆಯ ದಿನ ಮಂಗಳೂರಿಗೆ ಪ್ರಯಾಣ ಬೆಳೆಸಿದರಂತೆ.

■

## ೬. ಸಮಾಜವಾದಿ ಚಿಂತಕ

ಕೆ. ಆರ್. ಕಾರಂತರು ತಮ್ಮ ಕುಶಾಗ್ರಬುದ್ಧಿ, ನಿಷ್ಠೆ ಮತ್ತು ಕಕ್ಷಿಗಾರರಿಗೆ ಅನ್ಯಾಯವಾಗಬಾರದೆಂಬ ಹಟಪ್ರಯತ್ನದಿಂದ ಬದುಕಿನಲ್ಲಿ ಮೇಲೆ ಬಂದವರು. ತಂದೆ ದೊಡ್ಡ ಸಂಸಾರದ ಹೊರೆ ಹೊತ್ತಿದ್ದಾರೆ ಎಂಬ ಅರಿವಿದ್ದ ಕಾರಂತರು ತನ್ನ ತಮ್ಮಂದಿರ ಶಿಕ್ಷಣಕ್ಕೆ ನೆರವಾದರು. ಈ ಕಾರಣದಿಂದಾಗಿ ರಾಮಕೃಷ್ಣ ಕಾರಂತರಿಗೆ ಎಳೆಯ ವಯಸ್ಸಿನಲ್ಲಿ ರಾಜಕೀಯ ಹೋರಾಟಕ್ಕೆ ಧುಮುಕಲಾಗಲಿಲ್ಲ. ಸಾಂಸಾರಿಕ ಜವಾಬ್ದಾರಿಗಳು ಒಂದು ನೆಲೆಗೆ ಬಂದ ಮೇಲಷ್ಟೇ ಅವರು ರಾಜಕೀಯಕ್ಕೆ ಇಳಿದರು.

ಆದರೂ ಚಿಕ್ಕಂದಿನಿಂದಲೇ ಖಾದಿ ಬಟ್ಟೆ ಉಡುವುದು, ಸಭೆಗಳಲ್ಲಿ ಭಾಷಣ ಮಾಡಿ ಜನರನ್ನು ಜಾಗೃತಗೊಳಿಸುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು.

ಒಮ್ಮೆ ರಾಜಕೀಯಕ್ಕೆ ಧುಮುಕಿದ ಬಳಿಕ ಕಾರಂತರು ಹಿಂದೆ ತಿರುಗಿ ನೋಡಲಿಲ್ಲ. ಯಥಾನುಶಕ್ತಿ ತಮ್ಮಿಂದಾದ ಕೆಲಸವನ್ನು ಮಾಡುತ್ತಲೇ ಇದ್ದರು.

೧೯೩೭ ರಲ್ಲಿ ಬ್ರಿಟಿಷ್ ಸರಕಾರ ಕೊಡಮಾಡಿದ, ತಾತ್ಕಾಲಿಕ ಸರಕಾರದಲ್ಲಿ ಕಾಂಗ್ರೆಸ್ ಭಾಗವಹಿಸುವ ಘೋಷಣೆಯನುಸಾರ- ದೇಶಾದ್ಯಂತ ಚುನಾವಣೆ ಬಂದಿತು. ಕಾಂಗ್ರೆಸ್ ಆ ಚುನಾವಣೆಯಲ್ಲಿ ಭಾಗವಹಿಸಿತು. ಉಪ್ಪಿನಂಗಡಿ-ಪುತ್ತೂರು-ಕಾಸರಗೋಡು ಪ್ರದೇಶದ ಒಬ್ಬ ಉಮೇದ್ವಾರನನ್ನಾಗಿ ಕಾಂಗ್ರೆಸ್ ಕೆ. ಆರ್. ಕಾರಂತರನ್ನು ಕಣಕ್ಕಿಳಿಸಿತು. ಇಡೀ ದೇಶದಲ್ಲಿ ಆಗ ಕಾಂಗ್ರೆಸ್ ಅಲೆ ಇದ್ದಿತು. ಸ್ವಾಭಾವಿಕವಾಗಿಯೇ ಕಾರಂತರು ಬೃಹತ್ ಬಹುಮತದಿಂದ ಗೆದ್ದು ಬಂದರು. ಆ ಕಾಲದ ಹನ್ನೊಂದು ಪ್ರಾಂತಗಳಲ್ಲಿ ಏಳು ಪ್ರಾಂತಗಳು ಕಾಂಗ್ರೆಸಿನ ಪ್ರತಿನಿಧಿಗಳನ್ನು ಭಾರೀ ಬಹುಮತದಿಂದ ಆರಿಸಿದವು.

ಚುನಾವಣೆಯ ಬಳಿಕ ಚಕ್ರವರ್ತಿ ರಾಜಗೋಪಾಲಾಚಾರಿಯವರು ಮಂತ್ರಿಮಂಡಲ ರಚಿಸಿದರು. ಈ ಮಂತ್ರಿಮಂಡಲದಲ್ಲಿ ಕಾರಂತರು ಪಾರ್ಲಿಮೆಂಟರಿ ಸೆಕ್ರೆಟರಿ ಹುದ್ದೆಯನ್ನು ಅಲಂಕರಿಸಬೇಕಾಯಿತು.

ಈ ಮಂತ್ರಿಮಂಡಲ ಹೆಚ್ಚು ಕಾಲ ಬಾಳಲಿಲ್ಲ. ಯಾಕೆಂದರೆ ಚುನಾಯಿತ

ಸರಕಾರವನ್ನು ಕೇಳದೆ ಬ್ರಿಟಿಷ್ ಆಡಳಿತವು ಎರಡನೇ ಪ್ರಪಂಚ ಮಹಾಯುದ್ಧದಲ್ಲಿ ತಾನೂ ಕೂಡ ಸಹಭಾಗಿ ಎಂದು ಘೋಷಿಸಿಬಿಟ್ಟಿತು. ಬ್ರಿಟಿಷ್ ಸರಕಾರದ ಈ ನೀತಿಯನ್ನು ಕಾಂಗ್ರೆಸ್ ಬಲವಾಗಿ ಖಂಡಿಸಿತು. ಪ್ರತಿಭಟನೆಯ ಅಂಗವಾಗಿ ಎಲ್ಲ ಕಾಂಗ್ರೆಸ್ ಮಂತ್ರಿಮಂಡಲಗಳು ಪದತ್ಯಾಗ ಮಾಡಿದವು. ಹಾಗಾಗಿ ಕಾರಂತರಿಗೆ ತಮ್ಮ ಆಡಳಿತ ಕುಶಲತೆಯನ್ನು ಹೆಚ್ಚು ಕಾಲ ತೋರಿಸಲು ಸಾಧ್ಯವಾಗಲಿಲ್ಲ.

ರಾಜಕೀಯದಲ್ಲಿಯೂ ಕಾರಂತರು ತಮ್ಮ ನಿಷ್ಠುರ ಮತ್ತು ನಿರ್ಭೀತ ವ್ಯಕ್ತಿತ್ವವನ್ನು ಬಿಟ್ಟುಕೊಟ್ಟವರಲ್ಲ. ೧೯೩೭–೩೯ ರ ಆ ಅವಧಿಯಲ್ಲಿ ಜನತೆಯಿಂದ ಮೊದಲಬಾರಿ ಆರಿಸಲ್ಪಟ್ಟ ಮಂತ್ರಿಗಳು ಜನಜಾಗೃತಿಯನ್ನು ವೃದ್ಧಿಸುವ ಉದ್ದೇಶದಿಂದ ಪ್ರಾಂತವನ್ನೆಲ್ಲ ಸುತ್ತುತ್ತಿದ್ದರು. ಆ ಕಾಲದ ಕಾಂಗ್ರೆಸಿನ ಧೋರಣೆ, ಅವರ ಮೂಲ ಉದ್ದೇಶ ಮತ್ತು ಕಾರ್ಯಕ್ರಮಗಳನ್ನು ಜನತೆಗೆ ಮನದಟ್ಟು ಮಾಡಲು ಈ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದ್ದರು. ರಾಜಾಜಿ ಮಂತ್ರಿಮಂಡಲದ ಮಂತ್ರಿಗಳಲ್ಲೊಬ್ಬರಾದ ಡಾ. ಸುಬ್ಬರಾಯನ್ ಮತ್ತು ಡಾ. ಝೂಕೀರ್ ಹಸನ್ ಅವರಲ್ಲಿ ಮತಭೇದ ಉಂಟಾಗಿತ್ತು. ಈ ಮತಭೇದವನ್ನು ಡಾ. ಸುಬ್ಬರಾಯನ್ ಅವರು ತಮ್ಮ ಭಾಷಣದಲ್ಲಿ , ಕಾರಂತರ ಜಿಲ್ಲೆಯಲ್ಲಿ, ಅದೂ ಅವರ ಹುಟ್ಟೂರಾದ ಕೋಟದ ಸಮೀಪ ಇರುವ ಕುಂದಾಪುರವೆಂಬ ಚಿಕ್ಕಪಟ್ಟಣದಲ್ಲಿ ಬಹಿರಂಗವಾಗಿ ಎತ್ತಿ ಹೇಳಿದರು. ಡಾ. ಝೂಕೀರ್ ಹಸನ್‌ರನ್ನು ಮತ್ತು ಕಾರಂತರನ್ನು ಅಪ್ರತ್ಯಕ್ಷವಾಗಿ ಟೀಕಿಸಿದರು. ಈ ಪ್ರಸಂಗ ನಡೆದ ಕೆಲವೇ ದಿನಗಳ ನಂತರ ಡಾ. ಹಸನ್ ಮತ್ತು ಕಾರಂತರು ಅದೇ ಕುಂದಾಪುರ ಪಟ್ಟಣವನ್ನು ಸಂದರ್ಶಿಸಿದರು. ಆ ಕಾಲದ ಪದ್ಧತಿಯಂತೆ ಸಾರ್ವಜನಿಕ ಸಭೆ ಆಯಿತು. ಮಂತ್ರಿಮಹೋದಯರನ್ನು ಗೌರವಿಸಲು, ಅವರ ಭಾಷಣಗಳನ್ನು ಕೇಳಲು ಜನರು ಉತ್ಸುಕರಾಗಿ ನೆರೆದಿದ್ದರು. ಆ ಸಭೆಯಲ್ಲಿ ಕಾರಂತರು ಡಾ. ಸುಬ್ಬರಾಯನ್ ಮಾಡಿದ ಟೀಕೆಗೆ ನಿರ್ಭೀತರಾಗಿ, ನೇರವಾಗಿ ಉತ್ತರ ಕೊಟ್ಟರು. ಇದರಿಂದಾಗಿ ತಮ್ಮ ಸ್ವಕ್ಷೇತ್ರದಲ್ಲಿ ಕಾರಂತರ ವರ್ಚಸ್ಸು ಇಮ್ಮಡಿಯಾಯಿತು.

ಕಾರಂತರು ಸಚಿವರಾದ ಬಳಿಕ ಮೊದಲ ಬಾರಿ ಮಂಗಳೂರು ನಗರವನ್ನು ಸಂದರ್ಶಿಸಿದಾಗ ಅವರನ್ನು ಸನ್ಮಾನಿಸಲು ಮಂಗಳೂರಿನಲ್ಲಿ ಒಂದು ಸಾರ್ವಜನಿಕ ಸಭೆ ಏರ್ಪಟ್ಟಿತು. ಆ ಸಭೆಯಲ್ಲಿ ಕಾರಂತರು ಹೇಳಿದ ಮಾತು ಅಭೂತಪೂರ್ವ ವಾದುದು. ಜನತೆಯ ಪ್ರತಿನಿಧಿ ತಾನು, ಜನತೆಯೊಂದಿಗೆ ನಿರ್ವಂಚನೆಯಿಂದ ವರ್ತಿಸಬೇಕು ಎಂಬುದು ಕಾರಂತರ ಮನೋಧರ್ಮ. ಅಂತಹ ಕಾಳಜಿ ಅವರ ನಡೆ–ನುಡಿಯಲ್ಲಿ ವ್ಯಕ್ತವಾಗುತ್ತಿತ್ತು. ಸಾರ್ವಜನಿಕ ಸಭೆಯಲ್ಲಿ ಅವರು ಹೀಗೆ ಹೇಳಿದರು– "ನಾನೇನು ಮಾಡಬೇಕು? ನಾನು ಅಲ್ಲಿ (ಅಂದರೆ ಮದರಾಸಿನಲ್ಲಿ) ಬಿಳಿ ಆಜ್ಞೆ (ಬ್ರಿಟಿಷರ ನೆರಳಿನಲ್ಲಿ –ಅದರ ಪಳೆಯುಳಿಕೆಯಂತೆ) ಹೊರಡಿಸಿದರೆ

ಅದು ಇಲ್ಲಿಗೆ (ಅಂದರೆ ಮಂಗಳೂರಿಗೆ) ಬರುವಾಗ ಕರಿ ಆಜ್ಞೆಯಾಗಿ ಪರಿಣಮಿಸುತ್ತದೆ!" ಆಡಳಿತ ಶಿಥಿಲತೆಯ ಕುರಿತು ಮರುಗುವ ಈ ಮನೋಭಾವ ಪ್ರಜೆಗಳ ಕುರಿತು ಅವರಿಗಿದ್ದ ತೀವ್ರ ಕಳಕಳಿಯನ್ನು ತೋರಿಸುತ್ತದೆ.

ಕಾಂಗ್ರೆಸ್ಸಿನ ಜಾತ್ಯತೀತ ನಿಲುವು, ಸಮಾಜವಾದಿ ಚಿಂತನೆಗಳನ್ನು ಕಾರಂತರು ತಮ್ಮ ಜೀವನದಲ್ಲಿ ಸಹಜವಾಗಿ ಅಂಗೀಕರಿಸಿದ್ದರು. ಅದು ತೋರಿಕೆಯದಾಗಿರಲಿಲ್ಲ.

ಸ್ವಾತಂತ್ರ್ಯಾನಂತರ ಕಾಂಗ್ರೆಸ್‌ನ ನೀತಿ ನಿಲುವು ಬದಲಾಯಿತು. ಅಪ್ಪಟ ಗಾಂಧೀವಾದಿಯಾಗಿದ್ದ ಕಾರಂತರಿಗೆ ಹೊಸ ಬದಲಾವಣೆ ಇಷ್ಟವಾಗಲಿಲ್ಲ. ಅವರು ಕಾಂಗ್ರೆಸ್ ತೊರೆದು ಕಿಸಾನ್ ಮಜ್‌ದೂರ್ ಪ್ರಜಾ ಪಾರ್ಟಿಯ ಸದಸ್ಯರಾದರು. ಆಗ ಈ ಪಕ್ಷದಲ್ಲಿ ಆಚಾರ್ಯ ಜೆ.ಬಿ. ಕೃಪಲಾನಿಯಂತಹ ಹಿರಿಯರಿದ್ದರು. ಈ ಪಕ್ಷವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಿ ಅದನ್ನು ಬಲಪಡಿಸಿದವರು ಕೆ. ಆರ್. ಕಾರಂತರು. ಈ ಪಕ್ಷದ ಉಮೇದ್ವಾರರಾಗಿ ಪ್ರಥಮ ಮಹಾ ಚುನಾವಣೆಯಲ್ಲಿ ಭಾಗವಹಿಸಿದರು. ಸುಪ್ರಸಿದ್ಧ ಪತ್ರಕರ್ತರಾಗಿದ್ದ ಬೆನಗಲ್ ಶಿವರಾಯರ ವಿರುದ್ಧ ಲೋಕಸಭಾ ಸ್ಥಾನಕ್ಕಾಗೆ ಸ್ಪರ್ಧಿಸಿದರು. ಈ ಚುನಾವಣೆಯಲ್ಲಿ ಕಾರಂತರು ಮೊದಲ ಬಾರಿ ಸೋಲು ಅನುಭವಿಸಿದರು. ಆದರೆ ಅವರು ಹತಾಶರಾಗಲಿಲ್ಲ. ಕಿಸಾನ್ ಮಜ್‌ದೂರ್ ಪ್ರಜಾಪಾರ್ಟಿಯನ್ನು ಜಯಪ್ರಕಾಶ್ ನಾರಾಯಣ, ಡಾ. ರಾಮ ಮನೋಹರ್ ಲೋಹಿಯಾ, ಆಚಾರ್ಯ ನರೇಂದ್ರ ದೇವರಂತಹ ಸುಪ್ರಸಿದ್ಧ ಮುಖಂಡರ ನೇತೃತ್ವದಲ್ಲಿ ನಡೆಯುತ್ತಿದ್ದ ಸಮಾಜವಾದಿ ಪಕ್ಷದಲ್ಲಿ ವಿಲಯನಗೊಳಿಸಿದರು. ಈ ವಿಲಯನದ ನಂತರ ಈ ಪಕ್ಷಕ್ಕೆ ಪ್ರಜಾ ಸಮಾಜವಾದಿ ಪಕ್ಷ ಎಂಬ ನಾಮಕರಣ ಆಯಿತು. ಈ ಪಕ್ಷದ ನೇತೃತ್ವವನ್ನು ಕಾರಂತರು ವಹಿಸಿದರು. ಅದರ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾದರು. ಆರೋಗ್ಯ ಹದಗೆಟ್ಟು ಅವರು ರಾಜಕೀಯದಿಂದ ನಿವೃತ್ತಿಯಾಗುವವರೆಗೂ ಈ ಜವಾಬ್ದಾರಿಯಲ್ಲಿ ಮುಂದುವರಿದರು.

ಅಚ್ಚ ಸಮಾಜವಾದಿಗಳಾಗಿದ್ದ ಕೆ. ಆರ್. ಕಾರಂತರು ಸುಮಾರು ಒಂದು ದಶಕದಷ್ಟು ಕಾಲ ದಕ್ಷಿಣ ಕನ್ನಡ ಜಿಲ್ಲಾ ಭೂಮಾಲಕರ ಸಂಘದ ಕಾರ್ಯದರ್ಶಿ ಯಾಗಿದ್ದರು. ಗ್ರಾಮೀಣ ಪ್ರದೇಶಗಳ, ವಿಶೇಷವಾಗಿ ಹಿಂದುಳಿದ ಮಲೆನಾಡಿನ ಹಳ್ಳಿಗಳ ಸಮಸ್ಯೆಗಳನ್ನು ಅವರು ಅಧ್ಯಯನ ಮಾಡಿದರು. ಪುನರ್ ವ್ಯವಸ್ಥೆ (ರಿ-ಸೆಟ್ಲ್‌ಮೆಂಟ್) ಉದ್ದೇಶಕ್ಕೆ ಮಲೆನಾಡಿನ ಹಳ್ಳಿಗಳನ್ನು ನಾಲ್ಕನೇ ವರ್ಗ ಎಂಬ ವಿಶೇಷ ವರ್ಗಕ್ಕೆ ಸೇರಿಸಲು ಕಾರಂತರ ಪ್ರಯತ್ನವೇ ಕಾರಣ. ನಾಲ್ಕನೇ ವರ್ಗಕ್ಕೆ ಸೇರಿದ ಭೂಮಿಯ ತೆರಿಗೆಯನ್ನು ೧೯೩೧ರಲ್ಲಿ ಇಳಿಸಲಾಯಿತು.

ರಿ–ಸೆಟ್ಲ್‌ಮೆಂಟ್‌ನಲ್ಲಾದ ದೋಷದಿಂದಾಗಿ ಅಧಿಕ ಭೂಕಂದಾಯ ವಸೂಲಾಗುತ್ತಿತ್ತು. ಹಾಗೆ ವಸೂಲಾದುದನ್ನು ಮರಳಿ ಪಡೆಯಲು ನ್ಯಾಯಾಲಯದ ಮೊರೆ ಹೋಗಲು ಸಾವಿರಾರು ಸಣ್ಣ ಹಿಡುವಳಿದಾರರಿಗೆ ಸಾಧ್ಯವಾಗುತ್ತಿರಲಿಲ್ಲ. ಕಾರಂತರು ಅವರಿಗಾಗಿ ಹೋರಾಡಿ ಜಯಶೀಲರಾದರು. ಮದ್ರಾಸ್ ಸರಕಾರವು ಏಳು ಲಕ್ಷ ರೂಪಾಯಿಗಳನ್ನು ರೈತರಿಗೆ ಮರಳಿಸಲು ಆದೇಶ ನೀಡಿತು.

ಮೀಸಲು ಅರಣ್ಯಗಳ ಸಮೀಪ ಜಮೀನು ಇದ್ದ ರೈತರು ಕಾಡುಪ್ರಾಣಿಗಳ, ವಿಶೇಷವಾಗಿ ಹಂದಿಗಳ ಹಾವಳಿಗೀಡಾಗಿದ್ದರು. ಸಾಗುವಳಿ ಭೂಮಿಗೆ ತಾಗಿಕೊಂಡೇ ಮೀಸಲು ಕಾಡುಗಳಿದ್ದವು. ಮೀಸಲು ಕಾಡಿನ ಮರದ ಒಂದು ರೆಂಬೆಯನ್ನು ಕಡಿಯಲು ಕೂಡ ರೈತರಿಗೆ ಅನುಮತಿ ಇರಲಿಲ್ಲ. ರೈತರ ಅಹವಾಲನ್ನು ಕಾರಂತರು ಸರಕಾರದ ಮುಂದಿಟ್ಟರು. ರಿಚ್ಮಂಡ್ ಎಂಬ ಅಂದಿನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ೧೯೨೮ ರಲ್ಲಿ ಕಾರಂತರೊಂದಿಗೆ ಈ ಪ್ರದೇಶಗಳಿಗೆ ಸಂದರ್ಶನವಿತ್ತು ಸಮಸ್ಯೆ ಪರಿಹಾರವಾಗುವಂತಹ ಆಜ್ಞೆಯೊಂದನ್ನು ಹೊರಡಿಸಿದರು.

೧೯೪೪ ರಿಂದ ೧೯೬೧ ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ತೀವ್ರ ಧಾನ್ಯ ಸಂಗ್ರಹ' (ಇಂಟೆನ್ಸಿವ್ ಪ್ರೋಕ್ಯೂರ್‌ಮೆಂಟ್) ಪದ್ಧತಿ ಜಾರಿಯಲ್ಲಿತ್ತು. ಬತ್ತದ ಬೆಳೆಗಾರರಿಂದ, ಅವರ ಖರ್ಚಿಗೆ ಬೇಕಾದಷ್ಟು ಬತ್ತ ಮಾತ್ರ ಇಟ್ಟು ಉಳಿದುದನ್ನು ಸರಕಾರ ವಸೂಲು ಮಾಡುತ್ತಿತ್ತು. ಪ್ರೋಕ್ಯೂರ್‌ಮೆಂಟ್ ಹೆಸರಿನಲ್ಲಿ ರೈತರಿಗೆ ಕಿರುಕುಳ ಕೊಡಲಾಗುತ್ತಿತ್ತು. ಅಡಿಕೆಯ ಜೊತೆಗೆ ಬತ್ತ ಕೂಡ ಬೆಳೆಯುತ್ತಿದ್ದ ಅಡಿಕೆ ಬೆಳೆಗಾರರಿಗೆ, ಅಡಿಕೆತೋಟದ ಕೆಲಸಗಾರರಿಗೆ ಮಜೂರಿ ಕೊಡಲು ಬತ್ತ ಅಥವಾ ಅಕ್ಕಿಯನ್ನು ಉಳಿಸಿಕೊಳ್ಳಬೇಕಾಗುತ್ತಿತ್ತು. ಆದರೆ ಸರಕಾರ ಅದಕ್ಕೂ ಬಿಡುತ್ತಿರಲಿಲ್ಲ. ೧೯೪೬ ರಲ್ಲಿ ಪ್ರಕಾಶಮ್ ಮಂತ್ರಿಮಂಡಲದಲ್ಲಿ ಕಾರಂತರು ಸಚಿವರಾದಾಗ ಅಡಿಕೆ ಬೆಳೆಗಾರರ ಈ ಕಷ್ಟವನ್ನು ನಿವಾರಿಸುವ ಸರಕಾರಿ ಆದೇಶವೊಂದನ್ನು ಹೊರಡಿಸಿದರು. ಕಾರಂತರು ಸಂಪುಟಕ್ಕೆ ರಾಜೀನಾಮೆ ನೀಡಿದ ಬಳಿಕವೂ ಅದು ಜಾರಿಯಲ್ಲಿತ್ತು.

ಕಾರಂತರ ಸರ್ವಸಮಾನತೆಯ, ಮಾನವತ್ವದ ಪ್ರತಿಪಾದನೆ ಕೇವಲ ತೋರಿಕೆಯದಾಗಿರಲಿಲ್ಲ. ಪ್ರತಿಯೊಬ್ಬರೂ ಸಮಾನರಾಗಿ ಆತ್ಮವಿಶ್ವಾಸದಿಂದ ಎದ್ದು ನಿಲ್ಲಬೇಕು ಎಂಬುದು ಅವರ ವಿಚಾರವಾಗಿತ್ತು.

ಸಣ್ಣತನ ಎಲ್ಲಿಯೇ ಆಗಲಿ, ಯಾವುದೇ ರೂಪದಲ್ಲಾಗಲೀ ಪ್ರಕಟವಾದರೆ ಅದರ ಬಗ್ಗೆ ಕಾರಂತರು ಅಸಹನೆ ತೋರಿಸುತ್ತಿದ್ದರು.

೧೯೪೭ ರಲ್ಲಿ ದೇಶ ಸ್ವತಂತ್ರವಾದ ಸಂಭ್ರಮದ ದಿನಗಳವು. ಆಗ ಸಚಿವರಾಗಿದ್ದ ಕಾರಂತರು ತಮ್ಮ ಹುಟ್ಟೂರು ಕೋಟಕ್ಕೆ ಆಗಮಿಸಲಿದ್ದಾರೆ ಎಂಬ ಸುದ್ದಿ ಆ ಪುಟ್ಟ ಊರಿನಲ್ಲಿ ಸಂಭ್ರಮ ಸಡಗರಕ್ಕೆ ಕಾರಣವಾಗಿತ್ತು.

ಊರಿನ ಹೊರಗೆ ಕಾರಿನಿಂದಿಳಿದು ತಳಿರು ತೋರಣಗಳಿಂದ ಅಲಂಕೃತವಾಗಿದ್ದ ರಸ್ತೆಯಲ್ಲಿ ಜನಜಾತ್ರೆಯ ಮುಂದೆ ಎಲ್ಲರಿಗೂ ಎದ್ದು ಕಾಣುತ್ತಿದ್ದ ಆ ಸ್ಫುರದ್ರೂಪಿ ಆಜಾನುಬಾಹು –ಸಚಿವರೆಂದರೆ ಹೀಗೆಯೇ ಇರಬೇಕೇನೋ ಎಂಬಂತೆ ನಡೆದುಬರುತ್ತಿದ್ದರು.

ಹುಟ್ಟೂರಿಗೆ ಬಂದ ಸಚಿವರನ್ನು ಆಗ ಕೋಟದ ಗಾಂಧಿ ಎಂದೇ ಪರಿಚಿತರಾದ ಕೃಷ್ಣದೇವ ಐತಾಳರು ಬರಮಾಡಿಕೊಂಡಾಗ ಯಾರೋ ಒಬ್ಬರು ಕಾರಂತರ ಪಾದಮುಟ್ಟಿ ನಮಸ್ಕಾರ ಮಾಡಿದರಂತೆ.

ಕಾರಂತರಿಗೆ ಕೋಪ ಬಂತು. "ನಮಗೆ ಸ್ವಾತಂತ್ರ್ಯ ಬಂದುದು ಗುಲಾಮರ ಸೃಷ್ಟಿಗಲ್ಲ" ಎಂದು ಈ ಕೃತ್ಯವನ್ನು ಮೆಚ್ಚದೆ ಅಲ್ಲೇ ಅಸಮಾಧಾನ ತೋರಿಸಿದರಂತೆ. ಪಾದಮುಟ್ಟಿ ನಮಸ್ಕಾರ ಮಾಡಿದ ಆ ವ್ಯಕ್ತಿಯನ್ನು ಕಾರಂತರು ಕೊನೆಯವರೆಗೂ ಕ್ಷಮಿಸಲಿಲ್ಲವಂತೆ.

ಕೋಟ ಶಿವರಾಮ ಕಾರಂತರು ಪುತ್ತೂರಿನಲ್ಲಿ 'ಬಾಲವನ' ನಡೆಸುತ್ತ, ತನ್ನ ಹರ್ಷ ಮುದ್ರಣಾಲಯದ ಕೆಲಸ ಕಾರ್ಯಗಳೊಂದಿಗೆ ಪ್ರತಿವರ್ಷ ದಸರಾ ಕಾರ್ಯಕ್ರಮಗಳನ್ನು ಸಂಭ್ರಮದಿಂದ ನಡೆಸಿಕೊಂಡು ಹೋಗುತ್ತಿದ್ದ ದಿನಗಳವು. ಪುತ್ತೂರಿಗೆ ಭಾಷಣಕ್ಕೆ ಆಗಮಿಸುತ್ತಿದ್ದ ಅತಿಥಿಗಣ್ಯರನ್ನು, ಖ್ಯಾತ ಸಾಹಿತಿಗಳನ್ನು ಶಿವರಾಮ ಕಾರಂತರು ಮಂಗಳೂರಿನಲ್ಲಿದ್ದ ಅಣ್ಣನಿಗೂ ಕೋಟದಲ್ಲಿದ್ದ ತಂದೆ ಶೇಷ ಕಾರಂತರಿಗೂ ಅವರಿದ್ದಲ್ಲಿಗೆ ಕರೆದೊಯ್ದು ಪರಿಚಯಿಸುತ್ತಿದ್ದರು. 'ಕಡಲ ತಡಿಯ ಭಾರ್ಗವ', 'ನಡೆದಾಡುವ ವಿಶ್ವಕೋಶ', 'ನಿಷ್ಠುರವಾದಿ' ಎಂದೆಲ್ಲಾ ಪ್ರಸಿದ್ಧರಾದ ಶಿವರಾಮ ಕಾರಂತರು ಅಣ್ಣನ ಮುಂದೆ ಕೂರುವ ಧೈರ್ಯ ತೋರಿಸುತ್ತಿರಲಿಲ್ಲವಂತೆ. ಅತಿಥಿಗಳನ್ನು ಪರಿಚಯಿಸಿ ಅವರುಗಳ ಮಾತುಕತೆಯಾಗಿ ಹೊರಡುವವರೆಗೂ ಶಿವರಾಮ ಕಾರಂತರು ನಿಂತೇ ಇರುತ್ತಿದ್ದರಂತೆ! ಅಂದರೆ ಕೆ. ಆರ್. ಕಾರಂತರ ವ್ಯಕ್ತಿತ್ವ ಎಂತಹುದಿತ್ತು ಎಂಬುದರ ಮನವರಿಕೆಯಾಗದಿರದು.

ಎರಡನೇ ಮಹಾಯುದ್ಧದ ಕಾಲದಲ್ಲಿ ಕಾಸರಗೋಡು ಸಮೀಪ ಕುಂಬಳೆಯ ಆಸುಪಾಸಿನಲ್ಲಿ ಬ್ರಿಟಿಷ್ ಸರಕಾರವು 'ಮಿಲಿಟರಿ ಕ್ಯಾಂಪ್' ಸ್ಥಾಪಿಸಿತು. ಸಾವಿರಾರು ಕುಟುಂಬಗಳು ಅಲ್ಲಿಂದ ಒಕ್ಕಲೆದ್ದು ದೂರ ಹೋಗಿ ಕಷ್ಟ ನಷ್ಟಗಳಿಗೆ ಈಡಾಗಬೇಕಾಯಿತು. ಯುದ್ಧ ಮುಗಿದ ಬಳಿಕ ಅವರವರ ಆಸ್ತಿ–ಪಾಸ್ತಿ ಮರಳಿ

ದೊರೆತಿತಾದರೂ ನಾಲ್ಕಾರು ವರ್ಷಗಳಲ್ಲಿ ಹೊಲಗದ್ದೆಗಳು ಬಂಜರಾಗಿದ್ದವು. ಅವುಗಳನ್ನು ಮತ್ತೆ ಸಹಜಸ್ಥಿತಿಗೆ ತರಲು ನಾಲ್ಕಾರು ವರ್ಷ ದುಡಿಯಬೇಕಾಗಿತ್ತು. ರೈತರ ಜೀವನ ಸಂಕಷ್ಟಕ್ಕೆ ಈಡಾಯಿತು.

ಆಗ ಕಾರಂತರು ಈ ರೈತರ ಕಣ್ಣೀರು ಒರೆಸಿದರು. ಸರಕಾರಕ್ಕೆ ಮನವಿ ಮಾಡಿ ಸರಿಯಾದ ಪರಿಹಾರ ವಿತರಿಸುವಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸಿದರು. ಪ್ರಭಾವೀ ವ್ಯಕ್ತಿತ್ವವುಳ್ಳ, ಸುಪ್ರಸಿದ್ಧ ವಕೀಲರಾಗಿದ್ದ ಕಾರಣ ಅವರ ಮಾತುಗಳಿಗೆ ಶಾಸನ ಸಭೆಯಲ್ಲೂ ಮಂತ್ರಿಮಂಡಲದಲ್ಲಿಯೂ ಹೆಚ್ಚಿನ ಬೆಲೆ ಸಿಗುತ್ತಿತ್ತು.

ಒಮ್ಮೆ ಕಾರಂತರು ಕಾಸರಗೋಡು ಸಮೀಪದ ಬದಿಯಡ್ಕ ಎಂಬ ಪುಟ್ಟ ಊರಿಗೆ ಒಂದು ಕಾರ್ಯಕ್ರಮಕ್ಕೆ ಬಂದಿದ್ದರು. ಸಹಜವಾಗಿಯೆ ಜನರು ತಮ್ಮ ಕಷ್ಟ ನಷ್ಟಗಳನ್ನು ನಿವೇದಿಸಿಕೊಂಡರು. ತಮ್ಮೊಂದಿಗೆ ಬಂದಿದ್ದ ಅಧಿಕಾರಿಗಳಿಗೆ ಆ ಸಮಸ್ಯೆಯನ್ನು ಪರಿಹಾರ ಮಾಡುವಂತೆ ಕಾರಂತರು ಆದೇಶಿಸಿದರು. ಆಗ ಜೊತೆಯಲ್ಲಿದ್ದ ಐ.ಎ.ಎಸ್. ಅಧಿಕಾರಿಯೊಬ್ಬರು ಅದಕ್ಕೆ ಜಿ.ಒ (ಸರಕಾರಿ ಆದೇಶ Government order) ಇಲ್ಲ ಎಂದು ಹೇಳಿದರು. ಆಗ ಕುಪಿತರಾದ ಕಾರಂತರು "ಜಿ.ಒ. ಎನ್ನುವುದು ದೇವಲೋಕದಿಂದ ಬರುವುದಿಲ್ಲ. ಅದನ್ನು ನಾವೇ – ಸರಕಾರ – ಮಾಡುವುದು. ಜನರಿಗೆ ಹಿತವಾಗುವುದು ಮುಖ್ಯ. ಹಿತವಾಗುವಂತಹ ಕೆಲಸ ಮಾಡಬೇಕು. ಜಿ.ಒ.ದ ಹೆಸರಿನಲ್ಲಿ ಜನರಿಗೆ ದ್ರೋಹ ಮಾಡುವುದನ್ನು ನಿಲ್ಲಿಸಬೇಕು." ಎಂದು ಖಂಡತುಂಡವಾಗಿ ಹೇಳಿ ಜನರಿಗೆ ಆಗಬೇಕಿದ್ದ ಕೆಲಸವನ್ನು ಸ್ಥಳದಲ್ಲಿಯೇ ಮಾಡಿಸಿಕೊಟ್ಟರಂತೆ, "ಇಂದು ಇಂತಹ ಕೆಲವರಾದರೂ ಮಂತ್ರಿಗಳಿರುತ್ತಿದ್ದರೆ ಭಾರತ ಧನ್ಯತೆಯನ್ನು ಪಡೆಯುತ್ತಿತ್ತು. ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತ ಕಾರಂತರ ಬಳಿ ಎಂದೂ ಸುಳಿಂಯುಲಿಲ್ಲ" ಎಂದು ಕಾರಂತರ ಒಡನಾಡಿಗಳಲ್ಲೊಬ್ಬರಾದ ಪ್ರೌಢಶಾಲೆಯೊಂದರ ನಿವೃತ್ತ ಮುಖ್ಯೋಪಾಧ್ಯಾಯ ಹಾಗೂ ಲೇಖಕರಾದ ಎಸ್. ಎನ್. ನವಕಾನ ಹೇಳುತ್ತಾರೆ.

ರಾಜಕಾರಣಿಗಳು ಜನರ ಹಿತಕ್ಕಾಗಿ ನಿಸ್ವಾರ್ಥವಾಗಿ ದುಡಿಯಬೇಕು. ಎಂಬುದು ಕಾರಂತ ದೃಷ್ಟಿಕೋನವಾಗಿತ್ತು. ಆದರೆ ಬರಬರುತ್ತಾ ಗುಣಶೀಲಗಳಿಂದ ದೂರವಾದವರು ಅಗ್ರಸ್ಥಾನವನ್ನು ಏರತೊಡಗಿದರು. ಸ್ವಾರ್ಥ, ಅಧಿಕಾರದಾಹ, ಧನದಾಹ, ಗುಂಪುಗಾರಿಕೆ ಕಂಡು ಬರತೊಡಗಿತು. ಖಾದಿ ಪ್ರಚಾರ, ಮದ್ಯಪಾನ ನಿಷೇಧ, ಧರ್ಮ ಇತ್ಯಾದಿ ಗಾಂಧೀಜಿ ಆದರ್ಶಗಳು ನೇಪಥ್ಯಕ್ಕೆ ಸರಿಯತೊಡಗಿದವು. ಜನಪ್ರತಿನಿಧಿಗಳಿಗೆ ಸರಿಯಾದ ವೇತನ, ಭತ್ಯೆ ನೀಡಲಾಗುತ್ತಿದ್ದರೂ ವಿಧಾನಸಭೆ, ಲೋಕಸಭೆಗಳಲ್ಲಿ ಸದಸ್ಯರು ಆಡಳಿತಕಾರ್ಯಗಳಿಗೆ ತಕ್ಕ ಗಮನಕೊಡದಿರುವುದು, ಸಭೆಗಳಲ್ಲಿ ಸಾಕಷ್ಟು ಹಾಜರಿ ಇಲ್ಲದಾಗುತ್ತಿರುವುದು ಕಾಣಿಸತೊಡಗಿತು. ಆದರ್ಶ

ಮತ್ತು ಗುಣ ಪಕ್ಷಪಾತಿಗಳಾದ ಕಾರಂತರು ಈ ಬೆಳವಣಿಗೆಗಳಿಂದ ತುಂಬ ನೊಂದರು. ಮಾನಸಿಕವಾಗಿ ಆಚಾರ್ಯ ಜೆ.ಬಿ. ಕೃಪಲಾನಿ ಮೊದಲಾದವರೊಂದಿಗೆ ಸೇರಿಕೊಂಡರು. ೧೯೫೧ ರಲ್ಲಿ "ವಿಚಾರವಾಣಿ" ಎಂಬ ಪತ್ರಿಕೆಯನ್ನು ಆರಂಭಿಸಿದರು. ರಾಜಕೀಯ ವಿಚಾರಧಾರೆ ಮತ್ತು ಅಭಿವೃದ್ಧಿಯ ತತ್ತ್ವಾದರ್ಶಗಳನ್ನು ಈ ಪತ್ರಿಕೆಯ ಮೂಲಕ ಹರಡಬೇಕೆಂಬುದು ಅವರ ಕನಸಾಗಿತ್ತು.

ಡಾ. ಶಿವರಾಮ ಕಾರಂತರು 'ವಿಚಾರವಾಣಿ'ಯ ಮೊದಲ ಸಂಪಾದಕರು. ಒಂದು ವಾರಪತ್ರಿಕೆ ಹೇಗಿರಬೇಕೆಂಬುದನ್ನು ಕನ್ನಡ ನಾಡಿಗೆ ಮೊಟ್ಟಮೊದಲಿಗೆ ಕಾರಂತ ಸಹೋದರರು ತೋರಿಸಿಕೊಟ್ಟರು. ಶಿವರಾಮ ಕಾರಂತರು ಬೇರೆ ಬೇರೆ ಕೆಲಸಗಳಲ್ಲಿ ವ್ಯಸ್ತರಾಗಿದ್ದುದರಿಂದ ಒಂದು ವರ್ಷದ ಬಳಿಕ ಪತ್ರಿಕೆಯ ಸಂಪಾದಕತ್ವವನ್ನು ಎಸ್. ಮುಕುಂದರಾವ್ ಎಂಬವರಿಗೆ ವಹಿಸಲಾಯಿತು. ಅಣ್ಣ ಕಾರಂತರ ರಾಜಕೀಯ ವಿಚಾರಧಾರೆ, ತಮ್ಮ ಕಾರಂತರ ಸಾಹಿತ್ಯಕ ವಿಚಾರಧಾರೆ 'ವಿಚಾರವಾಣಿ'ಯಲ್ಲಿ ಮೇಳೈಸಿತು. ಮುಕುಂದರಾಯರ ನಂತರ ಎಸ್. ಎಂ. ರಾಮಕೃಷ್ಣರಾವ್ ಸಂಪಾದಕರಾದರು. ಇದರ ಪ್ರಕಟಣೆಯಿಂದ ಕಾರಂತರು ಸಾಕಷ್ಟು ಹಣ ಕಳೆದುಕೊಂಡರು.

೧೯೫೪ ರಲ್ಲಿ 'ವಿಚಾರವಾಣಿ' ಯ ಸಂಪಾದಕತ್ವವನ್ನು ಆಗಿನ ಪ್ರಸಿದ್ಧ ಪತ್ರಕರ್ತ ಮಂಗಳೂರಿನ ಕೆ. ಎಸ್. ಉಪಾಧ್ಯಾಯ ಎಂಬವರಿಗೆ ವಹಿಸಲಾಯಿತು. ಅವರಿಗೆ ಬೆಂಬಲವಾಗಿ ಕೆ. ಆರ್. ಕಾರಂತರ ಶಿಷ್ಯ ಹಾಗೂ ಬರೆಹಗಾರ ಸೇವ ನಮಿರಾಜ ಮಲ್ಲ ದುಡಿದರು. ನಷ್ಟ ಏರುತ್ತಲೇ ಹೋದಾಗ ಒಂದು ಲಿಮಿಟೆಡ್ ಕಂಪೆನಿಯನ್ನು ಸ್ಥಾಪಿಸಿ ಬಂಡವಾಳ ಸಂಗ್ರಹಿಸುವ ನಿರ್ಧಾರ ಮಾಡಲಾಯಿತು. ಕಾರಂತರು ಅಧ್ಯಕ್ಷರಾಗಿ ಮತ್ತು ಕೆ. ಎಸ್. ಉಪಾಧ್ಯಾಯರು ಆಡಳಿತ ನಿರ್ದೇಶಕರಾಗಿರುವ ಒಂದು ಪ್ರೈವೇಟ್ ಲಿಮಿಟೆಡ್ ಕಂಪೆನಿಯನ್ನು ಸ್ಥಾಪಿಸಲಾಯಿತು. ಆಗಿನ ಕಾಲದ ರಾಜಕೀಯ ಮುಖಂಡರಾದ ಡಾ. ನಾಗಪ್ಪ ಆಳ್ವ, ಸಾಮಾಜಿಕ ಮುಖಂಡರಾದ ಖಂಡಿಗೆ ಗಣಪತಿ ಭಟ್ಟ ಮತ್ತು ಕಾರಂತರ ಸ್ನೇಹಿತರಾಗಿದ್ದ ಬಿ.ಎಸ್. ಕಕ್ಕಿಲ್ಲಾಯ ಕಂಪೆನಿಯ ನಿರ್ದೇಶಕ ಮಂಡಳಿಯ ಸದಸ್ಯರು. ಎಂ. ಜನಾರ್ದನ ಎಂಬವರನ್ನು ಸಂಪಾದಕರಾಗಿ ನೇಮಿಸಲಾಯಿತು. ಸಕಾಲದಲ್ಲಿ ಸಾಕಷ್ಟು ಬಂಡವಾಳ ಕೂಡಿಹಾಕಲು ಸಾಧ್ಯವಾಗದೆ ಕಂಪೆನಿ ಸೊರಗಿತು. ಪತ್ರಿಕೆಯ ಮೂಲ ಉದ್ದೇಶ ಕರ್ನಾಟಕ ಏಕೀಕರಣವಾಗಿತ್ತು. ಅದು ೧೯೫೬ ರಲ್ಲಿ ಕೈಗೂಡಿತು. ವಾರದಿಂದ ವಾರಕ್ಕೆ ನಷ್ಟ ಏರುತ್ತಲೇ ಹೋಯಿತು. ವಿಶೇಷ ಸಂಚಿಕೆಯೊಂದನ್ನು ಪ್ರಕಟಿಸುವ ಮೂಲಕ ಅದರ ಪ್ರಕಟಣೆಯನ್ನು ನಿಲ್ಲಿಸಲಾಯಿತು. ಎರಡು ವರ್ಷಗಳಲ್ಲಿ ಆದ ನಷ್ಟವನ್ನು ಕಾರಂತರೂ ಉಪಾಧ್ಯಾಯರೂ ಸೇರಿ ತುಂಬಿಕೊಂಡರು.

ಪತ್ರಿಕೆಯ ಸಂಪಾದಕೀಯ ಲೇಖನಗಳನ್ನು ಸೇವ ನಮಿರಾಜ ಮಲ್ಲರು ಬರೆದುಕೊಡುತ್ತಿದ್ದರು. ಕೆಲವೊಮ್ಮೆ ಕೆ. ಆರ್. ಕಾರಂತರು ಮತ್ತು ಶಿವರಾಮ ಕಾರಂತರು ಸಂಪಾದಕೀಯಗಳನ್ನು ಬರೆಯುತ್ತಿದ್ದರು. ಸಂಪಾದಕೀಯವಿರಲಿ, ಲೇಖನಗಳಿರಲಿ, ವಿವಾದಾಸ್ಪದವಾಗಿದ್ದರೆ ಕೆ. ಆರ್. ಕಾರಂತರಿಗೆ ತೋರಿಸದೆ ಮುದ್ರಿಸುವಂತಿರಲಿಲ್ಲ. ಅವರ ರಾಜಕೀಯ ಪ್ರತಿಸ್ಪರ್ಧಿಯೊಬ್ಬರ ಕುರಿತು ಬರೆದ ಲೇಖನ ನೋಡಿದ ಕಾರಂತರು ಒಮ್ಮೆ ಮಲ್ಲರನ್ನು ತರಾಟೆಗೆ ತೆಗೆದುಕೊಂಡಿದ್ದರು. ತಮ್ಮ ವಿರೋಧಿಗಳೇ ಆಗಿದ್ದರೂ ವ್ಯಕ್ತಿಗತ ಟೀಕೆಗಳನ್ನು ಅವರು ಸಹಿಸುತ್ತಿರಲಿಲ್ಲ. ಅವರ ಪತ್ರಿಕೆಯಲ್ಲಿ ಇಂತಹ ಸಣ್ಣತನಗಳಿಗೆ ಆಸ್ಪದವಿರಲಿಲ್ಲ.

ಕರ್ನಾಟಕದ ಏಕೀಕರಣದಲ್ಲಿ ಕೆ. ಆರ್. ಕಾರಂತರದು ನಿರ್ಣಾಯಕ ಪಾತ್ರ. ೧೯೫೬ ರ ಪೂರ್ವದಲ್ಲಿ, ಏಕೀಕರಣದ ಮುನ್ನ – ಹಳೆಯ ಮೈಸೂರು ಸಂಸ್ಥಾನದೊಡನೆ ವಿಶಾಲ ಕರ್ನಾಟಕ (ಮದರಾಸು ಸಂಸ್ಥಾನ, ಹೈದರಾಬಾದ್ ಕರ್ನಾಟಕ ಮತ್ತು ಮುಂಬೈ ಕರ್ನಾಟಕ) ಸೇರುವುದು ಬೇಡ ಎಂಬುದು ಹಳೆಯ ಮೈಸೂರು ಸಂಸ್ಥಾನದಲ್ಲಿದ್ದ ಕೆಲವರ ವಾದವಾಗಿತ್ತು. ಕೆ. ಆರ್. ಕಾರಂತರಿಗೆ ಈ ವಾದ ಒಪ್ಪಿತವಾಗದೆ, ಕರ್ನಾಟಕವೆಂದರೆ ವಿಶಾಲ ಕರ್ನಾಟಕ ಎಂದೇ ವಾದಿಸುತ್ತಿದ್ದರು. ಮತ್ತು ಅದಕ್ಕಾಗಿ ಜನರನ್ನು ಒಗ್ಗೂಡಿಸಲು , ಜಾಗೃತಿ ಉಂಟುಮಾಡಲು ಕರ್ನಾಟಕದಾದ್ಯಂತ ಓಡಾಡಿ ನೂರಾರು ಸಭೆ-ಸಮಾರಂಭಗಳಲ್ಲಿ ಭಾಷಣ ಮಾಡಿದರು. ಅವರು ಸುಮಾರು ಮೂವತ್ತು ವರ್ಷ ಕಾಂಗ್ರೆಸ್‌ನಲ್ಲಿದ್ದು ಸ್ವರಾಜ್ಯ ಹೋರಾಟದಲ್ಲಿ ಐದಾರು ವರ್ಷ ಕಾರಾಗೃಹವಾಸವನ್ನು ಅನುಭವಿಸಿದರೂ, ಕರ್ನಾಟಕ ಏಕೀಕರಣ ಪ್ರಶ್ನೆಯನ್ನು ಕಾಂಗ್ರೆಸ್ ಅಲಕ್ಷಿಸುತ್ತಿದೆಯೆಂಬ ಕಾರಣದಿಂದ (ಇತರ ಕಾರಣಗಳ ಜೊತೆಗೆ) ೧೯೫೧ ರಲ್ಲಿ ಕಾಂಗ್ರೆಸ್ ಬಿಟ್ಟು ಹೊರಬಂದಿದ್ದರು.

೧೯೫೬ ರ ನವೆಂಬರ್ ೧ ರಂದು ಭಾರತದಲ್ಲಿ ಭಾಷಾವಾರು ಪ್ರಾಂತ ರಚನೆಯಾಗಿ ಆಚರಣೆಯಲ್ಲಿ ಬಂದಿತು. ಅದರಂತೆ ಕರ್ನಾಟಕವೂ ಅಸ್ತಿತ್ವಕ್ಕೆ ಬಂದಿತು. (ಆಗ ಕರ್ನಾಟಕ ರಾಜ್ಯದ ಹೆಸರು ಮೈಸೂರು ರಾಜ್ಯ ಎಂದಾಗಿತ್ತು .

೧೯೫೬ ರ ನವೆಂಬರ್ ೧ ರ 'ವಿಚಾರವಾಣಿ' ಪತ್ರಿಕೆಯ 'ಕರ್ನಾಟಕ ರಾಜ್ಯೋತ್ಸವ ವಿಶೇಷಾಂಕ'ದಲ್ಲಿ ಕೆ. ಆರ್. ಕಾರಂತರು "ಏಕೀಕರಣ ಚಳವಳದ ಮೈಲಿಗಲ್ಲುಗಳು" ಎಂಬ ಲೇಖನ ಬರೆದರು. ಹಲವಾರು ಮಾಹಿತಿ ಮತ್ತು ಒಳನೋಟಗಳಿರುವ ಈ ಲೇಖನವನ್ನು ಈ ಮುಂದೆ ಯಥಾವತ್ತಾಗಿ ನೀಡಿದ್ದೇವೆ. ರಾಜಕಾರಣಿ, ಮುತ್ಸದ್ಧಿ ವ್ಯಕ್ತಿಯೊಬ್ಬ ಲೇಖಕನಾಗಿ ತನ್ನ ವಿಚಾರಧಾರೆಯನ್ನು ಹೇಗೆ ಹರಿಸಿದ್ದಾರೆ ಎಂಬುದು ಕೂಡ ಈ ಲೇಖನದ ಮೂಲಕ ವ್ಯಕ್ತವಾಗುತ್ತದೆ. ಕಾರಂತರ ಬಹುಮುಖೀ ವ್ಯಕ್ತಿತ್ವದ ಅನಾವರಣಕ್ಕೆ ಅದು ಸಹಕಾರಿ.

■

# ೭. ಏಕೀಕರಣ ಚಳವಳಿಯ ಮೈಲಿಗಲ್ಲುಗಳು

ಕನ್ನಡ ಭಾಷೆಯನ್ನಾಡುವ ಬ್ರಿಟಿಷ್ ಇಂಡಿಯಾದ ಪ್ರದೇಶದವರಿಗೆ ಪ್ರತ್ಯೇಕ ಪ್ರಾಂತ್ಯವೊಂದರ ನಿರ್ಮಾಣವಾಗಬೇಕೆಂಬ ಚಳವಳವು ೧೯೦೬ ಅಥವಾ ೧೯೦೭ ರಲ್ಲಿ ಆರಂಭವಾಯಿತೆಂದು ನನ್ನ ಮಿತ್ರರಾದ ಕೆಲವು ಕನ್ನಡ ಸಾಹಿತಿಗಳು ಹೇಳುತ್ತಾರೆ. ಅದು ನನಗೆ ಸ್ವತಃ ತಿಳಿದಿಲ್ಲ. ಆದರೆ ೧೯೧೭ ರಲ್ಲಿ ಭಾರತಕ್ಕೆ ಬಂದಿದ್ದ ಆಗಿನ ಸೆಕ್ರಟರಿ ಆಫ್ ಸ್ಟೇಟ್ ಆಗಿದ್ದ ಮಾಂಟೆಗೋರಿಗೆ, ಕನ್ನಡಿಗರಿಗೆ ಪ್ರತ್ಯೇಕ ಪ್ರಾಂತ್ಯವನ್ನು ನಿರ್ಮಿಸಬೇಕೆಂದು ಬ್ರಿಟಿಷ್ ಸರಕಾರವನ್ನು ಪ್ರಾರ್ಥಿಸುವ ಮನವಿಯನ್ನು ಅರ್ಪಿಸಿದುದರ ಒಂದು ಮುದ್ರಿತ ಪ್ರತಿ ನನ್ನೊಡನೆ ಇದೆ. ಇದರಿಂದೇನೂ ಪರಿಣಾಮ ಆಗಲಿಲ್ಲ.

ಈ ದಿಶೆಯಲ್ಲಿ ನಿಜವಾದ ಕಾರ್ಯಾರಂಭವು ೧೯೨೦ ರಲ್ಲಿ ಆಯಿತೆನ್ನಬಹುದು. ಗಾಂಧೀಜಿಯವರ ಮುಖಂಡತ್ವದಲ್ಲಿ ಕಾಂಗ್ರೆಸ್ ಘಟನೆಯು ಬದಲಾಯಿಸಲ್ಪಟ್ಟು ಭಾಷಾವಾರು ಪ್ರಾಂತ್ಯಗಳನ್ನು ಅದರಲ್ಲಿ ಸೇರಿಸಲಾಯಿತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಧ್ವಜದಡಿಯಲ್ಲಿ ಸ್ವಾತಂತ್ರ್ಯ ಚಳವಳಿಗಳು ಆಗಾಗ ನಡೆಯುತ್ತಿದ್ದು, ಆಗ ಸ್ವರಾಜ್ಯವನ್ನು ಗಳಿಸುವುದರ ನಂತರ ಕರ್ನಾಟಕ ಪ್ರಾಂತ್ಯ ನಿರ್ಮಾಣದ ಧ್ಯೇಯವೇ ಪ್ರಮುಖವಾಗಿತ್ತು.

ಆ ಬಳಿಕ ೧೯೨೮ರಲ್ಲಿ ಸರ್ವಪಕ್ಷೀಯ ಸಮ್ಮೇಳನ ( all parties conference )ವು ಭಾರತದ ಪುನರ್ ಘಟನೆಯ ಕುರಿತೂ, ಕರ್ನಾಟಕ ಪ್ರಾಂತ್ಯ ನಿರ್ಮಾಣದ ಕುರಿತೂ ವರದಿ ಮಾಡಿದುದು ಉಲ್ಲೇಖನೀಯ ಘಟನೆ. ಆ ವರದಿಯಲ್ಲಿ ಕರ್ನಾಟಕ ಪ್ರಾಂತ್ಯ ನಿರ್ಮಾಣಕ್ಕೆ ಅಗ್ರಸ್ಥಾನ ಕೊಡಲಾಗಿತ್ತು. ಆದರೆ ಆಗ ಕೂಡ ಈ ತತ್ತ್ವವು ಬ್ರಿಟಿಷ್ ಇಂಡಿಯಾದ ಪ್ರದೇಶಗಳನ್ನು ಸಂಬಂಧಿಸಿತ್ತಲ್ಲದೆ, ದೇಶೀಯ ರಾಜ್ಯಗಳನ್ನಲ್ಲ.

೧೯೩೬–೩೭ ರಲ್ಲಿ ಭಾಷಾವಾರು ರಾಜ್ಯ ನಿರ್ಮಾಣದ ಧ್ಯೇಯವು ಕಾಂಗ್ರೆಸ್‌ನ ಚುನಾವಣಾ ಕಾರ್ಯಕ್ರಮದಲ್ಲಿ ವಿಶಿಷ್ಟವಾಗಿ ಅಳವಡಿಸಲ್ಪಟ್ಟು, ಮದರಾಸು ಮತ್ತು ಮುಂಬಯಿಗಳಲ್ಲಿ ಕಾಂಗ್ರೆಸ್ ಸರಕಾರಗಳು ರಚನೆಯಾದೊಡನೆ ಕಾಂಗ್ರೆಸ್

ಕಾರ್ಯಕಾರೀ ಮಂಡಲದ ಒಪ್ಪಿಗೆ ಪಡೆದು ಆ ಸರ್ಕಾರಗಳು ಆಂಧ್ರ, ಕೇರಳ ಮತ್ತು ಕರ್ನಾಟಕ ಭಾಷಾವಾರು ಪ್ರಾಂತ್ಯಗಳ ರಚನೆಯಾಗಬೇಕೆಂದು ಬ್ರಿಟಿಷ್ ಸರಕಾರಕ್ಕೆ ಶಿಫಾರಸು ಮಾಡುವ ನಿರ್ಣಯಗಳನ್ನು ೧೯೩೭-೩೮ ರಲ್ಲಿ ತಮ್ಮ ಶಾಸನ ಸಭೆಗಳಲ್ಲಿ ಮಂಜೂರು ಮಾಡಿದವು.

## ಸ್ಪಷ್ಟ ನಿರ್ಣಯ

ಈ ಚಳವಳದೊಡನೆ ನನಗೆ ೧೯೩೮ ನೇ ಮೇ ತಿಂಗಳಲ್ಲಿ ಸಂಪರ್ಕವಾಯಿತು. ನಾನು ಆಗ ಧಾರವಾಡದಲ್ಲಿ ನಡೆದ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷತೆ ವಹಿಸಿದೆ. ಆ ಪರಿಷತ್ತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯನ್ನು ಕಾಣಲು ಒಂದು ಶಿಷ್ಟ ಮಂಡಳಿಯನ್ನು ರಚಿಸಿ, ಆ ಮಂಡಳಿಯು ವಾರ್ಧಾದಲ್ಲಿ ಅದೇ ವರ್ಷ ಸೆಪ್ಟೆಂಬರ್‌ನಲ್ಲಿ ಸಮಿತಿಯನ್ನು ಭೇಟಿಯಾಯಿತು. ಕಾಂಗ್ರೆಸ್ ಸಮಿತಿಯ ಸಭೆಯು ಸುಭಾಷ್ ಚಂದ್ರ ಬೋಸರ ಅಧ್ಯಕ್ಷತೆಯಲ್ಲಿ ನಡೆದು, ಭಾಷಾವಾರು ಪ್ರಾಂತ್ಯ ರಚನೆಯ ಪರವಾದ ಸ್ಪಷ್ಟ ನಿರ್ಣಯವನ್ನು ಅಂಗೀಕರಿಸಿತು. ಅದು ಕರ್ನಾಟಕ ರಚನೆಯ ಕುರಿತೂ ಸ್ಪಷ್ಟವಾಗಿ ಹೇಳಿತ್ತು. "ಕಾಂಗ್ರೆಸ್ ತಕ್ಕ ಅಧಿಕಾರವನ್ನು ಪಡೆದೊಡನೆ ಭಾರತ ಸರಕಾರದ ಮುಂದಿನ ಕಾರ್ಯಕ್ರಮದ ಅಂಗವಾಗಿ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು" ಎಂದು "ಆಂಧ್ರ, ಕರ್ನಾಟಕ ಮತ್ತು ಕೇರಳಗಳ ಜನತೆಗೆ" ಅದು ಆಶ್ವಾಸನೆಯನ್ನಿತ್ತಿತು. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಕಾಂಗ್ರೆಸ್ ಸರಕಾರಗಳು ಅಧಿಕಾರ ತ್ಯಾಗ ಮಾಡಿ ೧೯೪೨ ರ ಆಗಸ್ಟ್‌ನಲ್ಲಿ 'ಭಾರತ ಬಿಟ್ಟು ತೊಲಗಿ' ಚಳವಳ ಆರಂಭವಾಯಿತು.

೧೯೪೬ ರ ಜನವರಿಯಲ್ಲಿ ಮುಂಬಯಿಯಲ್ಲಿ ಜರುಗಿದ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತನ್ನು ಉದ್ಘಾಟಿಸುತ್ತ ಸರ್ದಾರ್ ವಲ್ಲಭಾಯ್ ಪಟೇಲರು ಕಾಂಗ್ರೆಸ್‌ನ ಹಿಂದಿನ ಆಶ್ವಾಸನೆಗಳನ್ನು ಪುನರುಚ್ಚರಿಸಿ ಕನ್ನಡ ಜನತೆಯು "ಹರಿಹಂಚಾದ ಕನ್ನಡ ಪ್ರದೇಶಗಳು ಒಂದಾಗಿ, ಒಂದು ಪ್ರಾಂತ್ಯ ಸರಕಾರದೊಡನೆ, ವಿಶ್ವವಿದ್ಯಾಲಯದೊಡನೆ ಮತ್ತು ತನ್ನದೇ ಆದ ಅಭಿಮಾನೀ ಪ್ರಾಂತ್ಯ ಜೀವನದೊಡನೆ ಸಂಯುಕ್ತ ಕರ್ನಾಟಕವು ಉದಯವಾಗುವುದಕ್ಕೆ ಹೆಚ್ಚು ಸಮಯ ಕಾಯಬೇಕಾಗಿಲ್ಲ" ಎಂದರು. ಇದರ ಬೆನ್ನಲ್ಲೇ ೧೯೪೫-೪೬ರ ಕಾಂಗ್ರೆಸ್ ಚುನಾವಣಾ ಘೋಷಣೆಯೂ ಸಿದ್ಧವಾಯಿತು.

ಬ್ರಿಟಿಷರು ತೊಲಗಲು ನಿಶ್ಚೈಸಿದೊಡನೆ ರಾಜ್ಯಾಂಗ ಸಭೆಯು ೧೯೪೬ ರ ನವೆಂಬರ್ ತಿಂಗಳಲ್ಲಿ ಸೇರಿ ಕಾರ್ಯೋನ್ಮುಖವಾಯಿತು. ನಿಜವಾದ ಅಧಿಕಾರವು ಕಾಂಗ್ರೆಸ್‌ಗೆ ಸಿಗತೊಡಗಿದ ಬಳಿಕ ತಾನೇ, ತಾನು ಕೆಲವು ದಶಕಗಳಿಂದ ಕೊಟ್ಟಿದ್ದ

ಆಶ್ವಾಸನೆಯನ್ನು ಕಾರ್ಯಗತಗೊಳಿಸಲು ಅದು ಸಂಕೋಚಪಡತೊಡಗಿತು. ದೆಹಲಿಯಲ್ಲಿ ರಾಜ್ಯಾಂಗ ಸಭೆಯ ಚುನಾಯಿತ ಪ್ರತಿನಿಧಿಗಳ ಸಭೆಯೊಂದು ೧೯೪೬ರ ಡಿಸೆಂಬರ್‌ನಲ್ಲಿ ಜರುಗಿ, ಅದರಲ್ಲಿ ರಾಜ್ಯಾಂಗ ಸಭೆಯು ತನ್ನ ಪ್ರಥಮಾಧಿವೇಶನದಲ್ಲೇ ಭಾಷಾವಾರು ರಾಜ್ಯ ನಿರ್ಮಾಣದ ತತ್ತ್ವವನ್ನು ಸ್ವೀಕರಿಸಿ, ಅದಕ್ಕೆ ಅಗತ್ಯವುಳ್ಳ ವ್ಯವಸ್ಥೆ ಮಾಡಬೇಕೆಂಬ ನಿರ್ಣಯವು ಶ್ರೀ ಆರ್. ಆರ್. ದಿವಾಕರರಿಂದ ಮಂಡಿಸಲ್ಪಟ್ಟಿತು. ಅದನ್ನು ಡಾ. ಎಂ. ಆರ್. ಜಯಕರ್, ಡಾ. ಶ್ಯಾಮಪ್ರಸಾದ ಮುಖರ್ಜಿ ಮುಂತಾದವರು ಪುಷ್ಟೀಕರಿಸಿದರು. ನಿರ್ಣಯವು ಸರ್ವಾನುಮತದಿಂದ ಸ್ವೀಕೃತವಾಯಿತು. ೧೯೪೭ ರಲ್ಲಿ ಮುಂಬೈ ಮತ್ತು ಮದ್ರಾಸ್ ಶಾಸನಸಭೆಗಳು ಪುನಃ ಭಾಷಾವಾರು ಪ್ರಾಂತ್ಯ ನಿರ್ಮಾಣದ ನಿರ್ಣಯಗಳನ್ನು ಮಾಡಿದವು. ೧೯೪೭ ರ ಆಗಸ್ಟ್ ೧೫ ರಂದು ಅಧಿಕಾರವು ವರ್ಗಾಯಿಸಲ್ಪಟ್ಟಿತು. ಅಂದಿನಿಂದ ಕಾಂಗ್ರೆಸ್ ಎರಡು ವಿಧದಲ್ಲಿ ಪರಸ್ಪರ ವಿರುದ್ಧವಾಗಿ ಮಾತಾಡತೊಡಗಿತು: ಕೆಲವರು ಹಿಂದಿನ ಆಶ್ವಾಸನೆಗಳನ್ನು ಮುರಿಯಲು ಯತ್ನಿಸುತ್ತಿದ್ದರು. ಇನ್ನು ಕೆಲವು ಮಂತ್ರಿಗಳೂ ಕಾಂಗ್ರೆಸ್ ನಾಯಕರೂ ಪ್ರಾಂತೀಯ ಶಾಸನ ಸಭೆಗಳಲ್ಲೂ ಹೊರಗೂ ಈ ಕೇಳಿಕೆಯನ್ನು ಬಲವಂತಪಡಿಸುತ್ತಿದ್ದರು. ರಾಜ್ಯಾಂಗ ಘಟನೆಯನ್ನು ಸಿದ್ಧಪಡಿಸಲು ನಿಯೋಜಿತವಾಗಿದ್ದ ರಾಜ್ಯಾಂಗ ಸಭೆಯಲ್ಲಿ ಬಹುಮತವಿದ್ದರೂ ಈ ಆಶ್ವಾಸನೆಗಳನ್ನು ನೆರವೇರಿಸಲು ಅದರಿಂದ ಸಾಧ್ಯವಾಗಲಿಲ್ಲ.

### ಕಾಸರಗೋಡು ದುರಂತ

೧೯೪೭ ರ ಡಿಸೆಂಬರ್‌ನಲ್ಲಿ ಇನ್ನೊಂದು ಅಖಿಲ ಕರ್ನಾಟಕ ಪರಿಷತ್ತು ಕಾಸರಗೋಡಿನಲ್ಲಿ ಶ್ರೀ ದಿವಾಕರರ ಅಧ್ಯಕ್ಷತೆಯಲ್ಲಿ ಜರುಗಿದುದನ್ನು ನೆನೆಯುವಾಗ ಮಿಶ್ರ ಭಾವನೆಗಳು ಬರುತ್ತಿವೆ. ಪರಿಷತ್ತು, ಹರಿಹಂಚಾಗಿ ಹಲವು ಆಡಳಿತಗಳಿಗೊಳಗಾಗಿರುವ ಕರ್ನಾಟಕದ ಜನರು ಪಡುವ ಕಷ್ಟಗಳನ್ನು ಸರ್ಕಾರಕ್ಕೆ ನಿವೇದಿಸಿ, ಕ್ಷಿಪ್ರದಲ್ಲೇ ಏಕೀಕರಣವಾಗಬೇಕೆಂದು ಒತ್ತಾಯಿಸಿತು. ನಾನು ಮಿಶ್ರ ಭಾವನೆ ಎಂದುದೇಕೆಂದರೆ, ೧೯೩೩ ರಲ್ಲೂ ಕಾಸರಗೋಡಿನಲ್ಲಿ ಇನ್ನೊಂದು ಕರ್ನಾಟಕ ಪರಿಷತ್ತು ಜರುಗಿದರೂ, ಈಗ ಈ ಭಾಗವನ್ನು ಜನರ ಆಸೆ ಆಕಾಂಕ್ಷೆಗಳ ವಿರುದ್ಧ ವಿಚ್ಛೇದಿಸಿ ಕೇರಳಕ್ಕೆ ಉಡುಗೊರೆಯಾಗಿ ಕೊಡಲಾಗಿದೆ. ಇದು ವೇದನಾಮಯ ವಿಷಯ.

ಇದಕ್ಕಿಂತ ತುಸುಮೊದಲು, ಅಂದರೆ ೧೯೪೭ ರ ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ ದಾವಣಗೆರೆಯಲ್ಲಿ ಮುಂಬೈಯ ಮಂತ್ರಿ ಶ್ರೀ ಎಂ.ಪಿ. ಪಾಟೀಲರ ಅಧ್ಯಕ್ಷತೆಯಲ್ಲಿ ಒಂದು ಪರಿಷತ್ತು ಜರುಗಿತ್ತು. ಅದನ್ನು ನಾನು ಉದ್ಘಾಟಿಸಿದ್ದೆ. ಆ ಪರಿಷತ್ತಿನಲ್ಲಿ ನಮ್ಮ ಕೆಲವು ಮೈಸೂರಿನ ಗೆಳೆಯರು ಕರ್ನಾಟಕ ಪ್ರಾಂತ್ಯವು

ಬ್ರಿಟಿಷ್ ಇಂಡಿಯಾದ ಕನ್ನಡ ಪ್ರದೇಶಗಳನ್ನಲ್ಲದೆ ಮೈಸೂರು ಸಂಸ್ಥಾನವನ್ನು ಒಳಗೊಂಡಿರಬೇಕೆಂದು ಎಷ್ಟು ಒತ್ತಾಯಪಡಿಸಿದ್ದರೆಂಬುದು ನನಗೆ ನೆನಪಿದೆ. ಆದರೆ ಅಂಥವರೇ ಮತ್ತೆ ಕರ್ನಾಟಕದ ನಿರ್ಮಾಣವು ಸಾಧ್ಯವೆನಿಸಿಕೊಳ್ಳುವ ಸಂದರ್ಭದಲ್ಲಿ ಅದನ್ನು ವಿರೋಧಿಸಿದ್ದು ವಿಪರ್ಯಾಸವೆನ್ನಬೇಕು.

ನನಗೆ ಇನ್ನೊಂದು ಶಿಷ್ಟ ಮಂಡಲದ ನೆನಪಿದೆ. ಆಗಿನ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಅದರ ಮುಖಂಡರಾಗಿದ್ದು, ಅದು ದೆಹಲಿಗೆ ೧೯೪೮ರ ಜನವರಿಯಲ್ಲಿ ಮಹಾತ್ಮಜಿಯವರ ಮರಣದ ಐದಾರು ದಿನಗಳ ಹಿಂದೆ ಹೋಗಿತ್ತು. ನಾವು ಆರೇಳು ಮಂದಿ ೧೯೪೮ ರ ಜನವರಿ ೨೪ ರಂದು ಬಿರ್ಲಾ ಮಂದಿರದಲ್ಲಿ ಮಹಾತ್ಮಗಾಂಧಿಯವರನ್ನು ಅವರ ಕೋಣೆಯಲ್ಲಿ ಕಂಡು ಕರ್ನಾಟಕ ನಿರ್ಮಾಣದ ಅತ್ಯಾವಶ್ಯಕತೆಯನ್ನು ವಿವರಿಸಿದೆವು. ಎರಡನೆಯ ದಿನ ಅವರ ಸಮಕ್ಷಮದಲ್ಲಿ ಅಲ್ಲೇ ಜರುಗಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯನ್ನು ಭೇಟಿಯಾದೆವು. ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಾಬು ರಾಜೇಂದ್ರ ಪ್ರಸಾದರು ಅಂಥ ಪ್ರಾಂತ್ಯ ನಿರ್ಮಾಣದ ವಿರುದ್ಧ ಕಾರವಾರದಿಂದ ತಂತಿಗಳು ಬಂದಿವೆಯೆಂದಾಗ, ಭಾರತಕ್ಕೆ ಸ್ವರಾಜ್ಯವನ್ನೀಯುವುದರ ವಿರುದ್ಧ ಲಂಡನ್ನಿಗೆ ೧೯೪೭ರ ಆಗಸ್ಟ್ ೧೫ ರಂದು ತಂತಿಗಳು ಹೋಗಬಹುದೆಂದು ನಾನು ಸಮಿತಿಗೆ ಹೇಳಿದುದಕ್ಕೆ ಎಲ್ಲರೂ ಗಹಗಹಿಸಿ ನಕ್ಕಿದ್ದು ನನಗೆ ನೆನಪಿದೆ. ಶಿಷ್ಟ ಮಂಡಳಿಯ ಭೇಟಿಯ ಬಳಿಕ ದಿನಾಂಕ ೯-೨-೧೯೪೮ ರಂದು ಕಾಂಗ್ರೆಸ್ ಅಧ್ಯಕ್ಷರು, ಕರ್ನಾಟಕ ಮತ್ತು ಆಂಧ್ರಗಳೊಂದಿಗೆ ಭೇದ ಮಾಡುವುದಿಲ್ಲವೆಂದು ಕರ್ನಾಟಕದ ಜನರಿಗೆ ಆಶ್ವಾಸನೆಯನ್ನೀಯುವ ಪತ್ರವನ್ನು ಶ್ರೀ ಎಸ್. ನಿಜಲಿಂಗಪ್ಪನವರಿಗಿತ್ತರು.

ಅನಂತರ ನಡೆದುದನ್ನು ಹೆಚ್ಚು ವಿವರಿಸುವ ಅಗತ್ಯವಿಲ್ಲ. ೧೯೪೮ ರಲ್ಲಿ ರಾಜ್ಯಾಂಗ ಸಭೆಯ ನಿರ್ದೇಶನದಲ್ಲಿ ಧಾರ್ ನಿಯೋಗವು ದೇಶವನ್ನಿಡೀ ಸುತ್ತಾಡಿ, ಕರ್ನಾಟಕಕ್ಕೆ ಕೂಡ ಬಂತು. ಸಾವಿರಕ್ಕಿಂತಲೂ ಹೆಚ್ಚು ಮನವಿಗಳನ್ನೂ ಸುಮಾರು ಏಳುನೂರರಷ್ಟು ಸಾಕ್ಷ್ಯಗಳನ್ನೂ ಪರಿಶೀಲಿಸಿ ಅದೇ ವರ್ಷ ಡಿಸೆಂಬರ್‌ನಲ್ಲಿ ಭಾಷಾವಾರು ಪ್ರಾಂತಗಳ ರಚನೆಗೆ ಅವಸರ ಮಾಡುವುದು ಅಗತ್ಯವಿಲ್ಲವೆಂದು ಶಿಫಾರಸು ಮಾಡಿತು. ಈ ವರದಿ ದೇಶದೆಲ್ಲೆಡೆ ತೀವ್ರ ನಿರಾಶೆಯನ್ನುಂಟು ಮಾಡಿತು.

ಜನತೆಯ ಭಾವನೆಯನ್ನು ಶಾಂತಗೊಳಿಸಿ ಉದ್ರೇಕವನ್ನು ಇಳಿಸಲು ಕಾಂಗ್ರೆಸ್ ಮತ್ತೆ ತುಸು ಸಮಯದ ಬಳಿಕ ಜಯಪುರದಲ್ಲಿ ಸೇರಿ, ಪ್ರಧಾನಿ, ಸರ್ದಾರ್ ವಲ್ಲಭ ಭಾಯಿ ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯನವರನ್ನೊಳಗೊಂಡ ಇನ್ನೊಂದು ಸಮಿತಿಯನ್ನು ನೇಮಿಸಿತು. ಅದರ ವರದಿಗೆ ಜೆ.ವಿ.ಪಿ. ವರದಿ

ಎಂದೇ ಕರೆಯಲಾಗಿದೆ. ಅದು "ಜನತೆಯ ಭಾವನೆ ಅಷ್ಟು ಪ್ರಬಲವಾಗಿದ್ದರೆ, ಪ್ರಜಾಸತ್ತಾವಾದಿಗಳಾದ ತಾವು ಅದಕ್ಕೆ ಬಗ್ಗಬೇಕು" ಎಂದಿತು. ಮತ್ತೆ ಸ್ವಲ್ಪ ಸಮಯ ಹೀಗೇ ಇದ್ದು ೧೯೫೧ ರ ಮಹಾಚುನಾವಣೆಯಲ್ಲಿ ಕಾಂಗ್ರೆಸ್ ಪುನಃ ಕರ್ನಾಟಕದ ಜನತೆಗೆ ಆಶ್ವಾಸನೆಗಳನ್ನಿತ್ತಿತು. ಆದರೆ ಆಂಧ್ರದವರು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಪೊಟ್ಟಿ ಶ್ರೀರಾಮುಲು ಉಪವಾಸವನ್ನು ಆರಂಭಿಸಿದರು. ಅದು ಆರಂಭವಾದಾಗ ಪ್ರಧಾನಿ ನೆಹರೂರವರು ಅದನ್ನು ಖಂಡಿಸುತ್ತ ಅಂಥ ಒತ್ತಾಯಕ್ಕೆ ತಾನಾಗಲೀ ತನ್ನ ಸರಕಾರವಾಗಲೀ ಮಣಿಯದೆಂದರು. ಆದರೆ ಕೆಲವು ದಿನಗಳಲ್ಲೇ ಆಂಧ್ರದಲ್ಲಿ ರೈಲುಗಳು ನಿಲ್ಲಿಸಲ್ಪಟ್ಟವು. ಜನರು ಆಕ್ರೋಶದಿಂದ ಲಕ್ಷಗಟ್ಟಲೆ ಬೆಲೆಯ ರೈಲು ಸಾಮಗ್ರಿಗಳನ್ನು ಸರಕುಗಳನ್ನು ನಾಶಮಾಡಿದರು. ನೆಹರೂರವರೂ ಅವರ ಸರಕಾರವೂ ಉಸಿರೆತ್ತದೆ ಮಣಿದರು. ಆಂಧ್ರ ರಾಜ್ಯದ ಬಗ್ಗೆ ಆಶ್ವಾಸನೆ ಕೊಟ್ಟದ್ದಲ್ಲದೆ, ಅದು ಕಾರ್ಯಗತವೂ ಆಯಿತು. ನಾವು ನಡುದಾರಿಯಲ್ಲೇ ಉಳಿದೆವು.

### ಬಿರುಸು ಚಳವಳ

೧೯೫೩ ರ ಮೇ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ದಾವಣಗೆರೆ ಮತ್ತು ಹಂಪಿಗಳಲ್ಲಿ ಸರ್ವಪಕ್ಷೀಯ ಪರಿಷತ್ತುಗಳು ಜರುಗಿ ಆ ತಿಂಗಳುಗಳಲ್ಲಿ ಸುಮಾರು ಐನೂರು ಜನರು ಉತ್ತರ ಕರ್ನಾಟಕದಲ್ಲಿ ಬಂಧಿಸಲ್ಪಟ್ಟರು. ನನಗೆ ತಿಳಿದ ಮಟ್ಟಿಗೆ ಬಿಹಾರ-ಬಂಗಾಳ ಅಥವಾ ಒರಿಸ್ಸಾ-ಬಿಹಾರ್ ದಂಥ ಗಡಿವಿವಾದಗಳ ಚಳವಳಗಳಿದ್ದುವಲ್ಲದೆ, ಹೆಚ್ಚು ಪ್ರಮಾಣದ ಪುನರ್ಘಟನೆಗಳಿಗೆ ಆಗ ಒತ್ತಾಯವಿದ್ದಿಲ್ಲವೆಂದು ತೋರುತ್ತದೆ. ಉದಾಹರಣೆಗೆ ಮಹಾರಾಷ್ಟ್ರೀಯರು ತಮಗೊಂದು ಪ್ರಾಂತ್ಯ ಬೇಕೆಂದು ಕೇಳುತ್ತಿರಲಿಲ್ಲ. ಬ್ರಿಟಿಷರ ಕಾಲದಲ್ಲಿ ಹೆಚ್ಚಾಗಿ ರಾಜಕೀಯ ಮತ್ತು ಇತರ ಅಕಲ್ಪಿತ ಕಾರಣಗಳಿಗಾಗಿ ಪ್ರಾಂತ್ಯಗಳ ರಚನೆಯಾಗಿದ್ದುದರಿಂದ ಭಾಷಾವಾರು ಪ್ರಾಂತ್ಯಗಳ ರಚನೆ ಅವಶ್ಯವಿತ್ತೆಂಬುದು ನಿಸ್ಸಂದೇಹ. ಆಂಧ್ರ ರಾಜ್ಯ ನಿರ್ಮಾಣವಾದ ಬಳಿಕ ಕರ್ನಾಟಕದ ಜನರ ಒತ್ತಾಯವನ್ನು ತಡೆಯಲಾರದೆ ಕೊನೆಗೆ ಸರ್ಕಾರವು ರಾಜ್ಯ ಪುನರ್ಘಟನಾ ಸಮಿತಿಯನ್ನು ನೇಮಿಸಿತು. ಅದರ ಕಾರ್ಯ ಕಲಾಪದ ಮಟ್ಟಿಗೆ ಸದ್ಯ ವಿವರಿಸುವ ಅಗತ್ಯವಿಲ್ಲ. ಈ ಸಮಿತಿಯು ಭಾಷಾವಾರು ರಾಜ್ಯ ರಚನೆಯ ತತ್ತ್ವವನ್ನು ಒಪ್ಪದಿದ್ದರೂ ಅದು ಭಾಷಾವಾರು ರಾಜ್ಯ ರಚನೆಯನ್ನೇ ಶಿಫಾರಸು ಮಾಡಿತು. ಪಂಜಾಬ್ ಮತ್ತು ಮುಂಬಯಿಯಲ್ಲಿ ಮಾತ್ರ, ಬಹುಶಃ ಸಮತೂಕವನ್ನುಂಟು ಮಾಡಲಿಕ್ಕೊ ಏನೋ, ದ್ವಿಭಾಷಾ ರಾಜ್ಯ ರಚನೆಯನ್ನು ಶಿಫಾರಸು ಮಾಡಿತು. ಕಳೆದ ಡಿಸೆಂಬರ್ ಮತ್ತು ಜನವರಿಯಲ್ಲಿ ನಡೆದ ಗಲಭೆ ಬಹಳ ದುಃಖಪೂರಿತವಾದುದು. ನಾನು ಕಳೆದ ಫೆಬ್ರವರಿಯಲ್ಲಿ ಪರಿಸ್ಥಿತಿಯನ್ನು ಪರಿಶೀಲಿಸಲು ಮುಂಬಯಿ ನಗರದಲ್ಲಿ

ಕೆಲವು ದಿನ ತಂಗಿದ್ದೆ. ನನ್ನಂಥ ಭಾಷಾವಾರು ಪ್ರಾಂತದ ಅತ್ಯಂತ ವ್ಯಾಮೋಹವುಳ್ಳವನಿಗೆ ಸಹಾ ಕೇವಲ ಭಾಷಾ ದ್ವೇಷದಿಂದಾಗಿ, ಒಂದು ಭಾಷೆಯ ಜನರು ಕೆಲವು ವೇಳೆ ತಮ್ಮ ನೆರೆಕರೆಯ ಇನ್ನೊಂದು ಭಾಷೆಯ ಜನರ ವಿರುದ್ಧ ಕೂಡಾ ದುಷ್ಕೃತ್ಯಗಳನ್ನು ಮಾಡುವುದನ್ನು ನೋಡಿ ಒಂದು ಹೊಸ ಪಾಠವನ್ನು ಕಲಿತಂತಾಯಿತು.

ಕರ್ನಾಟಕದ ವಿಷಯದಲ್ಲಿ ನಾವು ಪಡೆದುದಕ್ಕೆ ಆಭಾರಿಗಳಾಗಿರಬೇಕು. ಆದರೆ ಗಡಿಪ್ರದೇಶಗಳಲ್ಲಿ ಹಲವೆಡೆ ವಿಶೇಷ ಅನ್ಯಾಯವಾಗಿದೆ. ಕಾಸರಗೋಡು, ಮದ್ರಾಸು ಶಾಸನ ಸಭೆಯಲ್ಲಿ ನನ್ನಿಂದ ಬಹುಕಾಲ ಪ್ರತಿನಿಧೀಕರಿಸಲ್ಪಟ್ಟ ಪ್ರದೇಶ. ಇದರ ವಿಷಯ ನನಗೆ ಚೆನ್ನಾಗಿ ಗೊತ್ತಿದೆ. ಇದರ ಬಗ್ಗೆ ನಾನು ಮೂರು ಬಾರಿ ದೆಹಲಿಗೆ ಹೋಗಿದ್ದೆ. ಶತಮಾನಗಳಿಂದ ಕರ್ನಾಟಕ ಪ್ರದೇಶಕ್ಕೆ ಸೇರಿದ್ದ ಈ ಪ್ರದೇಶದ ಎರಡು ಲಕ್ಷ ಕನ್ನಡಿಗರ ಭವಿತವ್ಯದ ಕುರಿತು ನಮ್ಮ ವಾದ ಪುರಸ್ಕರಣೀಯವಾಗಿತ್ತು. ಸಂಖ್ಯೆ ಮತ್ತು ಸಂಗತಿಗಳ ಮೂಲಕ ಈ ಪ್ರದೇಶವು ಕರ್ನಾಟಕದ ಅವಿಭಾಜ್ಯ ಅಂಗವೆಂದು ಯಾರಿಗೂ ನಾವು ಮನಗಾಣಿಸಲು ಶಕ್ತರಿದ್ದೇವಲ್ಲದೆ, ಅದು ಜನರ ಸರ್ವಾನುಮತದ ಅಪೇಕ್ಷೆಯೂ ಆಗಿತ್ತು. ಮದ್ರಾಸು ಮತ್ತು ದೆಹಲಿಯಲ್ಲಿ ಅದರ ಶಾಸನ ಸಭಾ ಪ್ರತಿನಿಧಿಗಳು ಆ ಬಗ್ಗೆ ಒಕ್ಕೊರಲಿನಿಂದ ಪ್ರತಿಪಾದಿಸಿದ್ದರು. ನಿಷ್ಪಕ್ಷಪಾತವಾದ ಮದ್ರಾಸು ಸರಕಾರ ಕೂಡ ಈ ವಿಷಯವನ್ನು ಪರಿಶೀಲಿಸಿ, ಈ ವಿನಂತಿಯನ್ನು ಸ್ವೀಕರಿಸುವಂತೆ ಭಾರತ ಸರಕಾರಕ್ಕೆ ಶಿಫಾರಸು ಮಾಡಿತ್ತು. ಮದ್ರಾಸು ಶಾಸನ ಸಭೆಯೂ ಈ ಅಪೇಕ್ಷೆಗೆ ಬೆಂಬಲವಿತ್ತಿತ್ತು. ಅಲ್ಲದೆ ಈ ಪ್ರದೇಶದ ಸುಮಾರು ನಾನ್ನೂರು ಮಂದಿ ಸ್ತ್ರೀ ಪುರುಷರು ಅಹಿಂಸಾತ್ಮಕ ಸತ್ಯಾಗ್ರಹವನ್ನೂ ಹೂಡಿದರು. ಆದರೆ ನಾನು ಮೂರು ಬಾರಿ ಹೋದಾಗಲು ಭೇಟಿಯಾದ ಸೆಲೆಕ್ಟ್ ಕಮಿಟಿಯ ಅನೇಕ ಸದಸ್ಯರೂ ನಮ್ಮ ವಾದದ ಸಮರ್ಥನೆಯನ್ನು ಮನಗಂಡರೂ, ಅದನ್ನು ಸರಿಪಡಿಸಲು ಯಾರೂ ಮುಂದಾಗದಿದ್ದುದು ಅತ್ಯಂತ ವ್ಯಸನವನ್ನುಂಟು ಮಾಡಿತು. ಈ ವಿಷಯದಲ್ಲಿ ಒಕ್ಕೂಟ ಸರ್ಕಾರದ ಗೃಹಮಂತ್ರಿಯವರ ಭೂಮಿಕೆಯ ವಿಷಯವನ್ನು ನಾನು ಪ್ರಸ್ತಾಪಿಸಬಯಸುತ್ತೇನೆ. ಸರ್ದಾರ್ ವಲ್ಲಭ ಭಾಯಿ ಪಟೇಲರು ಜೀವಂತರಾಗಿದ್ದು, ಈ ಕೆಲಸವನ್ನು ನಡೆಸುತ್ತಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತೆಂದು ನನಗೆ ಸದಾ ಆಗ ತೋರುತ್ತಿತ್ತು. ನಾವು ಒಮ್ಮೆ ಸರ್ದಾರರಿಗೆ ಮನಗಾಣಿಸಿದರೆ ಸಾಕು; ಅವರಿಗೆ ನ್ಯಾಯವಾದುದನ್ನು ಮಾಡುವ ಧೀರತೆಯಿತ್ತು. ಆದರೆ ಪಂತರು ಹಾಗಲ್ಲ. ನಮ್ಮ ವಾದಗಳೆಲ್ಲ ಅವರಿಗೆ ಗೊತ್ತಿದ್ದವು. ಅವರು ತಾವಾಗಿಯೇ ಅವನ್ನು ಒಂದೊಂದಾಗಿ ಹೇಳುತ್ತಿದ್ದರಲ್ಲದೆ, ಅಲ್ಲಿ ಅನ್ಯಾಯವಾಗಿದೆಯೆಂದೂ ಅವನ್ನು ಸರಿಪಡಿಸಬೇಕೆಂದು ಕೂಡಾ ನುಡಿಯುತ್ತಿದ್ದರು. ಆದರೆ ತಾವು ಕೊಟ್ಟ ವಚನವನ್ನು ಪಾಲಿಸುವ

ಮನೋದಾರ್ಢ್ಯ ಅವರಲ್ಲಿರಲಿಲ್ಲ. ಕಾಂಗ್ರೆಸ್ ನೇಮಿಸಿದ ಕಾಂಗ್ರೆಸ್ ಅಧ್ಯಕ್ಷ, ಪ್ರಧಾನಿ, ಪಂಡಿತ ಪಂತ್ ಮತ್ತು ಮೌಲಾನಾ ಆಜಾದ್‌ರನ್ನೊಳಗೊಂಡ ಚತುರ್ನಾಯಕ ಸಮಿತಿಯೂ ಈ ಪ್ರದೇಶ ಕರ್ನಾಟಕಕ್ಕೆ ಸೇರಬೇಕೆಂದು ಶಿಫಾರಸು ಮಾಡಿತ್ತೆಂಬುದು ಗೊತ್ತಿದೆ; ಆದರೆ ನೀಲಗಿರಿಯ ಗುಡಲೂರನ್ನು ಕೇರಳಕ್ಕೆ ಕೊಟ್ಟರೆ ತಾನು ರಾಜೀನಾಮೆ ಕೊಡುವೆನೆಂದು ಮದರಾಸಿನ ಮುಖ್ಯಮಂತ್ರಿಯು ಬೆದರಿಸಲು, ಪೂರ್ವಾಲೋಚನೆಯಿಲ್ಲದೆ ಕ್ಷುಲ್ಲಕ ಕಾರಣಕ್ಕಾಗಿ ಕೇರಳಕ್ಕೆ ಪರಿಹಾರ ಉಡುಗೊರೆಯಾಗಿ ಕಾಸರಗೋಡು ಕೊಡಲ್ಪಟ್ಟಿತು. ಇದು ಅತ್ಯಂತ ವೇದನಾಮಯ ಸಂಗತಿ.

ಹೊಸರಾಜ್ಯಕ್ಕೆ ಮೈಸೂರು ಎಂದು ನಾಮಕರಣ ಮಾಡಿದ ಅನ್ಯಾಯವು ಪಂಡಿತ ಪಂತರ ಮನೋವೃತ್ತಿಯ ಇನ್ನೊಂದು ನಿದರ್ಶನವಾಗಿದೆ. ಚಳವಳದ ದೀರ್ಘ ಇತಿಹಾಸ ಮತ್ತು ಹೊರಗಿನ ಬಹುಮತದ ಅಪೇಕ್ಷೆಯು ಹೊಸ ರಾಜ್ಯದ ಹೆಸರು ಕರ್ನಾಟಕವೆಂದೇ ಇರಬೇಕಲ್ಲದೆ ಮೈಸೂರು ಎಂದು ಇರಬಾರದು ಎಂದಾಗಿತ್ತು. ಸೆಲೆಕ್ಟ್ ಕಮಿಟಿಗೆ ಐವತ್ತು ಮಂದಿ ಪಾರ್ಲಿಮೆಂಟ್ ಸದಸ್ಯರು ಈ ಬಗ್ಗೆ ಬರಹ ಮೂಲಕ ವಿನಂತಿಸಿಕೊಂಡಿದ್ದರು. ಆದರೂ ಪಂತಜೀ ಮೈಸೂರಿನ ಯಾರಿಗೋ ಖಾಸಗಿಯಾಗಿ ಆ ಬಗ್ಗೆ ವಚನವಿತ್ತಿದ್ದರಿಂದ, ಅದನ್ನು ಬದಲಾಯಿಸಲಾರದಾದರು. ಇಂಥವರೊಡನೆ ಗಡಿನಾಡುಗಳಲ್ಲಿರುವ ಮಿಲಿಯಗಟ್ಟಲೆ ಜನರ ಭವಿತವ್ಯವನ್ನು ರೂಪಿಸುವ ಅಧಿಕಾರವನ್ನು ಕೊಡಲಾಗಿದೆ.

### ಅಧೈರ್ಯದ ಮನೋವೃತ್ತಿ

ನಾವು ಮುಂಬಯಿ ಮತ್ತು ಅಹಮದಾಬಾದ್‌ಗಳಲ್ಲಿ ಕಂಡ ದುರಂತಕ್ಕೂ ಪ್ರಧಾನಿ ಮತ್ತು ಸಹೋದ್ಯೋಗಿಗಳ ಅನಿರ್ಧಾರ ಮತ್ತು ಸರಿಯಾದುದನ್ನು ಮಾಡಲು ಧೈರ್ಯವಿಲ್ಲದ ಮನೋವೃತ್ತಿಗಳೇ ಕಾರಣ. ಕರ್ನಾಟಕದ ಇತರ ಗಡಿಪ್ರದೇಶಗಳಾದ ಸೇಲಮ್‌ನ ಹೊಸೂರು, ಕೊಯಮತ್ತೂರಿನ ತಳಕವಾಡಿ ಫಿರ್ಕಾ, ಅನಂತಪುರ ಜಿಲ್ಲೆಯ ಮಡಕ ಶಿರಾ ತಾಲೂಕು, ಶೋಲಾಪುರ ಜಿಲ್ಲೆಯ ಕೆಲವು ಭಾಗಗಳು ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ನೀಲಗಿರಿಯ ಜನರು ಬಹುಮತದಿಂದ ಭಾಷೆಯ ಅನುಕೂಲಕ್ಕಾಗಿಯೋ ಆಡಳಿತೆಯ ಅನುಕೂಲಕ್ಕಾಗಿಯೋ ಕರ್ನಾಟಕವನ್ನು ಸೇರಲು ಅಪೇಕ್ಷಿಸಿದ್ದರು. ಅದು ಅತ್ಯಂತ ನ್ಯಾಯವಾದ ಅಪೇಕ್ಷೆ. ಈ ಎಲ್ಲಾ ಅಪೇಕ್ಷೆಗಳು ಕಡೆಗಣಿಸಲ್ಪಟ್ಟು, ರಾಜ್ಯ ಪುನಾರಚನಾ ಶಾಸನದಲ್ಲಿ ಗಡಿವಿವಾದಗಳ ಬಗ್ಗೆ ಪ್ರಾದೇಶಿಕ ಸಮಿತಿಗಳಿಗೆ ಕೆಲವು ಅಸ್ಪಷ್ಟವಾದ ಶಿಫಾರಸಿನಂತಹ ಅಧಿಕಾರಗಳನ್ನು ಕೊಟ್ಟಿರುವುದು ಅತೀ ದುರ್ದೈವದ ಸಂಗತಿ. ಈ ಪ್ರದೇಶಗಳ ಜನರ ಆಶೆ–ಆಕಾಂಕ್ಷೆಗಳೂ, ಅವರ ಸಂಕಷ್ಟಗಳೂ ಕಡೆಗಣಿಸಲ್ಪಡದಿರಲಿ ಎಂದು ನಾನು ಆಶಿಸುತ್ತೇನೆ. ಅವು ಅಷ್ಟು ಸತ್ಯವಾಗಿದೆ. ಈ ಪ್ರದೇಶಗಳ ಜನರ ಭಾಷೆ ಮತ್ತು ಸಂಸ್ಕೃತಿಗಳು ಹಾನಿ

ಹೊಂದಿ, ಈ ವಿಷಯ ಎಷ್ಟು ದೀರ್ಘಕಾಲ ವಿಳಂಬವಾಗುವುದೋ ಅಷ್ಟೇ ಶಾಶ್ವತವಾಗಿ ಈ ಅನ್ಯಾಯದ ದುಷ್ಪರಿಣಾಮ ತಟ್ಟುವುದು. ಆದ್ದರಿಂದ ಹೊಸ ಪ್ರಾದೇಶಿಕ ಸಮಿತಿಗಳೂ ಕೇಂದ್ರ ಸರ್ಕಾರವೂ ಕೂಡಲೇ ಒಂದು ಸ್ವತಂತ್ರ ನ್ಯಾಯಮಂಡಲವನ್ನು ರಚಿಸಿ, ಈ ಪ್ರದೇಶಗಳ ಜನರ ಅಪೇಕ್ಷೆಯನ್ನು ಪರಾಂಬರಿಸಿ ನ್ಯಾಯವನ್ನು ರಕ್ಷಿಸಲಿ ಎಂದು ನಾನು ಆಶಿಸುತ್ತೇನೆ; ಅದರ ತೀರ್ಮಾನ ಏನಿದ್ದರೂ, ಜನರು ಅದನ್ನು ಪರಿಗ್ರಹಿಸುವರು.

ತನ್ಮಧ್ಯೆ ೧೯೫೬ ರ ನವೆಂಬರ್ ೧ ರಂದು ಉದ್ಘಾಟಿಸಲ್ಪಡುವ ಉಳಿದ ಕರ್ನಾಟಕಕ್ಕೆ ಉಜ್ವಲವಾದ ಭವಿತವ್ಯವಿದೆ. ಅದಕ್ಕಾಗಿಯೇ ನಾವೆಲ್ಲರೂ ದುಡಿದಿದ್ದೆವು. ಮಲೆನಾಡು ಪ್ರದೇಶದಲ್ಲಿ ಅರಣ್ಯ ಸಂಪತ್ತು ಮತ್ತು ಜಲಾಶ್ರಯವಿರುವ ಭೂಸಂಪತ್ತು ಸಮೃದ್ಧವಾಗಿದ್ದು ಕೃಷಿ ಮತ್ತು ವಿದ್ಯುಚ್ಛಕ್ತಿಯ ಅಭಿವೃದ್ಧಿಗೆ ಅನುಕೂಲ ರಾಜ್ಯದಲ್ಲಿ ತುಂಬ ಖನಿಜ ಸಂಪತ್ತೂ ಇದೆ. ಔದ್ಯಮಿಕ ಬೆಳವಣಿಗೆಗೆ ತುಂಬ ಅವಕಾಶವಿದೆ. ಕನಿಷ್ಠ ಪಕ್ಷ ಐದು ವರ್ಷಗಳ ತನಕ ಅನೇಕ ಸಂಕಷ್ಟಗಳನ್ನು, ಮುಖ್ಯವಾಗಿ ಆಡಳಿತೆಯ ತೊಡಕುಗಳನ್ನು ಬಗೆಹರಿಸಬೇಕಾಗಿದೆ. ಐದು ಪ್ರತ್ಯೇಕ ಪ್ರದೇಶಗಳ ಸರ್ಕಾರೀ ನೌಕರರನ್ನು ಒಂದುಗೂಡಿಸಬೇಕು. ಮೈಸೂರಿನಲ್ಲಿ ಅವರಿಗೆ ಬಹಳ ಕಡಿಮೆ ಸಂಬಳ ಸಿಗುತ್ತದೆ. ಅದನ್ನು ಹೆಚ್ಚಿಸಿ ಸಮಾನವನ್ನಾಗಿ ಮಾಡಲು ಹಣ ಸಂಗ್ರಹವಾಗಬೇಕು. ಕಡಿಮೆ ಸಂಬಳದಿಂದಾಗಿ ನೌಕರರಲ್ಲಿ ಲಂಚಗುಳಿತನವೂ ಮಿತಿಮೀರಿ ಬೆಳೆದಿದೆ. ಇದು ಇಲ್ಲಿ ಮಾತ್ರವಲ್ಲ, ಸರ್ವತ್ರವೂ ಹೆಚ್ಚಿನ ಕೆಳತರಗತಿಯ ಸರ್ಕಾರೀ ನೌಕರರಿಗೆ ತಮಗೆ ಸಿಗುವ ಸಂಬಳದಿಂದ ಜೀವನ ನಿರ್ವಹಣವು ಕಷ್ಟವಾಗಿದೆ. ಇವು ಮತ್ತು ಇತರ ಸಮಸ್ಯೆಗಳನ್ನು ಎದುರಿಸಿ ಪರಿಹರಿಸಬೇಕು.

ಈಗ ಅಧಿಕಾರಾರೂಢವಾಗಿರುವ ಮತ್ತು ಮುಂದಿನ ಚುನಾವಣೆಯ ಬಳಿಕವೂ ಅಧಿಕಾರಕ್ಕೆ ಬರಬಹುದಾದ ಕಾಂಗ್ರೆಸ್‌ನ ಮುಂದಿರುವ ಕಾರ್ಯಭಾರ ಬಹಳ ಹೆಚ್ಚಿನದು. ಅವರು ಈಗಾಗಲೇ ಮಾಡುತ್ತಿರುವಂತೆ ಒಳ ಪಂಗಡವಾಗಿ ಕೆಲಸ ಮಾಡತೊಡಗಿದರೆ ಭವಿತವ್ಯವು ಶೂನ್ಯವಾಗಬಹುದು. ನೂತನ ರಾಜ್ಯದಿಂದ ಯಾವ ಪ್ರಯೋಜನ ಸಿಗಬೇಕೆಂದು ಜನರು ಆಶಿಸಿ ದುಡಿದಿದ್ದರೋ ಅದೆಲ್ಲ ನಾಶವಾದೀತು. ವಿರೋಧ ಪಕ್ಷದ ಕೆಲಸವೂ ನಿರ್ಲಕ್ಷ್ಯವಾದುದಲ್ಲ. ಆಳುವ ಪಕ್ಷವನ್ನು ಟೀಕಿಸಿ ಹತೋಟಿಯಲ್ಲಿಟ್ಟುಕೊಳ್ಳುವಂತೆ ಬಲವಾದ ವಿರೋಧ ಪಕ್ಷವನ್ನು ಅದು ಕಟ್ಟಬೇಕು. ಅವಶ್ಯವಿದ್ದಲ್ಲಿ ಸರಕಾರದೊಡನೆ ಸಹಕರಿಸಬೇಕು. ಸಾರ್ವಜನಿಕ ಜೀವನದ ಮಟ್ಟವನ್ನು ಈಗಿರುವ ವೈಯಕ್ತಿಕ ರಾಜಕೀಯದ ಕೊಂಪೆಯಿಂದ ಮೇಲೆತ್ತಬೇಕಾಗಿದೆ. ಎಲ್ಲವೂ ಚೆನ್ನಾಗಿ ನಡೆದೀತೆಂದು ನಾವು ಆಶಿಸೋಣ. ಹೊಸ ಕರ್ನಾಟಕ ರಾಜ್ಯವು ಅದರಲ್ಲಿ ಅಡಕವಾಗಿರುವ ಲಕ್ಷಾಂತರ ಪ್ರಜೆಗಳಿಗೆ ಶಾಂತಿ, ಸಂತೃಪ್ತಿ ಮತ್ತು ಸಮೃದ್ಧಿಯನ್ನುಂಟು ಮಾಡಲಿ.

■

# ೮. ರಾಜಕೀಯ ಹೋರಾಟ

ಕರ್ನಾಟಕದ ಏಕೀಕರಣದ ಹಿಂದೆ ನಡೆದ ಚಳವಳಿ, ಹೋರಾಟ, ರಾಜಕೀಯ ಏರುಪೇರುಗಳು, ಮುತ್ಸದ್ದಿತನದ ಕೊರತೆ – ಈ ಎಲ್ಲದರ ನಡುವೆಯೂ ಕರ್ನಾಟಕವೆಂಬುದು ಒಂದು ನಾಡಾಗಿ ಹೇಗೆ ಒಡಮೂಡಿತೆಂಬ ಸ್ಥೂಲ ವಿಚಾರವು ಕೆ. ಆರ್. ಕಾರಂತರ ಈ ಬರೆವಣಿಗೆಯಿಂದ ನಮಗೆ ಕಂಡುಬರುತ್ತದೆ. ತಾನು ಕೇವಲ ರಾಜಕಾರಣಿಯಲ್ಲ, ಒಂದು ತಲೆಮಾರಿನ ಭವಿಷ್ಯವನ್ನು ಮುಂಗಾಣಬಲ್ಲ ಮುತ್ಸದ್ದಿಯೂ ಹೌದೆಂಬುದನ್ನು ಕಾರಂತರು ಈ ಲೇಖನದ ಮೂಲಕ ಮನಗಾಣಿಸಿ ಕೊಟ್ಟಿದ್ದಾರೆ.

ಕರ್ನಾಟಕದ ಏಕೀಕರಣದ ವೇಳೆಗೆ ಕೆ. ಆರ್. ಕಾರಂತರು ಕಾಂಗ್ರೆಸ್‌ನ್ನು ತೊರೆದಿದ್ದರು. ಅದಕ್ಕೆ ಕಾರಣಗಳನ್ನು ಈ ಹಿಂದೆಯೇ ನೋಡಿದ್ದೇವೆ. ಈ ಅಧ್ಯಾಯದಲ್ಲಿ ಕೆ. ಆರ್. ಕಾರಂತರ ರಾಜಕೀಯ ಜೀವನದ ಪ್ರಮುಖ ಅಂಶಗಳನ್ನು ನೋಡೋಣ.

೧೯೨೫ರಲ್ಲಿ ಕಾರಂತರು ಮಂಗಳೂರು ನಗರಸಭೆಯ ಸದಸ್ಯರಾಗಿ ಆಯ್ಕೆಯಾದರು. ಅವರ ಸಕ್ರಿಯ ರಾಜಕೀಯ ಪ್ರವೇಶದಿಂದ ಅದುವರೆಗಿನ ಸಾಮಾಜಿಕ ಹೋರಾಟಗಳಿಗೆ ಒಂದು ಅಧಿಕೃತ ಸ್ವರೂಪ ಸಿಕ್ಕಂತಾಯಿತು. ಆ ಅವಧಿಯಲ್ಲಿ ಮಂಗಳೂರಿನ ಕೆಲವು ರಸ್ತೆಗಳಿಗೆ ಅವರು ಪುನರ್ ನಾಮಕರಣ ಮಾಡಿಸಿದರು. ಹಾಗೆ ಹೊಸ ಹೆಸರು ಪಡೆದ ರಸ್ತೆಗಳು ಮಹಾತ್ಮಾಗಾಂಧಿ ರಸ್ತೆ, ನೆಹರೂ ಅವೆನ್ಯೂ ರಸ್ತೆ, ಆರ್ಯಸಮಾಜ ರಸ್ತೆ ಮೊದಲಾದವು. ಪೆಂಟ್ಲೆಂಡ್ ಪೇಟೆ ಎಂಬುದು ಗಾಂಧಿ ನಗರ ಆಯಿತು.

೧೯೨೬ ರಲ್ಲಿ ಅವರು ಕಾಂಗ್ರೆಸ್ ಪಕ್ಷದ ವತಿಯಿಂದ ಮದರಾಸಿನ ವಿಧಾನಪರಿಷತ್ತಿಗೆ ಚುನಾವಣೆಗೆ ನಿಂತರು. ಕಮಲಾದೇವಿ ಚಟ್ಟೋಪಾಧ್ಯಾಯ ಕಾರಂತರ ಎದುರಾಳಿ. ಆದರೆ ಕಾರಂತರು ಗೆದ್ದರು. ೧೯೩೦ ರಲ್ಲಿ ಬ್ರಿಟಿಷರ ವಿರುದ್ಧದ ಚಳವಳಿಯ ಕಾರಣವಾಗಿ, ಪಕ್ಷದ ಆಣತಿ ಮೇರೆಗೆ ತನ್ನ ಸದಸ್ಯತ್ವಕ್ಕೆ ರಾಜಿನಾಮೆ ನೀಡಿದರು.

೧೯೩೧ ರಲ್ಲಿ ಜರುಗಿದ ಅಖಿಲ ಕರ್ನಾಟಕ ಪ್ರಾಂತ್ಯ ಪರಿಷತ್ತಿನ ಸಮಿತಿಗೆ ಕಾರಂತರು ಕಾರ್ಯದರ್ಶಿಯಾಗಿದ್ದರು. ಸರೋಜಿನಿ ನಾಯ್ಡು ಆ ಪರಿಷತ್ತಿನಲ್ಲಿ ಭಾಗವಹಿಸಿ ಭಾಷಣವಿತ್ತಿದ್ದರು.

೧೯೩೭ರಲ್ಲಿ ನಡೆದ ಮಹಾಚುನಾವಣೆಯಲ್ಲಿ ಕಾರಂತರು ಪುತ್ತೂರು-ಕಾಸರಗೋಡು ಕ್ಷೇತ್ರದಲ್ಲಿ ಮದರಾಸು ಶಾಸನ ಸಭೆಗೆ ಸದಸ್ಯರಾಗಿ ಆಯ್ಕೆಯಾದರು. ಆಗ ಮುಖ್ಯಮಂತ್ರಿಯಾಗಿ ಆರಿಸಲ್ಪಟ್ಟ ಸಿ. ರಾಜಗೋಪಾಲಾಚಾರಿಯವರು ಕಾರಂತರನ್ನು ಪಾರ್ಲಿಮೆಂಟರಿ ಸೆಕ್ರೆಟರಿಯನ್ನಾಗಿ ನೇಮಿಸಿದರು. ಆದರೆ ಅವರು ಮಾಡಬೇಕಾದ ಕೆಲಸ ಏನೆಂಬುದು ಆಗ ಸ್ಪಷ್ಟವಾಗಿರಲಿಲ್ಲ. ಮಾಡಲು ಕೆಲಸ ಇರಲಿಲ್ಲ. ಆದರೆ ಸಂಬಳ ಬರುತ್ತಿತ್ತು. ಇದರಿಂದ ಬೇಸತ್ತ ಕಾರಂತರು ಇಂಗ್ಲೆಂಡ್‌ನ ಲೇಬರ್ ಪಾರ್ಟಿಯ ಕಾರ್ಯದರ್ಶಿ ಮೇಜರ್ ಅಟ್ಲಿಯವರಿಗೆ ಪಾರ್ಲಿಮೆಂಟರಿ ಕಾರ್ಯದರ್ಶಿಯ ಹುದ್ದೆಯ ಕಾರ್ಯಭಾರವೇನೆಂಬುದನ್ನು ಬರೆದು ಕೇಳಿದರು. ಅವರು ಎಲ್ಲವನ್ನು ವಿವರಿಸಿದರು. ಆದರೆ ರಾಜಗೋಪಾಲಾಚಾರಿ ಇವಕ್ಕೆ ಕಿವಿಗೊಡಲಿಲ್ಲ. ಹಾಗಾಗಿ ಕಾರಂತರು ಈ ಪದವಿಗೆ ರಾಜಿನಾಮೆ ಇತ್ತರು.

೧೯೪೦ ರಲ್ಲಿ ಕಾಂಗ್ರೆಸ್ ಪಕ್ಷದ ಆದೇಶದಂತೆ ಶಾಸನ ಸಭೆಯ ಸದಸ್ಯತ್ವಕ್ಕೆ ರಾಜಿನಾಮೆ ನೀಡಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಶಿಕ್ಷೆಯಾಗಿ ತಿರುಚಿರಪಳ್ಳಿಯಲ್ಲಿ ಸೆರೆಮನೆಯಲ್ಲಿದ್ದರು. ರಾಜಾಜಿ, ಸಂಜೀವರೆಡ್ಡಿ ಮುಂತಾದವರೂ ಅವರೊಡನೆ ಸೆರೆಯಾಳುಗಳಾಗಿದ್ದರು. ಗಾಂಧಿಯವರ ವೈಯಕ್ತಿಕ ಸತ್ಯಾಗ್ರಹವಿದು. ಒಮ್ಮೆ ಜೈಲಿನಿಂದ ಹೊರಬಂದೊಡನೆ ಪುನಃ ಸತ್ಯಾಗ್ರಹ ಮಾಡಬೇಕು. ಆದರೆ ಆಗ ಒಂಬತ್ತು ತಿಂಗಳ ನಂತರ ಜೈಲಿನಿಂದ ಹೊರಬಂದ ಕಾರಂತರಿಗೆ ಆರೋಗ್ಯ ಕೆಟ್ಟಿತ್ತು. ಆದ್ದರಿಂದ ಗಾಂಧಿಯವರಿಗೇ ಇದರ ಕುರಿತು ಪತ್ರ ಬರೆದರು. ಗಾಂಧೀಜಿ ೩-೯-೧೯೪೧ರಂದು ಕಾರಂತರಿಗೆ ಹೀಗೆ ಉತ್ತರಿಸಿದರು:

ವಾರ್ಧಾ (ಸಿ.ಪಿ)<br>ತಾ.೩.೯.೧೯೪೧

ಪ್ರಿಯ ಕಾರಂತ,

ನಿಮ್ಮ ಆರೋಗ್ಯ ಬಹಳ ಕೆಟ್ಟಿದೆಯೆಂದೂ, ನಿಮಗೆ ಹಣದ ತಾಪತ್ರಯವಿದೆ ಯೆಂದು ತಿಳಿದು ನಾನು ವಿಷಾದಿಸುತ್ತೇನೆ. ಈ ತೊಂದರೆಗಳು ಇರುವ ತನಕ ನೀವು ಪುನಃ ಕಾಯ್ದೆ ಭಂಗ ಮಾಡಬೇಡಿ ಮತ್ತು ನಿಮ್ಮ ತೊಂದರೆಗಳನ್ನು ಬೇಗನೇ ನಿವಾರಿಸಿಕೊಳ್ಳುವಿರೆಂದು ಆಶಿಸುತ್ತೇನೆ.

ನಿಮ್ಮ ವಿಶ್ವಾಸಿ,<br>ಎಂ.ಕೆ. ಗಾಂಧಿ.

೧೯೪೨ ನೇ ಇಸವಿ ಆಗಸ್ಟ್ ೯ ರಂದು ಮುಂಬಯಿಯಲ್ಲಿ ಕ್ವಿಟ್ ಇಂಡಿಯಾ ನಿರ್ಣಯವನ್ನು ಅಂಗೀಕರಿಸಿದ್ದೇ ತಡ, ಕಾರಂತರು ಬಂಧನಕ್ಕೊಳಗಾದರು. ಹಿಂದೆ ಮಂಗಳೂರಿನಲ್ಲಿ ಜಿಲ್ಲಾ ಕಲೆಕ್ಟರ್ ಆಗಿದ್ದ ಮಿಸ್ಟರ್ ಗಾನ್ ಎಂಬಾತ ಆಗ ಮದರಾಸಿನಲ್ಲಿ ಸರಕಾರದ ಕಾರ್ಯದರ್ಶಿಯಾಗಿದ್ದ. ಗುಪ್ತ ಹಾಗೂ ಕ್ಷಿಪ್ರ ರೀತಿಯಲ್ಲಿ ಕಾರಂತರ ಬಂಧನವಾದುದಕ್ಕೆ ಅವರೇ ಕಾರಣ ಎಂದು ತಿಳಿದು ಬಂತು. ಒಂದು ಮುಂಜಾನೆ ಕಾರಂತರ ಮನೆಗೆ ಪೊಲೀಸರು ಬಂದು ಅವರನ್ನು ವಾಹನದಲ್ಲಿ ಕುಳ್ಳಿರಿಸಿಕೊಂಡು ಹೋಗಿ ಬೆಳಗಾಗುವ ಮೊದಲೇ ಹೊರಡುತ್ತಿದ್ದ ರೈಲುಗಾಡಿಯಲ್ಲಿ ಅವರನ್ನು ವೆಲ್ಲೂರು ಜೈಲಿಗೆ ಕಳಿಸಿದರು. ಆ ಬಾರಿ ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಮೊದಲ ಬಂಧನ. ಜೈಲಿನಲ್ಲಿ ಒಟ್ಟು ೩೨ ಮಂದಿ ರಾಜಕೀಯ ಬಂದಿಗಳಿದ್ದರು. ಸೆಪ್ಟೆಂಬರ್ ನಲ್ಲಿ ಅವರೆಲ್ಲರನ್ನು ಅಮರಾವತಿ ಜೈಲಿಗೆ ಸಾಗಿಸಲಾಯಿತು. ಮುಂದೆ ರಾಷ್ಟ್ರಾಧ್ಯಕ್ಷರಾದ ವಿ.ವಿ. ಗಿರಿ ಮತ್ತು ಸಂಜೀವರೆಡ್ಡಿ, ಟಿ. ಪ್ರಕಾಶಂ, ಅನಂತಶಯನಂ ಅಯ್ಯಂಗಾರ್, ಕಾಮರಾಜ ನಾಡಾರ್ ಮತ್ತು ಎಸ್. ಸತ್ಯಮೂರ್ತಿಯವರು ಅಲ್ಲಿ ಕಾರಂತರ ಒಡನಾಡಿಗಳಾದರು. ಇವರ ಪೈಕಿ ಸತ್ಯಮೂರ್ತಿ ಅಲ್ಲಿರುವಾಗಲೇ ಪ್ರಾಣಬಿಟ್ಟರು. ಕಾಮರಾಜರೇ ಮೊದಲಾದ ಬಂದಿಗಳಿಗೆ ಕಾರಂತರು ಇಂಗ್ಲೀಷ್ ಕಲಿಸುತ್ತಿದ್ದರಂತೆ; ಪುರಾಣಾದಿ ಗ್ರಂಥಗಳನ್ನು ಓದಿ ಹೇಳುತ್ತಿದ್ದರಂತೆ. ಕಾರಂತರ ಮೆಚ್ಚುಗೆಗೆ ಪಾತ್ರರಾಗಿದ್ದ ಟಿ. ಪ್ರಕಾಶಂ ತನ್ನ ಯುವಕ ಸಂಗಡಿಗ ಕೊಂಡಾಪಿಯವರ ಮೂಲಕ ಆತ್ಮಕಥೆಯನ್ನು ಬರೆಸುತ್ತಿದ್ದರಂತೆ.

ಪ್ರಕಾಶಂ ಅವರಿಗೆ ಆಗ ೬೯ ವರ್ಷ ಪ್ರಾಯ. ಆರೋಗ್ಯ ಸರಿಯಾಗಿರಲಿಲ್ಲ; ವಿಶ್ರಾಂತಿಯನ್ನು ಪಡೆಯುತ್ತಿರಲಿಲ್ಲ. ಅವರು ಔಷಧಿ ಸೇವಿಸದೆ, ಅದರ ಬದಲು ತನಗೆ ತಾನೇ ಸೂಜಿ ಚಿಕಿತ್ಸೆ ಮಾಡಿಕೊಳ್ಳುತ್ತಿದ್ದರಂತೆ. ಇತರರಿಗೂ ಆ ಚಿಕಿತ್ಸೆ ಮಾಡುತ್ತಿದ್ದರಂತೆ. ಜೇಲಿನಲ್ಲಿ ಗಾಂಧಿಯವರ ಹೋರಾಟವನ್ನು ಮೆಚ್ಚಿ ವಿಶ್ವಾಸವಿಟ್ಟುಕೊಂಡಿದ್ದ ಬರೇ ಕೆಲವರಲ್ಲಿ ಅವರೊಬ್ಬರಂತೆ. ೧೯೩೭ ರಲ್ಲಿ ಮದ್ರಾಸಿನ ಮಂತ್ರಿಮಂಡಲದಲ್ಲಿ ಅವರು ಕಂದಾಯ ಮಂತ್ರಿಯಾಗಿದ್ದರು. ಮುಂದೆ ಅವರೇ ಮದ್ರಾಸಿನ ಮುಖ್ಯಮಂತ್ರಿಯಾದಾಗ ಕಾರಂತರು ಅವರ ಕೆಳಗೆ ಕಂದಾಯ ಮಂತ್ರಿಗಳಾದರು.

ಕಾರಂತರು ದುಃಖದಿಂದ ಸ್ಮರಿಸುತ್ತಿದ್ದ ಒಂದು ಮಾರ್ಮಿಕ ಘಟನೆಯೆಂದರೆ ಅವರು ತುಂಬ ಪ್ರೀತಿಸುತ್ತಿದ್ದ ತಾಯಿಯ ಮರಣದ ಕಾರಂತರು ಎರಡನೇ ಬಾರಿ ಜೈಲಿನಲ್ಲಿದ್ದಾಗ ಅವರ ತಾಯಿ ಕಾಯಿಲೆಬಿದ್ದರು. ಅಮರಾವತಿ ಜೈಲಿನಿಂದ ಕಾರಂತರನ್ನು ದಿನಾಂಕ ೩೦-೧೨-೧೯೪೪ ರಂದು ಬಿಡುಗಡೆ ಮಾಡಿದರು. ಜೈಲಿಸ ಹೊರಗೆ ಬರುವಾಗ ಜೈಲಿನ ಗಡಿಯಾರ ಮಧ್ಯಾಹ್ನ ಒಂದು ಗಂಟೆ

ಹೊಡೆಯಿತಂತೆ. ಕಾರಂತರಿಗೆ ಆಗ ಅಕಾರಣವಾಗಿ ಕಳವಳ ಆಗತೊಡಗಿತಂತೆ. ಏನೋ ಆಗಬಾರದ್ದು ಆಗಿದೆ ಎಂಬ ದುರಂತದ ಮುನ್ಸೂಚನೆ ಹೃದಯಕ್ಕೆ ಆಯಿತಂತೆ. ಕಾರಂತರು ಮಂಗಳೂರಿಗೆ ತಲುಪುವಾಗ ಅವರ ತಾಯಿ ಸತ್ತಿದ್ದರು. ಅವರ ತಾಯಿ ಪ್ರಾಣ ಬಿಟ್ಟ ಸಮಯವೂ ಕಾರಂತರು ಜೈಲಿನಿಂದ ಹೊರಟ ಸಮಯವೂ ಒಂದೇ ಆಗಿತ್ತಂತೆ.

ಜೈಲುವಾಸದಿಂದಾಗಿ ಕಾರಂತರಿಗೆ ಕಾಲಿನ ವಾತದ ಕಾಯಿಲೆಯು ಖಾಯಂ ಆಗಿ ಅಂಟಿಕೊಂಡಿತು. ಜೈಲಿನಿಂದ ಬಿಡುಗಡೆಯಾಗಿ ಬಹಳ ಕಾಲದ ನಂತರವೂ ಕಾಲಿಗೆ ಪಾದರಕ್ಷೆ ಹಾಕದೆ ನೆಲದ ಮೇಲೆ ನಡೆಯಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ.

೧೯೪೬ ರಲ್ಲಿ ಪುನಃ ಚುನಾವಣೆಗಳು ಸಮೀಪಿಸಿದವು. ಜಿಲ್ಲಾ ಕಾಂಗ್ರೆಸ್ಸಿನ ಹಿಡಿತವನ್ನಿಟ್ಟುಕೊಂಡಿದ್ದ ಕೆಲವು ಮುಖಂಡರು ಕಾರಂತರಿಗೆ ಟಿಕೆಟು ಸಿಗದಂತೆ ಗುಪ್ತವಾಗಿ ಸಂಚು ಹೂಡಿದರು. ಇದರ ವಿರುದ್ಧ ಅನೇಕ ನಾಯಕರು ಸಿಡಿದೆದ್ದರು. ಮಂಗಳೂರಿನ ವಿದ್ಯಾರ್ಥಿ ಕಾಂಗ್ರೆಸ್ ಇದರ ವಿರುದ್ಧ ತುಸು ಉಗ್ರವಾಗಿಯೇ ಪ್ರತಿಭಟಿಸಿತು. ಕೊನೆಗೆ ಕಾರಂತರಿಗೇ ಟಿಕೆಟು ಸಿಕ್ಕಿತು. ಅವರು ತಮ್ಮ ಹಿಂದಿನ ಪುತ್ತೂರು ಕ್ಷೇತ್ರದಿಂದಲೇ ಸ್ಪರ್ಧಿಸಿ ಜಯ ಗಳಿಸಿದರು. ಮುಂದೆ ಮದ್ರಾಸಿನಲ್ಲಿ ಮಂತ್ರಿಮಂಡಲ ರಚನೆಯ ಬಗ್ಗೆ ಕೋಲಾಹಲವೇ ನಡೆಯಿತು. ಕಾರಂತರು ಆಗ ರಾಜಗೋಪಾಲಾಚಾರಿಯವರ ನೇಮಕವನ್ನು ಖಂಡತುಂಡವಾಗಿ ವಿರೋಧಿಸಿದರು. ರಾಜಗೋಪಾಲಾಚಾರಿಯವರು ೧೯೪೨ ರ ಕ್ವಿಟ್ ಇಂಡಿಯಾ ಚಳವಳವನ್ನು ವಿರೋಧಿಸಿದ್ದರು. ಅವರು ಜೇಲಿಗೆ ಹೋಗಿರಲಿಲ್ಲ. ಎರಡನೆಯದಾಗಿ ಅವರು ಪಾಕಿಸ್ತಾನವನ್ನು ನಿರ್ಮಿಸುವ ದೇಶವಿಭಜನೆಯ ಸಿದ್ಧಾಂತವನ್ನು ಪ್ರತಿಪಾದಿಸಿದ್ದರು. ಆ ಎರಡು–ಮೂರು ವರ್ಷ ರಾಜಾಜಿಯ ವಿರುದ್ಧ ತಮಿಳುನಾಡಿನಲ್ಲೇ ಮತಪ್ರದರ್ಶನ ನಡೆದಿತ್ತು. ಅವರು ಭಾಷಣ ಮಾಡುವಾಗ ಟೊಮೆಟೋ, ಮೊಟ್ಟೆ ಮೊದಲಾದವುಗಳನ್ನು ಅವರ ಮೇಲೆ ಎಸೆದು ಜನರು ಪ್ರತಿಭಟಿಸಿದ್ದರು.

ಇಂತಹ ವರ್ತನೆಯ ರಾಜಾಜಿಯವರಿಗೆ ೧೯೪೬ ರಲ್ಲಿ ಮಹಾತ್ಮಾ ಗಾಂಧಿಯವರ ಪ್ರಬಲ ಬೆಂಬಲ ದೊರಕಿತು. ರಾಜಾಜಿಯವರನ್ನು ಮದ್ರಾಸ್ ಸರಕಾರದ ನಾಯಕನನ್ನಾಗಿ ಆರಿಸಬೇಕೆಂಬ ಅವರ ಆದೇಶದ ವಿರುದ್ಧ ತಮಿಳು ನಾಯಕರು ಬಂಡೆದ್ದರು. ಆ ಸಂದರ್ಭದಲ್ಲಿ ಕಾಮರಾಜರನ್ನು 'ಒಬ್ಬ ದುಷ್ಟಗುಂಪಿನ ನಾಯಕ' ಎಂದು ಗಾಂಧೀಜಿ ತಮ್ಮ 'ಹರಿಜನ' ಪತ್ರಿಕೆಯಲ್ಲಿ ಬರೆದರು. ತೆಲುಗರ ಬೆಂಬಲವೂ ರಾಜಾಜಿಗೆ ಇರಲಿಲ್ಲ. ಆಂಧ್ರಕೇಸರಿ ಟಿ. ಪ್ರಕಾಶಂ ಮತ್ತು ಕಾರಂತರು ರಾಜಾಜಿಯನ್ನು ಪ್ರಬಲವಾಗಿ ವಿರೋಧಿಸಿದರು. ೧೯೩೭ರ ಸರಕಾರದಲ್ಲಿ ರಾಜಾಜಿ ವಹಿಸಿದ ಸರ್ವಾಧಿಕಾರಿ ಪಾತ್ರವನ್ನು ಕಾರಂತರು ಪಕ್ಷದ ಸಭೆಯಲ್ಲಿ ತನ್ನ

ಸ್ವಾನುಭವಗಳನ್ನು ವಿವರಿಸಿ ಖಂಡಿಸಿದರು. ಹೀಗಾಗಿ ೧೯೪೬ ರಲ್ಲಿ ಟಿ. ಪ್ರಕಾಶಂ ಮುಖ್ಯಮಂತ್ರಿಯಾಗಿ ಬಹುಮತದಿಂದ ಆಯ್ಕೆಯಾದರು. ಕಾರಂತರನ್ನು ಅವರು ಕಂದಾಯ ಮಂತ್ರಿಯಾಗಿ ನೇಮಿಸಿದರು.

ಆದರೆ ಈ ಮಂತ್ರಿಮಂಡಲಕ್ಕೆ ದೀರ್ಘಾಯುಸ್ಸು ಒದಗಲಿಲ್ಲ. ಕೇವಲ ಒಂಬತ್ತು ತಿಂಗಳಲ್ಲಿ ಅದು ಮುರಿದುಬಿತ್ತು. ಕಾಂಗ್ರೆಸ್ ವರಿಷ್ಠರ ಅನುಗ್ರಹ ಇರುವ ಬದಲು ಅವರ ಅವಕೃಪೆಗೆ ಬಲಿಯಾಯಿತು. ಮದ್ರಾಸು ಪ್ರಾಂತ್ಯದ ಕಾಂಗ್ರೆಸ್ ಪಕ್ಷದ ರಾಜಕೀಯವಂತೂ ಆಗ ಅಯೋಮಯವಾಗಿತ್ತು. ಒಂದೆಡೆ ತೆಲುಗು, ತಮಿಳು ಮತ್ತು ಮಲಯಾಳಿ ಗುಂಪುಗಳು. ಎರಡನೆಯದಾಗಿ ಬ್ರಾಹ್ಮಣ, ಅಬ್ರಾಹ್ಮಣ ಇತ್ಯಾದಿ ಜಾತಿ ಆಧರಿಸಿದ ಗುಂಪುಗಳು. ಆದರೂ ಪ್ರಕಾಶಂ ಮಂತ್ರಿಮಂಡಲ ಜನಸೇವೆಯಲ್ಲಿ ನಿಷ್ಠಾವಂತವಾಗಿತ್ತು. ಒಳ್ಳೆಯ ಆಡಳಿತ ನಡೆಸುತ್ತಿದೆ ಎಂಬ ಹೆಸರು ಗಳಿಸಿತ್ತು.

ಕಾರಂತರು ಅರಣ್ಯ ಸಂರಕ್ಷಣೆಗಾಗಿ ಮಲಬಾರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬೇಕಾಬಿಟ್ಟಿ ಮರಕಡಿಯುವುದರ ವಿರುದ್ಧ ಆಜ್ಞೆ ಹೊರಡಿಸಿದರು. ಯುದ್ಧ ಕಾಲದಲ್ಲಿ ಸರಕಾರ ವಶಪಡಿಸಿಕೊಂಡಿದ್ದ ಭೂಮಿಗಳಿಗೆ ಕೂಡಲೇ ತಕ್ಕ ಪರಿಹಾರ ಧನ ಕೊಡಿಸಿದರು.

ಕಾರಂತರು ಕಂದಾಯ ಮಂತ್ರಿಯಾಗಿ ಮದರಾಸಿನ ಫೋರ್ಟ್ ಸೈಂಟ್ ಜಾರ್ಜನ ಸೆಕ್ರೆಟೇರಿಯಟ್‌ಗೆ ಹೋದಾಗ ಹಿಂದೆ ಅವರಿಂದ ಮಂಗಳೂರಿನಲ್ಲಿ ಮುಖಭಂಗಕ್ಕೊಳಗಾಗಿದ್ದ ಮಿಸ್ಟರ್ ಗಾನ್ ಎಂಬಾತನೇ ಕಂದಾಯ ಕಾರ್ಯದರ್ಶಿ ಯಾಗಿ ಸ್ವಾಗತಿಸಬೇಕಾಗಿ ಬಂದುದು ದೊಡ್ಡ ವಿಡಂಬನೆಯಾಗಿತ್ತು. ಆದರೆ ಕಾರಂತರ ಕರ್ತೃತ್ವಶಕ್ತಿ ಎಲ್ಲರನ್ನೂ ದಂಗುಗೊಳಿಸಿತು.

೧೯೩೭ ರಲ್ಲಿ ಟಿ. ಪ್ರಕಾಶಂ ಕಂದಾಯ ಮಂತ್ರಿಯಾಗಿದ್ದಾಗ ಮದ್ರಾಸ್ ಪ್ರಾಂತ್ಯದಲ್ಲಿ ಪ್ರಚಲಿತವಾಗಿದ್ದ ಜಮೀನ್ದಾರಿ ಪದ್ಧತಿಯನ್ನು ನಿರ್ಮೂಲನಗೊಳಿಸುವ ಕ್ರಮ ಕೈಗೊಂಡಿದ್ದರು. ಇದು ದೇಶದಲ್ಲೇ ಪ್ರಪ್ರಥಮ ಭೂಸುಧಾರಣಾಕ್ರಮವಾಗಿತ್ತು. ಮತ್ತು ಉಳಿದ ರಾಜ್ಯಗಳಿಗೂ ಮಾರ್ಗದರ್ಶಿಯಾಗಿತ್ತು. ಆಗ ಪ್ರಕಾಶಂ ಅವರ ಆಂಧ್ರದಲ್ಲೇ ದೊಡ್ಡ ದೊಡ್ಡ ಜಮೀನ್ದಾರಿ ವ್ಯವಸ್ಥೆಗಳಿದ್ದವು. ಮದ್ರಾಸಿನ ೧೯೦೮ ರ "ಮದ್ರಾಸ್ ಎಸ್ಟೇಟ್ಸ್ ಲ್ಯಾಂಡ್ ಆ್ಯಕ್ಟ್"ನ ಬಗೆಗೆ ಮತ್ತು ಆ ವಿಚಾರವಾಗಿ ಹೋರಾಡಿದ ಅಡ್ವೋಕೇಟ್ ಆಗಿಯೂ ಅವರಿಗೆ ಅದರ ಎಲ್ಲ ವಿಚಾರಗಳೂ ಗೊತ್ತಿದ್ದವು. ಲಕ್ಷಾಂತರ ಹಿಡುವಳಿದಾರರ ಬವಣೆ ಅವರಿಗೆ ಸ್ವತಃ ಗೊತ್ತಿತ್ತು. ಇವುಗಳ ಸುಧಾರಣೆಗಾಗಿ ಅವರು ಚಳವಳಗಳನ್ನೂ ನಡೆಸಿದ್ದರು. ಆದ್ದರಿಂದ

ಕಂದಾಯ ಸಚಿವರಾಗಿದ್ದು ಪ್ರಕಾಶಂ ಜಮೀನ್ದಾರಿ ನಿರ್ಮೂಲನವಾಗಬೇಕೆಂಬ ಠರಾವನ್ನು ಮಂಡಿಸಿ ಮಂಜೂರಾತಿ ಪಡೆದರು. ಅಲ್ಲದೆ ಅವರೇ ಅಧ್ಯಕ್ಷರಾಗಿದ್ದ ಜಮೀನ್ದಾರಿ ವಿಚಾರಣಾ ಸಮಿತಿಯನ್ನು ನೇಮಿಸಿದರು. ಆ ಸಮಿತಿಯು ಹಗಲಿರುಳು ಕೆಲಸಮಾಡಿ ಸುಮಾರು ೩೦೦-೪೦೦ ಪುಟಗಳನ್ನೊಳಗೊಂಡ ಹನ್ನೆರಡು ವರದಿಗಳನ್ನು ತಯಾರಿಸಿತು. ಅವುಗಳಲ್ಲಿ ಜಮೀನ್ದಾರಿ ಪದ್ಧತಿಯ ಇತಿಹಾಸ, ಅದರ ಒಂದು ಶತಮಾನದ ಕಾರ್ಯಾಚರಣೆಗಳನ್ನೆಲ್ಲ ವಿಷದವಾಗಿ ನಿರೂಪಿಸಲಾಯಿತು. ಈ ಬಗ್ಗೆ ಅನೇಕರು ಸಲ್ಲಿಸಿದ ಮನವಿಗಳನ್ನೂ ರುಜುವಾತುಗಳನ್ನೂ ಗಣನೆಗೆ ತೆಗೆದುಕೊಳ್ಳಲಾಯಿತು. ಆದರೆ ೧೯೩೯ ರ ಸೆಪ್ಟೆಂಬರ್‌ನಲ್ಲಿ ಈ ಕಾಂಗ್ರೆಸ್ ಸರಕಾರ ರಾಜಿನಾಮೆ ಕೊಟ್ಟುದರಿಂದ ಆ ಕೆಲಸ ಸ್ಥಗಿತವಾಯಿತು.

೧೯೪೬ ರಲ್ಲಿ ಕಾರಂತರು ಕಂದಾಯ ಮಂತ್ರಿಯಾದುದರಿಂದ ಆ ವರದಿಗಳನ್ನು ಕಾರ್ಯಗತ ಮಾಡುವ ಭಾರ ಅವರ ಮೇಲೆ ಬಿತ್ತು. ಅವರ ಹುಟ್ಟೂರಾದ ದಕ್ಷಿಣ ಕನ್ನಡದಲ್ಲಿ ಇದ್ದುದು ರೈತವಾರಿ ಪದ್ಧತಿ ವಿನಾ ಜಮೀನ್ದಾರಿ ಪದ್ಧತಿಯಲ್ಲ. ಆಡಳಿತದಲ್ಲಿ ಕಾರಂತರಿಗೆ ಆಗಿನ ನಿಷ್ಣಾತ ಐಸಿಎಸ್ ಅಧಿಕಾರಿಗಳ ಸಹಾಯವಿತ್ತು. ಪ್ರಕಾಶಂ ಅವರ ಮಾರ್ಗದರ್ಶನ ಬೇರೆ. ಹೀಗೆ ಈ ಬೃಹತ್ ವರದಿಯನ್ನು ಕೂಲಂಕಷವಾಗಿ ಅಭ್ಯಸಿಸಿ, ಕೇವಲ ಆರು ತಿಂಗಳುಗಳೊಳಗೆ ಮಂತ್ರಿಮಂಡಲಕ್ಕೆ ಟಿಪ್ಪಣಿಯನ್ನು ಸಲ್ಲಿಸಿದರು. ಆ ಟಿಪ್ಪಣಿ ಮುದ್ರಣವೂ ಆಯಿತು. ಮಂತ್ರಿ ಮಂಡಲವು ಅದನ್ನು ಸ್ವೀಕರಿಸಿದೊಡನೆ, ಅದನ್ನು ಆಧರಿಸಿ ಕಾರಂತರು ಮಸೂದೆ ತಯಾರಿಸತೊಡಗಿದರು. ಆದರೆ ಈ ಮಂತ್ರಿಮಂಡಲಕ್ಕೆ ಒಂದು ವರ್ಷವೂ ಆಯುಸ್ಸಿರಲಿಲ್ಲ. ೧೯೪೭ ರ ಮಾರ್ಚ್ ೨೪ ರಂದು ಅದು ರಾಜಿನಾಮೆ ಕೊಡಬೇಕಾಯಿತು.

ಮದರಾಸು ಪ್ರಾಂತ್ಯವು ಆಗ ದಕ್ಷಿಣ ಭಾರತದ ಬಹುತೇಕ ಪ್ರದೇಶಗಳನ್ನು ಒಳಗೊಂಡಿತ್ತು. ತೆಲುಗರು ಮತ್ತು ತಮಿಳರು ಅದರಲ್ಲಿ ಬಹುಸಂಖ್ಯಾತರು. ಕೇರಳದ ಮಲಬಾರ್ ಜಿಲ್ಲೆ ಮತ್ತು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆ ಅದರಲ್ಲಿ ಸೇರಿದ್ದವು. ಮಲಬಾರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗ ಹೆಚ್ಚಿನ ಜಾತೀಯತೆಯ ವಿಷ ಇದ್ದಿರದಿದ್ದರೂ ತಮಿಳುನಾಡಿನಲ್ಲಿ ಬ್ರಾಹ್ಮಣ ವಿರೋಧಿ ಪಂಗಡ ಬ್ರಿಟಿಷರ ಕಾಲದಲ್ಲೇ ನೆಲೆಯೂರಿತ್ತು. ಆಂಧ್ರದ ಜನರಲ್ಲಿ ರೆಡ್ಡಿ, ಕಮ್ಮ ಮುಂತಾದ ಗುಂಪುಗಳಿದ್ದವು. ಪ್ರಕಾಶಂ ಬ್ರಾಹ್ಮಣರಾಗಿದ್ದರೂ ಜಾತೀಯತೆಯಿಂದ ದೂರವಾಗಿದ್ದರು. ಕಾರಂತರೂ ಜಾತೀಯವಾದಿಯಲ್ಲ. ಮದ್ರಾಸಿನ ತಮಿಳರ ಕಾಂಗ್ರೆಸ್‌ನಲ್ಲಿ ಕಾಮರಾಜ ಗುಂಪು ಮತ್ತು ರಾಜಾಜಿ ಗುಂಪು ಎಂಬ ಎರಡು

ಪ್ರಮುಖ ಬಣಗಳಿದ್ದವು. ಆದ್ದರಿಂದ ಪ್ರಕಾಶಂ ಈ ಎಲ್ಲ ಗುಂಪುಗಳಿಗೂ ಸೂಕ್ತ ಪ್ರಾತಿನಿಧ್ಯ ಕೊಟ್ಟು ಸರಕಾರ ರಚಿಸಿ ಜನರಿಗೆ ಬೇಕಾದ ಸುಧಾರಣೆಗಳನ್ನು ತರಬೇಕು ಎಂಬ ಉದ್ದೇಶ ಇಟ್ಟುಕೊಂಡಿದ್ದರು. ಆದರೆ ಉಳಿದವರ ಕಿರುಕುಳ ಹೆಚ್ಚಾಯಿತು. ಆಗ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಆಚಾರ್ಯ ಜೆ.ಬಿ. ಕೃಪಲಾನಿ ಮದ್ರಾಸಿನ ಈ ಜಾತೀಯ ಸಮಸ್ಯೆಯನ್ನು ಗಮನಿಸದೆ ಪ್ರಕಾಶಂ ಮಂತ್ರಿಮಂಡಲವನ್ನು ಇಕ್ಕಟ್ಟಿಗೆ ಈಡು ಮಾಡಿದರು. ಪ್ರಕಾಶಂ ಮಂತ್ರಿಮಂಡಲದ ಮೇಲೆ ಯಾವುದೇ ಗುರುತರ ಆರೋಪವಿದೆಯೆಂದು ಹೇಳಲಿಲ್ಲ. ಬದಲಾಗಿ, ಹೊಸ ನಾಯಕನ ಆಯ್ಕೆಯಾಗಬೇಕಾಗಿದೆ ಎಂದಷ್ಟೇ ಹೇಳಿದರು. ಶಿಕ್ಷಣ ಸಂಸ್ಥೆಗಳಿಗೆ ಆಗ ಕೋಮುವಾರು, ಜಾತಿವಾರು ವಿದ್ಯಾರ್ಥಿ ಪ್ರಮಾಣಗಳಿದ್ದವು. ಪ್ರಕಾಶಂ ಈ ಪದ್ಧತಿಯನ್ನು ವಿರೋಧಿಸಿದರು. ಮದರಾಸಿನ ಹಿಂದಿನ ಬ್ರಾಹ್ಮಣ ವಿರೋಧಿ ಜಸ್ಟಿಸ್ ಪಾರ್ಟಿಯವರಿಂದ ಪ್ರೇರಿತರಾದ ತಮಿಳು ಶಾಸಕರು ತಮಿಳುನಾಡೇ ಗಂಡಾಂತರದಲ್ಲಿದೆ ಎಂಬ ಕೂಗು ಎಬ್ಬಿಸಿದರು. ರಾಜಾಜಿ ಗುಂಪು ಪ್ರಕಾಶಂ ಸರಕಾರದ ಪರವಾಗಿದ್ದರೂ ಕೊನೇ ಗಳಿಗೆಯಲ್ಲಿ ಅದರಲ್ಲಿದ್ದ ಡಾ. ಸುಬ್ಬರಾಯನ್ ಮೊದಲಾದ ಕೆಲವರು ಅದರಿಂದ ಹೊರಬಂದರು. ಪ್ರಕಾಶಂ ಮಂತ್ರಿಮಂಡಲದ ಕೆಲವು ಸದಸ್ಯರೂ ವಿರೋಧಿ ಗುಂಪನ್ನು ಸೇರಿದರು. ಹೀಗಾಗಿ ಪಕ್ಷದ ಸಭೆಯಲ್ಲಿ ಪ್ರಕಾಶಂ ಮಂತ್ರಿಮಂಡಲಕ್ಕೆ ಸೋಲಾಯಿತು. ಪ್ರಕಾಶಂ ಅವರು ಕಾರಂತರಿಗೆ ಎಲ್ಲ ಮಂತ್ರಿಗಳ ರಾಜಿನಾಮೆ ಪತ್ರಗಳನ್ನು ಗವರ್ನರರಿಗೆ ಒಪ್ಪಿಸುವಂತೆ ತಿಳಿಸಿದರು. ಅದರಂತೆ ಅವುಗಳನ್ನು ಕಾರಂತರು ಒಪ್ಪಿಸಿದರು. ಗವರ್ನರ್ ಸರ್ ಆರ್ಚಿಬಾಲ್ಡ್ ನೈ ಕಾರಂತರಿಗೆ ಹೀಗೆ ಉತ್ತರಿಸಿದರು:

ಪ್ರಿಯ ಮಿಸ್ಟರ್ ಕಾರಂತ,

ನಿಮ್ಮ ರಾಜಿನಾಮೆಯನ್ನು ಸ್ವೀಕರಿಸುವ ಸಂದರ್ಭದಲ್ಲಿ, ನೀವು ಮಂತ್ರಿಯಾಗಿ ಮಾಡಿದ ಕೆಲಸವನ್ನು ಎಷ್ಟು ಮೆಚ್ಚಿದ್ದೇನೆಂದು ಹೇಳಲಾರೆ. ನೀವು ಇತರ ವಿಷಯಗಳನ್ನು ಕಡೆಗಣಿಸಿ, ಕೇವಲ ಸಾರ್ವಜನಿಕ ಆಡಳಿತದಲ್ಲೇ ನಿರತರಾಗಿದ್ದಿರಿ; ಪ್ರತಿಯೊಂದು ಸಮಸ್ಯೆಯನ್ನು ತರ್ಕಬದ್ಧ ಮತ್ತು ಸ್ಪಷ್ಟ ದೃಷ್ಟಿಯಿಂದ ಪರಿಶೀಲಿಸುತ್ತಿದ್ದಿರಿ. ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಯಾವ ವಿಷಯವೇ ಆದರೂ – ಜನಪ್ರಿಯವಿರಲಿ ಇಲ್ಲದಿರಲಿ – ನಿಮಗೆ ಪಥ್ಯವಿರಲಿ ಅಪಥ್ಯವಿರಲಿ, ಯಾವುದು ಸರಿ ಎಂದು ಹೇಳುವ ಧೈರ್ಯ ತಾಳಿದ್ದೀರಿ. ಇಂಥ ನೈತಿಕ ಧೀರತನದ ಗುಣ ಅಪರೂಪದ್ದು ಮತ್ತು ಅಂಥ ಧೀರತನ ಮುತ್ಸದ್ದಿಗಳಿಗೆ ಮಾತ್ರ ಸೇರಿದುದು ಎಂದು ನಾನು ಹೇಳದಿರಲಾರೆ.

ನೀವು ಸಾರ್ವಜನಿಕ ಜೀವನದಿಂದ ಕಾಲು ತೆಗೆಯಬಾರದೆಂದು ನಾನು

ಉತ್ಕಟವಾಗಿ ಆಶಿಸುತ್ತೇನೆ. ಇಂಥ ಕಾಲದಲ್ಲಿ ಭಾರತ ದೇಶಕ್ಕೆ ನಿಮ್ಮಂಥವರ ಅಗತ್ಯವಿದೆ; ನಿಮ್ಮ ಅತುಲ ಸಾಮರ್ಥ್ಯದ ಸದುಪಯೋಗವಾಗಬೇಕು. ಭವಿತವ್ಯ ಏನೇ ಇರಲಿ, ಅದು ಒಳ್ಳೆಯದಾಗಿರಲಿ ಎಂದು ನಾನು ಮನಸಾ ಹಾರೈಸುತ್ತೇನೆ.

ನಿಮ್ಮ ವಿಶ್ವಾಸಿ,
(ಸಹಿ) ಆರ್ಚಿಬಾಲ್ಡ್ ನೈ.

ಈ ಗವರ್ನರರು ಎರಡನೆಯ ಮಹಾಯುದ್ಧದಲ್ಲಿ ಬ್ರಿಟಿಷ್ ಸೇನೆಯ ಪ್ರಮುಖ ಸೇನಾಧಿಕಾರಿಯಾಗಿದ್ದರು. ಆತನ ಮಾತಿನಲ್ಲಿ ಏನೂ ಅತಿಶಯೋಕ್ತಿ ಇರಲಿಲ್ಲ. ಕಾರಂತರನ್ನು ಹೀಗೆ ಮೆಚ್ಚಿದ ನೈ, ಮುಂದೆ ಆ ಹುದ್ದೆಗೆ ರಾಜಿನಾಮೆ ಸಲ್ಲಿಸಿ ಇಂಗ್ಲಂಡ್‌ಗೆ ಹೋದ ಮೇಲೂ ಕಾರಂತರ ಮಕ್ಕಳಿಗೆ ಇಂಗ್ಲಂಡ್‌ನಲ್ಲಿ ಎಂಜಿನಿಯರಿಂಗ್‌ನಲ್ಲಿ ಉಚ್ಚ ಶಿಕ್ಷಣ ದೊರಕುವ ಅವಕಾಶ ಕಲ್ಪಿಸಿದರು.

ಪ್ರಕಾಶಂ ಮತ್ತು ಕಾರಂತರ ಸಂಬಂಧ ಅಲ್ಲಿಗೇ ನಿಲ್ಲಲಿಲ್ಲ. ಮುಂದೆ ಪ್ರಕಾಶಂ, ಕಾರಂತ ಮತ್ತು ಅವರ ಗೆಳೆಯರು ಆ ಮೇಲಿನ ಸರ್ಕಾರಗಳ ದುರಾಚಾರಗಳನ್ನು ಬಯಲಿಗೆಳೆಯುವುದರಲ್ಲಿ ಮಗ್ನರಾದರೂ ಕಾಂಗ್ರೆಸ್ ಪಕ್ಷದ ವರಿಷ್ಠ ಮಂಡಲಿ ಅವರ ವಿರುದ್ಧ ಮತ್ತೂ ಪಕ್ಷಪಾತದಿಂದಲೇ ವರ್ತಿಸಿತು. ಪ್ರಕಾಶಂರೊಡನೆ ಅಸಮಾಧಾನದಿಂದಿದ್ದ ಡಾ. ಪಟ್ಟಾಭಿ ಸೀತಾರಾಮಯ್ಯ ಅಖಿಲ ಭಾರತ ಕಾಂಗ್ರೆಸ್‌ನ ಅಧ್ಯಕ್ಷರಾದರು. ಮದ್ರಾಸಿನಲ್ಲಿ ಮಂತ್ರಿಯಾಗಿದ್ದುಕೊಂಡು ಅನೇಕ ಆರೋಪಗಳನ್ನು ಹೊತ್ತಿದ್ದ ಕಳಾ ವೆಂಕಟರಾವ್ ಅದರ ಕಾರ್ಯದರ್ಶಿಯಾದರು. ಅವರಿಬ್ಬರೂ ಶಂಕರರಾವ್ ದೇವ ಎಂಬ ಇನ್ನೊಬ್ಬ ಕಾರ್ಯದರ್ಶಿಯ ಮೂಲಕ ಏಕಪಕ್ಷೀಯ ಮತ್ತು ನ್ಯಾಯವಿರೋಧಿ ತನಿಖೆ ನಡೆಸಿದರು. ಪ್ರಕಾಶಂ, ಕಾರಂತರು ಮತ್ತು ಅವರ ಗೆಳೆಯರು ಸಲ್ಲಿಸಿದ ಭ್ರಷ್ಟಾಚಾರದ ಆರೋಪಗಳಿಗೆ ಇವರು ಮೂರು ಜನರು ಸುಣ್ಣ ಬಳಿದರು. ವಿಚಾರಣೆಗಾಗಿ ಉಚ್ಚ ಮಟ್ಟದಲ್ಲಿ ನೇಮಕವಾಗಿದ್ದ ಜವಹರ ಲಾಲ್-ವಲ್ಲಭ ಭಾಯಿ- ರಾಜೇಂದ್ರ ಪ್ರಸಾದ್ ಸಮಿತಿಯು ಅವರೆಂದುದಕ್ಕೆ ಅಸ್ತು ಎಂದಿತು.

ಸ್ವಾತಂತ್ರ್ಯ ಸಂಗ್ರಾಮದ ಯುಗ ಮುಗಿದೊಡನೆ, ಬ್ರಿಟಿಷರು ಈ ದೇಶವನ್ನು ಬಿಟ್ಟು ಹೋದ ಬಳಿಕ ಸ್ವಾರ್ಥಿಗಳು ಒಬ್ಬೊಬ್ಬರಾಗಿ ರಂಗಪ್ರವೇಶ ಮಾಡತೊಡಗಿದರು. ತಮ್ಮ ತ್ಯಾಗ ಹಾಗೂ ಕುಲಗೋತ್ರಗಳನ್ನು ಮುಂದಿಟ್ಟುಕೊಂಡು ಸ್ವಲಾಭ ಮಾಡಿಕೊಳ್ಳುವ ಆಡಳಿತಯುಗ ಆರಂಭವಾಯಿತು. ಹಿಂದೆ ನಾಯಕರೆಂದಿದ್ದವರು ಮಂತ್ರಿ ಪದವಿಗೆ, ರಾಜ್ಯಪಾಲ ಪದವಿಗೆ, ರಾಯಭಾರ ಪದವಿಗೆ ಕುತಂತ್ರದ ಮೂಲಕ ಹಾರಲು ನೋಡುತ್ತಿದ್ದರು. ಶುದ್ಧ ಚಾರಿತ್ರ್ಯದ ವ್ಯಕ್ತಿಗಳು

ಮೂಲೆಗುಂಪಾಗತೊಡಗಿದರು. ಆಚಾರ್ಯ ಕೃಪಲಾನಿಯವರೇ ಕಾಂಗ್ರೆಸ್ ಪಕ್ಷದಿಂದ ೧೯೫೧ ರಲ್ಲಿ ಹೊರಬೀಳಬೇಕಾಯಿತು. ವಿಪರ್ಯಾಸವೆಂದರೆ ಮುಂದೆ ಅವರು ಕಾರಂತ, ಪ್ರಕಾಶಂ ಮುಂತಾದವರ ಸಹಾಯ ಪಡೆದು ಪ್ರತ್ಯೇಕ ರಾಜಕೀಯ ಪಕ್ಷವನ್ನೇ ಕಟ್ಟಿದರು. ಮೊದಲು ಅದು ಕೃಷಿಕ ಮಜ್‌ದೂರ್ ಪಕ್ಷವಾಗಿ ಮುಂದೆ ಪ್ರಜಾ ಸೋಶಲಿಸ್ಟ್ ಪಕ್ಷವಾಯಿತು. ಸ್ವತಃ ಕಾರಂತರೇ ಒಮ್ಮೆ ಅಖಿಲ ಭಾರತ ಪ್ರಜಾಸೋಶಲಿಸ್ಟ್ ಪಕ್ಷದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಕಾರಂತರಿಗೆ ಭಾಷಾ ಅಲ್ಪ ಸಂಖ್ಯಾತತನದ ಬಿಸಿ ಮದರಾಸಿನಲ್ಲಿ ೧೯೨೬ ರಿಂದಲೇ ತಾಗಿರಬೇಕು. ಮದ್ರಾಸು ಪ್ರಾಂತ್ಯದ ಇಪ್ಪತ್ತೆಂಟು ಜಿಲ್ಲೆಗಳಲ್ಲಿ ಕನ್ನಡದ ಜಿಲ್ಲೆಯೆಂದರೆ ದಕ್ಷಿಣ ಕನ್ನಡ. ಮದರಾಸು ಪಟ್ಟಣವು ಪೂರ್ವದ ಬಂಗಾಳಿ ಕೊಲ್ಲಿಯ ತೀರದಲ್ಲಿದ್ದರೆ, ಮಂಗಳೂರು ಪಶ್ಚಿಮದ ಅರಬೀ ಸಮುದ್ರದ ತೀರದಲ್ಲಿ. ಈ ದೂರ ಮತ್ತು ಭಾಷೆಯ ತೊಂದರೆಯಿಂದಾಗಿ ಆಡಳಿತದಲ್ಲಿ ಶಿಥಿಲತೆ ಉಂಟಾಯಿಗುತ್ತಿತ್ತು. ಆದ್ದರಿಂದ ಕನ್ನಡ ಭಾಷೆ ಮಾತಾಡುವವರದೇ ಆದ ಒಂದು ರಾಜ್ಯವಿದ್ದರೆ ತಮ್ಮ ಜಿಲ್ಲೆಗೆ ಹೆಚ್ಚಿನ ಸಮರ್ಥ ಆಡಳಿತ ಸಿಗುವ ಸಂಭವವಿದೆಯೆಂದು ಅವರಿಗೆ ತೋರಿರಬೇಕು. ಈ ಹಿನ್ನೆಲೆಯಲ್ಲಿ ೧೯೩೧ರಲ್ಲೇ ಅವರು ಭಾಷಾಪ್ರಾಂತ ಪರಿಷತ್ತಿನ ಕಾರ್ಯದರ್ಶಿಯಾಗಿದ್ದರು. ಆಮೇಲೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್‌ನಲ್ಲಿ ನಾಯಕರಾಗಿ ದುಡಿದರು. ಮೈಸೂರು, ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿ, ಬಳ್ಳಾರಿ ಮುಂತಾದ ಕನ್ನಡ ಪ್ರದೇಶಗಳ ನಾಯಕರೊಡನೆ ಅವರ ಒಡನಾಟ ಹೆಚ್ಚಿತು. ಕರ್ನಾಟಕ ಏಕೀಕರಣಕ್ಕಾಗಿ ಅವರು ಅಹರ್ನಿಶಿ ದುಡಿದರು.

೧೯೫೧ ರಲ್ಲಿ ಕಾರಂತರು ಯೂರೋಪ್ ಪ್ರವಾಸ ಕೈಗೊಂಡರು. ಆ ಪ್ರವಾಸಾನುಭವಗಳನ್ನು 'ಪ್ರವಾಸಿಯ ಪತ್ರಗಳು' ಎಂಬ ಹೆಸರಿನಲ್ಲಿ 'ವಿಚಾರವಾಣಿ'ಯಲ್ಲಿ ವಾರ ವಾರ ಬರೆಯುತ್ತಿದ್ದರು. (ಮುಂದೇ ಅದೇ ಹೆಸರಿನಲ್ಲಿ ಅದು ಪುಸ್ತಕವಾಗಿ ಪ್ರಕಟವಾಯಿತು). ಪ್ರವಾಸದಿಂದ ಹಿಂದಿರುಗಿದ ಬಳಿಕ ಕಾಂಗ್ರೆಸ್ ಬಿಟ್ಟು "ಕರ್ನಾಟಕ ಏಕೀಕರಣ ಪಕ್ಷ" ಎಂಬ ಪಕ್ಷ ಸ್ಥಾಪಿಸಿದರು. ಮುಂದೆ ಸ್ವಲ್ಪ ಸಮಯದಲ್ಲಿ ಅದು ಕೃಷಿಕ ಮಜ್‌ದೂರ್ ಪಕ್ಷದೊಂದಿಗೆ ವಿಲಯನ ಹೊಂದಿತು. ಈ ಪಕ್ಷಕ್ಕೆ ಮದ್ರಾಸ್ ರಾಜ್ಯದ ಹಲವೆಡೆ ಅಪೂರ್ವ ಬೆಂಬಲ ದೊರಕಿತು. ಇದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ನಡುಗಿತು.

ಕಾರಂತರು ಲೋಕಸಭಾ ಚುನಾವಣೆಗೆ ಮಂಗಳೂರು ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದರು. ಅದು ಅವರ ಹದಿಮೂರನೆಯ ಚುನಾವಣೆಯಾಗಿತ್ತು. ಆದರೆ ಅದು ಭಾರತದಲ್ಲಿ ಮೊದಲ ವಯಸ್ಕ ಮತದಾನವಿದ್ದ ಚುನಾವಣೆ. ಕಾರಂತರ ವಿರುದ್ಧ ಕಾಂಗ್ರೆಸ್ ಪಕ್ಷದ ಹುರಿಯಾಳು ದೆಹಲಿಯಲ್ಲಿ ಪತ್ರಿಕೋದ್ಯಮಿಯಾಗಿದ್ದ

ಪ್ರಸಿದ್ಧ ಬೆನಗಲ್ ಶಿವರಾವ್. ಮೂಲತಃ ದಕ್ಷಿಣ ಕನ್ನಡದವರು; ಆ್ಯನಿಬೆಸೆಂಟರಿಂದ ಪ್ರಭಾವಿತರಾದವರು. ಆದರೆ ಸ್ವಾತಂತ್ರ್ಯ ಹೋರಾಟಗಾರರಾಗಿರಲಿಲ್ಲ. ಅದುವರೆಗೆ ಕಾಂಗ್ರೆಸ್ ಪಕ್ಷದ ಸದಸ್ಯರೂ ಆಗಿರಲಿಲ್ಲ. ಬೆನಗಲ್ ಶಿವರಾಯರೂ ಮೊಳಹಳ್ಳಿ ಶಿವರಾಯರೂ ಜಾತೀಯ ಬಾಂಧವರಾಗಿದ್ದರು. ಹಾಗಾಗಿ, ಕಾರಂತರಿಗೆ ಹಿಂದಿನಿಂದಲೂ ಸ್ನೇಹಿತರಾಗಿ ಬೆಂಬಲ ನೀಡುತ್ತ ಬಂದಿದ್ದ ಪ್ರಸಿದ್ಧ ಕಾಂಗ್ರೆಸಿನ ಮೊಳಹಳ್ಳಿ ಶಿವರಾಯರು, ಈ ಬಾರಿ ಕಾರಂತರನ್ನು ಬಿಟ್ಟು ಬೆನಗಲ್ ಶಿವರಾಯರ ಬೆಂಬಲಕ್ಕೆ ನಿಂತರು. ಶಿವರಾಯರನ್ನು ಹುರಿಯಾಳಾಗಿ ನಿಲ್ಲಿಸಿದ್ದು ಕಾರಂತರ ವಿರೋಧಿಯಾಗಿದ್ದ ಉಳ್ಳಾಲ ಶ್ರೀನಿವಾಸ ಮಲ್ಯರು. ಬಿರುಸಿನಿಂದ ಚುನಾವಣಾ ಪ್ರಚಾರ ನಡೆಯಿತು. ಆದರೆ ಮತ ಎಣಿಕೆ ಮುಗಿದಾಗ ಕಾರಂತರು ಹನ್ನೆರಡು ಸಾವಿರ ಮತಗಳ ಅಂತರದಿಂದ ಪರಾಭವಗೊಂಡಿದ್ದರು.

ಮುಂದೆ ನಡೆದ ಚುನಾವಣಾ ತಕರಾರು ದಾವೆಯಲ್ಲಿ ಅನೇಕ ಅಕ್ರಮಗಳಾಗಿದ್ದುದು ಸಾಬೀತಾಯಿತು. ಪಾಣೆಮಂಗಳೂರಿನ ಮತಪೆಟ್ಟಿಗೆಯಲ್ಲಿ ಹಾಕಿದ ಮತಚೀಟಿಗಳು ಬೆಳ್ತಂಗಡಿಯ ಮತಪೆಟ್ಟಿಗೆಗಳಲ್ಲಿ ಕಂಡುಬಂದವು. ಹೆಚ್ಚಿನ ಮತಪೆಟ್ಟಿಗೆಗಳು ನುಜ್ಜುಗುಜ್ಜಾಗಿದ್ದವು. ಇದು ಕಾರಂತರ ಪ್ರಥಮ ಚುನಾವಣಾ ಸೋಲು. ಈ ಚುನಾವಣೆಯ ನಂತರ ಕಾರಂತರಿಗೆ ಚುನಾವಣೆಗಳಲ್ಲಿ ಜಯಲಭಿಸಲಿಲ್ಲ.

ಕಾರಂತರನ್ನು ಹತ್ತಿರದಿಂದ ಬಲ್ಲ ಸೇವ ನಮಿರಾಜ ಮಲ್ಲರು ಆ ಸಂದರ್ಭವನ್ನು ವಿವರಿಸುವುದು ಹೀಗೆ: ಚುನಾವಣಾ ಸೋಲಿನಿಂದಾಗಿ ಕಾರಂತರು ಧೈರ್ಯಗುಂದಲಿಲ್ಲ. ಕುಹಕಿಗಳ ಕೈವಾಡ ತನ್ನ ವಿರುದ್ಧ ಸಂಚು ಹೂಡಿದೆ ಎಂದು ತಿಳಿದ ಅವರ ಕ್ರೋಧ ಮತ್ತೂ ಹೆಚ್ಚಿತು. ಸಾಲದ ಹೊರೆ ಹೊತ್ತಿದ್ದ ಅವರಿಗೆ ವಕೀಲಿ ವೃತ್ತಿಯನ್ನು ಮುಂದುವರಿಸದೆ ಬೇರೆ ದಾರಿಯಿರಲಿಲ್ಲ. ಆದರೂ ತನ್ನ ಪಕ್ಷವನ್ನು ಕಟ್ಟುವ ಕೆಲಸದಲ್ಲಿ ಹಿಂದುಳಿಯಲಿಲ್ಲ. ಮುಂದೆ ಸಮಾಜವಾದಿ ಪಕ್ಷವೂ ಕಿಸಾನ್ ಮಜ್ದೂರ್ ಪಾರ್ಟಿಯೊಡನೆ ವಿಲೀನವಾದಾಗ ಸಮಾಜವಾದಿ ಕಾರ್ಯಕರ್ತರೂ ಅವರೊಡನೆ ಸೇರಿಕೊಂಡರು. ಹೀಗೆ ರಾಜಕೀಯ ಹೋರಾಟವನ್ನು ಮುಂದುವರಿಸಿದರು.

೧೯೫೪ ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಚುನಾವಣೆಗಳು ನಡೆದಾಗ ಪ್ರಜಾ ಸೋಶಲಿಸ್ಟ್ ಪಾರ್ಟಿ ದೊಡ್ಡ ಹೋರಾಟ ನಡೆಸಿತು. ಕಾರಂತರು ದಿನಗಟ್ಟಲೆ ಜಿಲ್ಲೆಯಾದ್ಯಂತ ತಮ್ಮ ಕಾರಿನಲ್ಲೇ ಸಂಚರಿಸಿ ಹಲವಾರು ಸಭೆಗಳನ್ನು ಜರುಗಿಸಿದರು. ೧೯೫೨ ರಲ್ಲಿ ನಡೆದ ವಂಚನೆ ಈ ಬಾರಿ ಪುನರಾವೃತ್ತಿಗೊಳ್ಳಬಾರದೆಂದು ಎಚ್ಚರಿಕೆ ನೀಡುತ್ತಿದ್ದರು. ಹೋದೆಡೆಯಲ್ಲೆಲ್ಲ ತಮ್ಮ ಭಾಷಣದಲ್ಲಿ ಇಂಗ್ಲೆಂಡ್‌ನಲ್ಲಿ

ಲೇಬರ್ ಪಕ್ಷವು ಮಾಡುತ್ತಿರುವ ಜನಹಿತ ಕಾರ್ಯವನ್ನು, ಭಾರತದ ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರಗಳಿಂದ ಕೂಡಿದ ಕಾಂಗ್ರೆಸ್ ಸರಕಾರದ ಕೆಲಸವನ್ನು ಹೋಲಿಸಿ ಮಾತಾಡುತ್ತಿದ್ದರು. ಸರಿಯಾಗಿ ರಸ್ತೆಯಿಲ್ಲದ ಕರಾಯ, ಹೊಸಮಠ, ರಾಮಕುಂಜ, ಕಡಬ, ಪಂಜ, ಗುತ್ತಿಗಾರು, ಹಾಲಾಡಿ, ವಂಡ್ಸೆ ಮುಂತಾದ ಊರುಗಳಲ್ಲಿ ತಿರುಗಾಡಿ ಭಾಷಣಗಳನ್ನಿತ್ತರು. ಆದರೆ ಚುನಾವಣೆಯಲ್ಲಿ ಜನ ಕಾಂಗ್ರೆಸ್‌ಗೇ ಮತ ಹಾಕಿದರು. ೨೪ ಸ್ಥಾನಗಳ ಪೈಕಿ ೨೨ ಸ್ಥಾನಗಳನ್ನು ಕಾಂಗ್ರೆಸ್ ಗೆದ್ದುಕೊಂಡಿತು. ಅದಕ್ಕೆ ಸರಕಾರದ ಬಲವಿತ್ತು, ಹಣದ ಬಲವಿತ್ತು. ಮತಗಟ್ಟೆಗಳಲ್ಲಿದ್ದ ಮತ್ತು ಎಣಿಕೆ ಕಾಲದಲ್ಲಿದ್ದ ಸರಕಾರಿ ಅಧಿಕಾರಿಗಳೆಲ್ಲ ಕಾಂಗ್ರೆಸ್ ಪಕ್ಷದ ಪುಡಾರಿಗಳೊಡನೆ ಶಾಮೀಲಾಗುತ್ತಿದ್ದರು. ಹೀಗಾಗಿ ಕೆಲವು ಕಡೆ ನಿರಕ್ಷರಿ ಮತದಾರರು ಮತಗಟ್ಟೆಯೊಳಗೆ ಹೋಗಿ ಕೇವಲ ಮತದಾರರ ಚಿಹ್ನೆಗಳ ಭಿತ್ತಿಪತ್ರಗಳಿಗೆ ಗುರುತುಹಾಕಿ ಬರುತ್ತಿದ್ದುದೂ ಕಂಡುಬರುತ್ತಿತ್ತು. ಪಕ್ಷಾಂತರ ಮಾಡಿಸುವ ಪಿಡುಗಂತೂ ಆಗಲೇ ಹಾವಳಿ ಮಾಡತೊಡಗಿತ್ತು.

ಉಪ್ಪಿನಂಗಡಿಯಲ್ಲಿ ಪ್ರಜಾಸೋಶಲಿಸ್ಟ್ ಪಕ್ಷದ ಒಬ್ಬ ಸ್ಪರ್ಧಾಳು ಒಳಸಂಚಿನಿಂದ ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದಾಗ, ಬೇರೊಬ್ಬರನ್ನು ಆರಿಸಿ ಅವರನ್ನು ಒತ್ತಾಯ ಪೂರ್ವಕ ಕಾಂಗ್ರೆಸ್‌ನ ವಿರುದ್ಧ ನಿಲ್ಲಿಸಬೇಕಾಯಿತು. ಸ್ವಾತಂತ್ರ್ಯ ಹೋರಾಟ ಕಾಲದ ನಿಸ್ವಾರ್ಥ ತ್ಯಾಗಮಯಿ ಭಾವನೆ ಆಗ ದೇಶದ ನಾಯಕರಲ್ಲೇ ಮಾಯವಾಗಿತ್ತು. ಸಮಯ ಸಾಧಕರೆಲ್ಲ ಅವರನ್ನು ಮುತ್ತಿದ್ದರು. ಐದು ರೂಪಾಯಿಗೆ ವೋಟನ್ನು ಮಾರುವ ಪ್ರವೃತ್ತಿ ಒಪ್ಪೊತ್ತು ಊಟಕ್ಕೂ ಗತಿಯಿಲ್ಲದ ವಯಸ್ಕ ಮತದಾರರಲ್ಲಿ ಮೂಡಿದುದು ಕಾರಂತರನ್ನು ದುಃಖಕ್ಕೀಡು ಮಾಡಿತು.

ಕಾರಂತರು ಅಧಿಕಾರದಲ್ಲಿದ್ದಾಗ ಎಂದೂ ತನ್ನ ಸ್ಥಾನವನ್ನು ಸ್ವಾರ್ಥಕ್ಕಾಗಿ, ಸ್ವಜನರಿಗಾಗಿ ದುರುಪಯೋಗಪಡಿಸಿಕೊಂಡವರಲ್ಲ. ಲಾರ್ಡ್ ಎರ್ಸ್ಕಿನ್ ಎಂಬಾತ ಕಾರಂತರ ದಕ್ಷತೆ, ಪ್ರಾಮಾಣಿಕತೆಗಳನ್ನು ಕೊಂಡಾಡಿದ್ದರು. ಕಾರಂತರು ಒಂದು ಹಂತದಲ್ಲಿ ರಾಷ್ಟ್ರೀಯ ಮಟ್ಟಕ್ಕೇರಿದ್ದರು. ರಾಷ್ಟ್ರೀಯ ನಾಯಕರ ಪೈಕಿ ಅಗ್ರ ಪಂಕ್ತಿಯಲ್ಲಿದ್ದರು. ಅವರು ಮನಸ್ಸು ಮಾಡಿದ್ದರೆ ಓರ್ವ ರಾಜ್ಯಪಾಲರಾಗಬಹುದಿತ್ತು. ಕೇಂದ್ರದ ಮಂತ್ರಿ ಪದವಿಯ ಆಮಿಷವನ್ನೂ ಅವರಿಗೆ ನೀಡಲಾಗಿತ್ತು. ಆದರೆ ಅವರಿಗೆ ಅಧಿಕಾರಕ್ಕಿಂತ ದೇಶ ದೊಡ್ಡದಾಗಿ ಕಂಡಿತು. ಸ್ವಾರ್ಥಕ್ಕಾಗಿ ತನ್ನ ವ್ಯಕ್ತಿತ್ವವನ್ನು ಮಾರದೆ, ಪಕ್ಷದ ನೀತಿಯನ್ನು ಶಿಸ್ತಿನ ಭಯವಿಲ್ಲದೆ ಟೀಕಿಸಿ – ಪಕ್ಷದಿಂದ ಎತ್ತರಕ್ಕೆ – ದೇಶದ ಎತ್ತರಕ್ಕೆ ಬೆಳೆದು ನಿಂತರು.

ಇಷ್ಟೊಂದು ಶಿಸ್ತಿನ, ಪ್ರಾಮಾಣಿಕ, ಕಟು ಸತ್ಯವಾದಿ ರಾಜಕೀಯ ಕ್ಷೇತ್ರದಲ್ಲಿ ದೊರಕುವುದು ದುರ್ಲಭ. ಮಂತ್ರಿಗಳಾಗಿದ್ದರೂ ಅವರ ಸನಿಹದ ಬಂಧುಗಳು

ನಿರುದ್ಯೋಗದಿಂದ ನರಳುವುದು ತಪ್ಪಲಿಲ್ಲ. ಸ್ವತಃ ಕಾರಂತರೇ ರಾಜಕೀಯಕ್ಕಾಗಿ ತನ್ನ ಆಸ್ತಿ ಮಾರಿಕೊಳ್ಳಬೇಕಾಗಿ ಬಂತು. ಅವರೇನಾದರೂ ಸ್ವಲ್ಪ ದುಡ್ಡು ಕಾಸು ಸಂಪಾದಿಸಿದ್ದಿದ್ದರೆ ರಾಜಕೀಯದಿಂದ ದೂರ ನಿಂತು ಮತ್ತೆ ವಕೀಲಿ ಕೆಲಸ ಮಾಡತೊಡಗಿದ ಮೇಲೆಯೇ. ಈ ನೀತಿಯನ್ನು ಇಂದಿನ ರಾಜಕೀಯದಲ್ಲಿ ಕಾಣಲು ಸಾಧ್ಯವೇ?

೧೯೫೧ರ ಕೊನೆಯ ಭಾಗದಲ್ಲಿ ಕಾರಂತರು ಕಾಂಗ್ರೆಸನ್ನು ತೊರೆಯುವಾಗ ನೀಡಿದ ವಿವರಣೆ ಹೃದಯಸ್ಪರ್ಶಿಯಾಗಿತ್ತು.

"ಮೂವತ್ತು ವರ್ಷ ಕಾಲ ಒಂದೇ ಸಂಸ್ಥೆಗೆ ತನ್ನಿಂದಾಗುವ ಸೇವೆಯನ್ನು ಸಲ್ಲಿಸಿದವನು ಅದನ್ನು ಬಿಟ್ಟು ಹೊರಬರುವುದು ಸಂತೋಷದ ಸಂಗತಿಯಲ್ಲ. ಈ ಹೊತ್ತು ನನಗೆ ಈ ದೇಶದ ಸಾರ್ವಜನಿಕ ಕ್ಷೇತ್ರದಲ್ಲಿ ಏನಾದರೊಂದು ಸ್ಥಾನವಿದ್ದರೆ ಅದು ನಾನು ಕಾಂಗ್ರೆಸ್‌ಗೆ ಸಲ್ಲಿಸಿದ ಸೇವೆಯ ಫಲವೆಂದೇ ಭಾವಿಸುತ್ತೇನೆ. ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ದೇಶಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಟ್ಟ ಸಂಸ್ಥೆಗಾಗಿ ದುಡಿಯುವವರು ಬರೇ ಮಣ್ಣುಮುದ್ದೆಗಳಂತಿದ್ದರೂ ಅವರಲ್ಲಿ ಮಹಾತ್ಮರು ವಿಚಿತ್ರ ಶಕ್ತಿಯನ್ನು ತುಂಬಿ ಅವರಿಂದ ವೀರರಿಗೆ ಸಾಧ್ಯವಾದ ಕೆಲಸಗಳನ್ನು ಮಾಡಿಸಿದರು. ಆದರೆ ಇಂದು ಅನ್ಯಾಯ, ಅಯೋಗ್ಯ ವರ್ತನೆ, ಬಡವರ ಶೋಷಣೆಗಳಿಗಾಗಿ ಅದೇ ಸಂಸ್ಥೆಯ ದುರುಪಯೋಗ ಆಗುತ್ತಿರುವಾಗ ಹಿಂದಿನದನ್ನು ನೆನೆದು ಅದಕ್ಕೆ ಅಂಟಿಕೊಂಡಿರುವುದು ಸ್ವಾರ್ಥದ ದೃಷ್ಟಿಯಿಂದ ಲಾಭದಾಯಕ ವಾದರೂ ಅದನ್ನು ತ್ಯಜಿಸಿ ನ್ಯಾಯದ ಮಾರ್ಗದಲ್ಲಿ ನಡೆಯುವುದು ನನಗಿರುವ ಸರಿಯಾದ ಒಂದೇ ಮಾರ್ಗ.

"ಸ್ವರಾಜ್ಯವು ನಮಗೆ ದೊರಕುವವರೆಗೆ ನಮಗೆಲ್ಲ ಪವಿತ್ರವಾಗಿದ್ದ ಸಂಸ್ಥೆಯನ್ನು ಸ್ವರಾಜ್ಯ ಪ್ರಾಪ್ತಿಯಾದೊಡನೆ ಭಕ್ತಿಪೂರ್ವಕವಾಗಿ ವಿಸರ್ಜಿಸಬೇಕಿತ್ತು. ಮಹಾತ್ಮಾಗಾಂಧಿಯವರೂ ಮೊದಲು ಇದೇ ಅಭಿಪ್ರಾಯವನ್ನು ಪ್ರಕಟಿಸಿದ್ದರು. ಕಾಂಗ್ರೆಸನ್ನು ವಿಸರ್ಜಿಸಬೇಕೆಂದು ಹೇಳುವುದಕ್ಕೆ ಬಲವಾದ ಕಾರಣಗಳಿವೆ. ಸ್ವರಾಜ್ಯ ಸಾಧನೆಯೇ ಉದ್ದೇಶವಾಗಿದ್ದಾಗ ಎಲ್ಲ ರೀತಿಯ ಅಭಿಪ್ರಾಯಗಳ ಜನರು, ಬಂಡವಾಳಗಾರರು, ಮಜೂರರು, ಮಂದಗಾಮಿಗಳು, ತೀವ್ರಗಾಮಿಗಳು, ಪಕ್ಷಾತೀತರು ಎಲ್ಲರೂ ಕಾಂಗ್ರೆಸ್ ಧ್ವಜದಡಿ ಒಂದಾಗಿ ಸ್ವಾತಂತ್ರ್ಯಕ್ಕಾಗಿ ಕಾದಾಡಿದರು. ಯುದ್ಧದಲ್ಲಿ ಜಯಿಸಿಕ್ಕ ನಂತರ ಪರಸ್ಪರ ವಿರೋಧ ಅಭಿಪ್ರಾಯದವರು ಒಂದೇ ಸಂಸ್ಥೆಯಲ್ಲಿದ್ದರೆ ಸ್ವಪ್ರತಿಷ್ಠೆ ಮತ್ತು ಸ್ವಲಾಭಕ್ಕಲ್ಲದೇ ಬೇರೇನೂ ಔಚಿತ್ಯವಿಲ್ಲ".

ಕಾಂಗ್ರೆಸ್ ಬಿಟ್ಟು ಹೋದ ಕಾರಂತರನ್ನು ಮರಳಿ ಪಕ್ಷದ ತೆಕ್ಕೆಯಳಗೆ ತರಲು

ಆರಂಭದಲ್ಲಿ ತುಂಬ ಪ್ರಯತ್ನಗಳಾದವು. ಆಮಿಷಗಳೆಲ್ಲ ವಿಫಲವಾದಾಗ ಅವರನ್ನೇ ಸೋಲಿಸುವ ಷಡ್ಯಂತ್ರ ರಚಿಸಲಾಯಿತು. ೧೯೫೨ ರಲ್ಲಿ ಬೆನಗಲ್ ಶಿವರಾಯರನ್ನು ಕಾರಂತರ ವಿರುದ್ಧ ನಿಲ್ಲಿಸಿ ಕಾರಂತರನ್ನು ಸೋಲಿಸಿದ್ದು ಈ ಷಡ್ಯಂತ್ರದ ಒಂದು ಭಾಗವಾಗಿತ್ತು. ಆದರೆ ಕಾರಂತರಂತಹ ರಾಷ್ಟ್ರೀಯವಾದಿ ಮುತ್ಸದ್ದಿಯ ವಿರುದ್ಧ ನಿಂತು ಅವರನ್ನು ಸೋಲಿಸಬಾರದು ಎಂದು ರಾಜಾಜಿಯೇ ಶಿವರಾಯರನ್ನು ಕರೆದು ಬುದ್ಧಿ ಹೇಳಿದ್ದರಂತೆ. ಗೆದ್ದ ಬಳಿಕ ಶಿವರಾಯರಿಗೂ ಹಾಗೆಯೇ ಅನಿಸಿತ್ತಂತೆ.

ಕಾರಂತರನ್ನು ಹಣಿಯುವ ಪ್ರಯತ್ನದ ಎರಡನೇ ಭಾಗವಾಗಿ ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರವನ್ನೇ ಒಡೆಯಲಾಯಿತು. ೧೯೫೭ ರ ಚುನಾವಣೆಯ ಕಾಲಕ್ಕೆ ಕಾರಂತರ ಪ್ರಭಾವವಿದ್ದ ಕ್ಷೇತ್ರ ಪುತ್ತೂರು, ಕಾಸರಗೋಡು ಬೇರೆ ಬೇರೆ ಆಯಿತು. ಇದೆಲ್ಲ ಜಿಲ್ಲೆಯ ಕಾಂಗ್ರೆಸ್ ರಾಜಕಾರಣಿಗಳ ಕುತಂತ್ರ ಎನ್ನಲಾಗಿದೆ. ಅಂತೂ ೧೯೫೨ ರ ಬಳಿಕ ಕಾರಂತರು ಯಾವ ಶಾಸನ ಸಭೆಗೂ ಹೋಗಲಾಗಲಿಲ್ಲ. ೧೯೫೮ರಲ್ಲಿ ಅವರು ದಕ್ಷಿಣ ಕನ್ನಡ ಜಿಲ್ಲೆಯನ್ನು ತೊರೆದು ಶಾಶ್ವತವಾಗಿ ಬೆಂಗಳೂರಿಗೆ ಹೋಗಿ ನೆಲೆನಿಂತರು.

೧೯೫೨ ರಲ್ಲಿ ಬೆಂಗಳೂರಿನಲ್ಲಿ ಗಾಜಿನ ಮನೆಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷ ಪುರುಷೋತ್ತಮದಾಸ ಟಂಡನ್ ಅವರು, ಆ ಹೊತ್ತಿಗಾಗಲೇ ಎರಡು ಸಾವಿರದ ಐನೂರು ಮಂದಿ ಕಾಂಗ್ರೆಸಿಗರು ಪಕ್ಷ ತ್ಯಜಿಸಿದ್ದಾರೆಂದು ತಿಳಿಸಿದ್ದರು. ಅವರಲ್ಲಿ ನಿಷ್ಠಾವಂತ ಕಾಂಗ್ರೆಸಿಗರಾದ ಕಾರಂತ, ಕಿದ್ವಾಯಿ, ಕೃಪಲಾನಿ ಮುಂತಾದವರೂ ಸೇರಿದ್ದರು. ಪಕ್ಷದೊಳಗೆ ಮತಭೇದ ತಲೆದೋರಿದಾಗ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ದಕ್ಷತೆಯ ಕೊರತೆ ಕಂಡು ಬಂದಾಗ ಪಕ್ಷವನ್ನು ತ್ಯಜಿಸಲು ಅಪೇಕ್ಷಿಸಿದವರಿಗೆ ಸ್ವಾತಂತ್ರ್ಯ ನೀಡಿ, ಆ ಶಕ್ತಿಯನ್ನೇ ಉಪಯೋಗಿಸಿ ಕಾಂಗ್ರೆಸ್ಸೇ ವಿರೋಧಪಕ್ಷ ಕಟ್ಟುವುದಕ್ಕೆ ಅಣಿಮಾಡಿಕೊಡಲು ಅದೊಂದು ಒಳ್ಳೆಯ ಸಂದರ್ಭವಾಗಿತ್ತು. ದೇಶಕ್ಕೆ ಸ್ವಾತಂತ್ರ್ಯ ಒದಗಿಸಿದ ಕಾಂಗ್ರೆಸ್ಸು ಸಂವಿಧಾನ ರೂಪಿಸಿತು. ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸಿತು. ಆರೋಗ್ಯಕರವಾಗಿ ಪ್ರಜಾಪ್ರಭುತ್ವ ಬೆಳೆಯಲು ಪ್ರತಿಪಕ್ಷದ ಅನಿವಾರ್ಯತೆ ಕಾಂಗ್ರೆಸ್‌ಗೆ ಗೊತ್ತಿತ್ತು. ಆದರೆ ಕಾಂಗ್ರೆಸ್ಸೇ ಕಾರಂತರಂಥವರನ್ನು ಚುನಾವಣೆಯಲ್ಲಿ ಸೋಲಿಸುವ ಕೆಲಸಕ್ಕೆ ಕೈಹಾಕಿ ವಿರೋಧ ಪಕ್ಷದ ಬೆಳವಣಿಗೆಯನ್ನು ಹಾಳುಮಾಡಿತು.

ರಾಮಕೃಷ್ಣ ಕಾರಂತರು ೧೯೫೮ರಿಂದ ಸಕ್ರಿಯ ರಾಜಕಾರಣದಿಂದ ದೂರವಾದರೂ ದೇಶದ ರಾಜಕೀಯದಲ್ಲಿ ಬೆಳೆಯುತ್ತ ಬಂದ ವೈಪರೀತ್ಯಗಳನ್ನು ಕಂಡು ಮರುಗುತ್ತಿದ್ದರು.

ಈ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಘಾತುಕವಾದ ಪ್ರವೃತ್ತಿ ಬೆಳೆಯುತ್ತಿದೆಯೆಂಬ ಬಗ್ಗೆ ಅವರು ೧೯೫೫ರಲ್ಲಿಯೇ ಎಚ್ಚರಿಕೆ ನೀಡಿದ್ದರು. ರಾಜಕಾರಣಿಗಳಲ್ಲಿ ಸಾಮೂಹಿಕವಾಗಿ ಬೆಳೆಯುತ್ತಿರುವ ಅಧಿಕಾರ ಲಾಲಸೆ ಮತ್ತು ವಿಲಾಸಪ್ರಿಯತೆ ಜನತಂತ್ರಕ್ಕೆ ಮಾರಕವಾಗುವುದೆಂಬ ಮಾತುಗಳನ್ನು ೧೯೫೫ರಲ್ಲಿ ಬೆಂಗಳೂರಿನಲ್ಲಿ ನಡೆದ ಪಿ.ಎಸ್.ಪಿ. ರಾಷ್ಟ್ರೀಯ ಸಮ್ಮೇಳನದಲ್ಲಿ ಆಡಿದ್ದರು.

ಕಾರಂತರ ನಾನಾ ಸದ್ಗುಣಗಳನ್ನು ಅರಿತಿದ್ದ ನಿಜಲಿಂಗಪ್ಪನವರು ಕಾರಂತರನ್ನು ಹೇಗಾದರೂ ವಿಧಾನಸಭೆಗೆ ಕರೆಸಿಕೊಳ್ಳಬೇಕೆಂದು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು. ತನ್ನನ್ನು ಸೋಲಿಸಲು ಕುಚೋದ್ಯಗಾರರು ತುಂಬಿದ್ದಾರೆ ಎಂಬ ಭಾವನೆಯಿಂದ ಕಾರಂತರು ನಿಜಲಿಂಗಪ್ಪನವರ ಮಾತಿಗೆ ಕಿವಿಗೊಡಲಿಲ್ಲ. ನಿಜಲಿಂಗಪ್ಪನವರು ಒಂದೆಡೆ ಹೀಗೆ ಬರೆಯುತ್ತಾರೆ – "ಶ್ರೀ ಕಾರಂತರ ನಾನಾ ಮುಖದ ಸದ್ಗುಣಗಳು, ದಕ್ಷತೆ, ನಿಷ್ಠೆ, ಕಾನೂನಿನ ನೈಪುಣ್ಯತೆ ಇವುಗಳನ್ನು ಬಲ್ಲ ನಾನು ಅವರನ್ನು ಕರ್ನಾಟಕ ರಾಜ್ಯ ಸ್ಥಾಪನೆಯಾದ ಮೇಲೆ ವಿಧಾನಸಭೆಗೆ ಸದಸ್ಯನನ್ನಾಗಿ ಚುನಾಯಿಸಿ ತರಬೇಕೆಂಬ ಇಚ್ಛೆಯಿಂದ ಚುನಾವಣೆಗೆ ನಿಲ್ಲಬೇಕೆಂದು ಎಷ್ಟು ಒತ್ತಾಯಪಡಿಸಿದರೂ ಅವರು ಒಪ್ಪಲಿಲ್ಲ. ಬೇರೆಯವರ ಅಭಿಪ್ರಾಯಕ್ಕೆ ಮಣಿದು ನಾನು ನನ್ನ ಮನಸ್ಸನ್ನು ಬದಲಾಯಿಸುತ್ತೇನೆಂಬ ಸಂಶಯಕ್ಕೊಳಗಾಗಿ ಅವರು ಉಮೇದ್ವಾರರಾಗಲು ಒಪ್ಪಲಿಲ್ಲ. ಅದರಿಂದ ನನಗೆ ಉಂಟಾದ ನಿರಾಶೆ ಅವರಿಗೆ ಕೊನೆಯವರೆಗೂ ತಿಳಿಯಲೇ ಇಲ್ಲ. ನನಗೂ ಇದು ವಿಷಾದವಾಗಿಯೇ ಉಳಿಯಿತು".

ನಿಜಲಿಂಗಪ್ಪನವರು ಈ ಮಾತು ಬರೆದಿದ್ದಾರೆಂದರೆ ಕಾರಂತರ ವ್ಯಕ್ತಿತ್ವ ಎಂತಹುದಿತ್ತು ಎಂಬುದನ್ನು ಸುಲಭವಾಗಿ ಊಹಿಸಬಹುದು. ನಿಜಲಿಂಗಪ್ಪನವರು ತಮ್ಮ ಬರೆವಣಿಗೆಯ ಕೊನೆಯಲ್ಲಿ ಈ ಮಾತು ಹೇಳುತ್ತಾರೆ – "ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅವರು ಮುಖಂಡರು. ಅವರ ತ್ಯಾಗ ದೊಡ್ಡದು. ಮನೆತುಂಬ ಮಕ್ಕಳಿರುವ ತಾವೊಬ್ಬರೇ ದುಡಿಯುವವರಾಗಿದ್ದರೂ ಆ ಸಂಸಾರದ ಹೊಣೆಯನ್ನು ಬದಿಗಿರಿಸಿ ರಾಷ್ಟ್ರಕ್ಕಾಗಿ ದುಡಿದರು. ಈಗಿನ ಹೊಲಸು ರಾಜಕೀಯಕ್ಕೂ ಅವರ ಕಾಲದ ರಾಜಕೀಯ ಪರಿಸ್ಥಿತಿಗೂ ಎಷ್ಟು ಅಂತರ!" ಒಬ್ಬ ಹಿರಿಯ ನಾಯಕ, ಮುತ್ಸದ್ದಿ, ಚಿಂತನಶೀಲ ವ್ಯಕ್ತಿ ಇನ್ನೊಬ್ಬರಲ್ಲಿರುವ ದೊಡ್ಡ ಗುಣವನ್ನು ಗೌರವಿಸುವುದೆಂದರೆ ಹೀಗೆ!

ಖ್ಯಾತ ನಾಟಕಕಾರ ಶ್ರೀರಂಗ ಅವರು ಕೆ.ಆರ್.ಕಾರಂತರ ಆಪ್ತ ವಲಯದಲ್ಲಿದ್ದವರು. ಕಾರಂತರು ರಾಜಕೀಯ ತ್ಯಜಿಸುವುದಕ್ಕೆ ಸ್ವಲ್ಪ ಮುನ್ನ ಬೆಂಗಳೂರಲ್ಲಿ ಪ್ರಜಾ ಸೋಶಲಿಸ್ಟ್ ಪಕ್ಷದ ಸಭೆಯೊಂದಕ್ಕೆ ಹೋಗಿದ್ದರು. ಅಲ್ಲಿ

ಶ್ರೀರಂಗರು ಕೆ. ಆರ್. ಕಾರಂತರನ್ನು ಭೇಟಿಯಾಗಿದ್ದರು. ಆಗ ಕಾರಂತರು ತಾನು ರಾಜಕೀಯವನ್ನೇ ತ್ಯಜಿಸುವ ಮಾತು ಹೇಳಿದರಂತೆ.

ಶ್ರೀರಂಗರು ಆಶ್ಚರ್ಯಚಕಿತರಾಗಿ "ಯಾಕೆ?" ಅಂತ ಕೇಳಿದರಂತೆ.

"ಕಾಂಗ್ರೆಸ್ ಮೊದಲ್ಗೊಂಡು ಯಾವ ರಾಜಕೀಯ ಪಕ್ಷ ನೋಡಿದರೂ ಅಲ್ಲಿ ಎಲ್ಲರೂ ಅಪ್ಪಟ ಸ್ವಾರ್ಥಿಗಳೇ. ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಅಲ್ಲಿ ಸ್ಥಾನವೇ ಇಲ್ಲ" ಎಂದು ಖೇದದಿಂದ ಕೆ. ಆರ್. ಕಾರಂತರು ಉತ್ತರಿಸಿದರಂತೆ.

ಕಾರಂತರನ್ನು "ಒಬ್ಬ ಅಪರೂಪದ ಧುರೀಣ, ಕೆಲವು ಸ್ಥಿರಮೌಲ್ಯಗಳಿಗಾಗಿ ಅವರು ನಿಂತರು. ಸ್ವಚ್ಛ ರಾಜಕೀಯವೇ ಅವರ ಧ್ರುವತಾರೆ. ಎಲ್ಲ ಅರ್ಹ ಕೆಲಸಗಳಿಗೂ ಬೆಂಬಲ ನೀಡಿದರು" ಎಂದು ಪ್ರಸಿದ್ಧ ಪತ್ರಕರ್ತ ಖಾದ್ರಿ ಶಾಮಣ್ಣ ಒಂದೆಡೆ ಸ್ಮರಿಸುತ್ತಾರೆ.

"ದೇಶದ ತತ್ವನಿಷ್ಠ ಮುಂದಾಳುಗಳಲ್ಲಿ ಕಾರಂತರು ಒಬ್ಬರು. ಉಜ್ವಲ ದೇಶಭಕ್ತ, ಹಿರಿಯ ನ್ಯಾಯವಾದಿ, ಸರಳಜೀವಿ, ಸರ್ವಮಾನ್ಯ ಧುರೀಣರಾದ ಕಾರಂತರಂತಹವರು ಕಾಣಸಿಗುವುದು ದುರ್ಲಭ" ಎಂದು ಕಾಸರಗೋಡಿನ ಹಿರಿಯ ನೇತಾರ ಖಂಡಿಗೆ ಶ್ಯಾಮಭಟ್ಟರು ಕಾರಂತರನ್ನು ಸ್ಮರಿಸುತ್ತಾರೆ.

"ಸ್ವಾತಂತ್ರ್ಯಪೂರ್ವದ ರಾಜಕೀಯ ಆಂದೋಲನವು ಸಾಮ್ರಾಜ್ಯಶಾಹಿಗಿದಿರಾದ, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಪರವಾದ ಎಲ್ಲ ವಾಹಿನಿಗಳನ್ನೂ ಒಳಗೊಂಡಿತ್ತೆಂದರೆ ತಪ್ಪಾಗಲಾರದು. ೧೯೪೫–೪೬ ರಲ್ಲಿ ಮಂಗಳೂರಿನ ಕೇಂದ್ರ ಮೈದಾನದಲ್ಲಿ ಎ.ಐ.ಟಿ.ಯು.ಸಿ. (ಕಮ್ಯೂನಿಸ್ಟ್ ಬೆಂಬಲಿತ) ಕಾರ್ಮಿಕ ಸಂಘಗಳ ಸಮ್ಮೇಳನ ನಡೆಸಿದಾಗ, ಅದರ ಬಹಿರಂಗ ಅಧಿವೇಶನದಲ್ಲಿ (ಕಾಂಗ್ರೆಸಿಗರಾಗಿದ್ದ) ಕೆ. ಆರ್. ಕಾರಂತರು ಬಂದು ಭಾಷಣ ಮಾಡಿದ್ದರು. ಅವರು ಸಂಕುಚಿತ ರಾಜಕೀಯದ ಮೇರೆಯನ್ನು ಮೀರಿದವರಾಗಿದ್ದು, ಅಂದಿನ ವಿಶಾಲವಾದ ರಾಷ್ಟ್ರೀಯ ಆಂದೋಲನದ ಪ್ರತಿನಿಧಿಗಳಾಗಿದ್ದ ಮಹಾನುಭಾವರು" ಎಂದು ನೇತಾರ, ಕಾರ್ಮಿಕ ಮುಖಂಡ ಬಿ.ವಿ. ಕಕ್ಕಿಲ್ಲಾಯರು ಬರೆಯುತ್ತಾರೆ.

೧೯೬೭ ರಲ್ಲಿ ಕೊನೆಯ ಬಾರಿಗೆ, ಹಲವರ ಒತ್ತಾಯಕ್ಕೆ ಕಟ್ಟು ಬಿದ್ದು, ಕಾರಂತರು ಮಂಗಳೂರು ಲೋಕಸಭಾ ಕ್ಷೇತ್ರದಿಂದ ಪ್ರತಿಪಕ್ಷಗಳ ಸರ್ವಸಮ್ಮತ ಅಭ್ಯರ್ಥಿಯಾಗಿ ಚುನಾವಣೆಗೆ ನಿಂತರು. ಪೂಣಚ್ಚ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ಫಲಿತಾಂಶ ಬಂದಾಗ ಕಾರಂತರು ಅಲ್ಪಮತಗಳಿಂದ ಪರಾಭವ ಹೊಂದಿದ್ದರು. ಆ ಲೋಕಸಭಾ ಕ್ಷೇತ್ರದ ಎಲ್ಲ ವಿಧಾನಸಭಾ ಪರಿಧಿಯಲ್ಲೂ ಕಾರಂತರಿಗೆ ಬಹುಮತ ಬಂದಿತ್ತು. ಆದರೆ ಅವರು ಹಿಂದೆ ಪ್ರತಿನಿಧಿಸುತ್ತಿದ್ದ

ಪುತ್ತೂರು ವಿಧಾನಸಭಾ ಪರಿಧಿಯಲ್ಲಿ (ಅದು ಅವರ ಅಚ್ಚುಮೆಚ್ಚಿನ ವಲಯವೂ ಆಗಿತ್ತು) ಅನಿರೀಕ್ಷಿತವಾಗಿ ಅಲ್ಪಮತಗಳು ಬಂದು ಅವರ ಸೋಲಿಗೆ ಕಾರಣವಾಯಿತು.

ಫಲಿತಾಂಶ ಬಂದ ಬಳಿಕ ಕಾರಂತರ ಆಪ್ತರಾದ ಕೆ. ಎಸ್. ಉಪಾಧ್ಯಾಯರು ಈ ವಿಚಾರವನ್ನು ಕಾರಂತರಿಗೆ ತಿಳಿಸಲು ಅವರಿದ್ದ ಹೋಟೆಲ್ ಕೊಠಡಿಗೆ ಹೋದರಂತೆ. ಕಾರಂತರ ಗೆಲುವಿಗೆ ಉಪಾಧ್ಯಾಯರು ಹಗಲಿರುಳು ದುಡಿದಿದ್ದರು. ಸೋಲಿನ ವಿಷಯವನ್ನು ಹೇಳುತ್ತಿದ್ದಂತೆ ಉಪಾದ್ಯಾಯರು ಗದ್ಗದಿತರಾಗಿ ಅತ್ತೇಬಿಟ್ಟರಂತೆ. ಕಾರಂತರು ಸ್ವಲ್ಪವೂ ವಿಚಲಿತರಾಗದೆ, ಉಪಾಧ್ಯಾಯರನ್ನು ಸಾಂತ್ವನಗೊಳಿಸುತ್ತ, "ಸೋಲು ನನಗೆ ಹೊಸತಲ್ಲ, ಚುನಾವಣೆಯಲ್ಲಿ ಕಳೆದುಕೊಂಡ ಹಣವನ್ನು ವಕಾಲತ್ತಿನಿಂದ ಪುನಃ ಗಳಿಸಬಲ್ಲೆ!" ಎಂದರಂತೆ. ಚುನಾವಣಾ ಕಾಲದಲ್ಲಿ ಆದ ವೆಚ್ಚದ ಲೆಕ್ಕಾಚಾರಗಳನ್ನೆಲ್ಲ ಮರುದಿನವೇ ಪಡೆದು, ಕೊಡಬೇಕಾದವರಿಗೆಲ್ಲ ಚೆಕ್ ಬರೆದು ಕೊಟ್ಟು ಋಣಗಳಿಂದಲೂ ಮುಕ್ತರಾಗಿಬಿಟ್ಟರಂತೆ. ಇದು ಕಾರಂತರ ಸ್ವಭಾವ!

■

## ೯. ಏಕೀಕರಣ ಚಳವಳಿ

ಸುಮಾರು ನಾಲ್ಕು ದಶಕಗಳ ಕಾಲ ರಾಜಕೀಯ ರಂಗದಲ್ಲಿ ಧ್ರುವತಾರೆಯಂತೆ ಮೆರೆದ ಕಾರಂತರ ಮಹತ್ಸಾಧನೆಯೆಂದರೆ ಕರ್ನಾಟಕ ಏಕೀಕರಣಕ್ಕಾಗಿ ಅವರು ಮಾಡಿದ ಕೆಲಸ. ರಾಜಕೀಯ ಆಡಳಿತದಲ್ಲಿ ಹೇಗೊ ವಿಶಾಲ ಕರ್ನಾಟಕದ ರಚನೆಯಲ್ಲಿಯೂ ಅವರು ಮರೆಯಬಾರದ ಕೊಡುಗೆ ನೀಡಿದ್ದಾರೆ. ಆದರೆ ಅದೇ ವೇಳೆಗೆ, ತಾನು ಪ್ರೀತಿಯಿಂದ ಪ್ರತಿನಿಧೀಕರಿಸುತ್ತಿದ್ದ – ಜೀವಮಾನವಿಡೀ ದುಡಿದ ಕ್ಷೇತ್ರದ ಒಂದು ಭಾಗ (ಕಾಸರಗೋಡು) ವನ್ನು ರಾಜಕೀಯ ಚದುರಂಗದಾಟದ ದಾಳವಾಗಿ ಮಾಡಿ ಕೇರಳಕ್ಕೆ ಸೇರಿಸಿದ್ದು ಮಾತ್ರ ಚಿರಕಾಲ ಅವರ ಹೃದಯಕ್ಕೆ ಮಾಯದ ಗಾಯವನ್ನುಂಟು ಮಾಡಿತು.

ಭಾಷಾವಾರು ಪ್ರಾಂತರಚನೆಗಾಗಿ ಫಜಲ್ ಅಲಿ ಆಯೋಗ ರಚನೆಯಾದುದು ಕಾರಂತರಿಗೆ ತುಂಬ ಸಂತೋಷವನ್ನು ಉಂಟು ಮಾಡಿತು. ಇದು ದೇಶಾದ್ಯಂತದಿಂದ ಬಂದ ಒತ್ತಡದ ಫಲವಾಗಿತ್ತು. ಮಲಯಾಳಿಯಾದ ಸರ್ದಾರ್ ಪಣಿಕ್ಕರ್ ಅವರು ಆ ಆಯೋಗದ ಮೂವರು ಸದಸ್ಯರಲ್ಲಿ ಒಬ್ಬರಾಗಿದ್ದರು. ಕರ್ನಾಟಕದ ದಕ್ಷಿಣ ಭಾಗದಲ್ಲಿರುವ ಕಾಸರಗೋಡನ್ನು ಕೇರಳದವರು ಕಬಳಿಸಲು ಸಂಚು ಹೂಡಬಹುದು ಎಂಬುದನ್ನು ಆಗಲೇ ಕಾರಂತರ ಕಿವಿಗೆ ಯಾರೋ ಹಾಕಿದ್ದರು. ಆದರೆ ಕಾರಂತರು ಅದನ್ನು ನಂಬಲಿಲ್ಲ. "ಪಣಿಕ್ಕರ್ ಸೀದಾ ಮನುಷ್ಯ. ಸತ್ಯ ಪ್ರಾಮಾಣಿಕ. ಅಂತಹ ಮಹಾವ್ಯಕ್ತಿಯು ಈ ಕುತಂತ್ರ ಮಾಡಲಿಕ್ಕಿಲ್ಲ" ಎಂದು ಕಾರಂತರು ನುಡಿದಿದ್ದರು. ಇದರ ಬದಲು ಬಳ್ಳಾರಿಯ ಮೇಲೆ ಆಂಧ್ರದ ಕಣ್ಣಿದೆ ಎನ್ನುತ್ತಿದ್ದರಲ್ಲದೆ ಅದರ ಒಳಗುಟ್ಟನ್ನು ತಿಳಿದಿದ್ದವರು ಅವರಿಗೆ ಹೇಳುತ್ತಲೂ ಇದ್ದರು.

ಮುಂದೆ ಫಜಲ್ ಅಲಿ ಆಯೋಗವು ಮಂಗಳೂರಿಗೆ ಬಂದಾಗ ಫಜಲ್ ಅಲಿ ಮತ್ತು ಹೃದಯನಾಥ ಕುಂಜ್ರು ಬಂದಿರಲಿಲ್ಲ. ಸರ್ದಾರ್ ಪಣಿಕ್ಕರ್ ಒಬ್ಬರೇ ಬಂದಿದ್ದರು. ಕಾರಂತರಲ್ಲದೆ ಇನ್ನು ಕೆಲವರು ಆ ಆಯೋಗಕ್ಕೆ ಸಾಕ್ಷ್ಯ ನೀಡಿದ್ದರು. ಕಾಸರಗೋಡಿನ ಚಂದ್ರಗಿರಿ ನದಿಯ ಉತ್ತರಭಾಗವು ಕರ್ನಾಟಕಕ್ಕೆ ಸೇರುವುದು ನ್ಯಾಯಬದ್ಧವೆಂದು ಅವರು ಒಪ್ಪಿದರು.

ಆದರೆ ಹೇಳಿದ್ದು ಒಂದು; ಮಾಡಿದ್ದು ಇನ್ನೊಂದು. ರಾಜ್ಯ ಪುನರ್ ವಿಂಗಡಣಾ ವರದಿಯಂತೆ ಇಡೀ ಕಾಸರಗೋಡು ತಾಲುಕು ಕೇರಳಕ್ಕೆ ಸೇರಬೇಕು ಎಂದು ಶಿಫಾರಸು ಆಯಿತು. ಕನ್ನಡಿಗರು ಈ ವಿಷಯದಲ್ಲಿ ನ್ಯಾಯವನ್ನೇ ಬೇಡಿದ್ದರು. ೭೬೬ ಚದರ ಮೈಲು ವಿಸ್ತೀರ್ಣದ ಕಾಸರಗೋಡು ತಾಲೂಕು ಹಿಂದೆ ತುಳುನಾಡಿಗೆ ಸೇರಿದ್ದರೂ ಕೂಡ, ಈಗ ಪರಿಸ್ಥಿತಿ ಬದಲಾದುದರಿಂದ ಚಂದ್ರಗಿರಿ ಹೊಳೆಯ ಉತ್ತರ ಭಾಗದ ೨೭೪ ಚದರ ಮೈಲು ವಿಸ್ತೀರ್ಣದ ಭಾಗವನ್ನು ಮಾತ್ರ ಕೇಳಿದ್ದರು. ತಾಲೂಕಿನ ಒಟ್ಟು ಜನಸಂಖ್ಯೆ ೪,೧೧,೦೦೦ ದಲ್ಲಿ ೧,೯೧,೦೦೦ ಜನ ಈ ಪ್ರದೇಶದಲ್ಲಿದ್ದು ಅವರಲ್ಲಿ ಹೆಚ್ಚಿನವರ ಮನೆಮಾತು ತುಳು ಮತ್ತು ಕನ್ನಡ. ಈ ಪ್ರದೇಶ ೧೯೨೧ ರಿಂದಲೂ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್‌ನಲ್ಲೇ ಒಳಗೊಂಡಿತ್ತು. ಈ ಪ್ರದೇಶದ ೧೪೪ ಶಾಲೆಗಳಲ್ಲಿ ಕನ್ನಡ ಮಾಧ್ಯಮವಿದ್ದು, ಅವುಗಳಲ್ಲಿ ೧೯,೫೮೩ ಮಂದಿ ವಿದ್ಯಾರ್ಥಿಗಳಿದ್ದರು. ಮಲಯಾಳಂ ಮಾಧ್ಯಮ ಬರೇ ೨೦ ಶಾಲೆಗಳಿದ್ದು ೨,೮೬೩ ವಿದ್ಯಾರ್ಥಿಗಳಿದ್ದರು. ಕನ್ನಡದ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳಿದ್ದ ಮಂಜೇಶ್ವರವೂ ಕೇರಳಕ್ಕೆ ಹೋಗಲಿತ್ತು!

ಕಾರಂತರು ಈ ಅನ್ಯಾಯವನ್ನು ಕಂಡು ಕಿಡಿಕಿಡಿಯಾದರು. ಇಡೀ ಕಾಸರಗೋಡು ತಾಲೂಕು ಹೊತ್ತಿ ಉರಿಯಿತು. ಪ್ರತಿಭಟನೆಯ ಸರಮಾಲೆ ಆಯಿತು. ಕೂಡಲೇ ಕಾಸರಗೋಡಿನಲ್ಲಿ "ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿ" ಅಸ್ತಿತ್ವಕ್ಕೆ ಬಂತು. ಕಾರಂತರು ಹಲವಾರು ನಿಯೋಗಗಳನ್ನು (Deligations) ದೆಹಲಿಗೆ ಕರೆದುಕೊಂಡು ಹೋದರು. ಕೊನೆಗೆ ಆ ಮಸೂದೆಯನ್ನು ಪಾರ್ಲಿಮೆಂಟ್ ಪರಿಶೀಲನಾ ಸಮಿತಿಗೆ ಒಪ್ಪಿಸಲ್ಪಟ್ಟಾಗ ಅದಕ್ಕೆ ಸುದೀರ್ಘ ದಾಖಲೆಗಳನ್ನು ಸಲ್ಲಿಸಿದರು. ಕಾಸರಗೋಡು ತಾಲೂಕಿನ ೩೬ ಪಂಚಾಯಿತಿಗಳಲ್ಲಿ ೩೪, ಕಾಸರಗೋಡು ಕರ್ನಾಟಕಕ್ಕೇ ಸೇರಬೇಕೆಂದು ನಿರ್ಣಯ ಮಾಡಿದವು. ಆಗಿನ ಶಾಸನಸಭಾ ಸದಸ್ಯರು ಮದ್ರಾಸು ಶಾಸನ ಸಭೆಯಲ್ಲೂ, ಬೆನಗಲ್ ಶಿವರಾಯರು ಲೋಕಸಭೆಯಲ್ಲೂ ಈ ಮಸೂದೆಯನ್ನು ಪ್ರಬಲವಾಗಿ ವಿರೋಧಿಸಿದರು. ಕಾಮರಾಜರು ಗುಡಲೂರನ್ನು ಕೇರಳಕ್ಕೆ ಕೊಡಕೂಡದು ಎಂದು ಹಿಡಿದ ಹಠಕ್ಕಾಗಿ ಕೇರಳಕ್ಕೆ ಕಾಸರಗೋಡು ತಾಲೂಕನ್ನು ಕೊಡಲಾಯಿತಂತೆ. ಇದರ ಪರಿಣಾಮವಾಗಿ ಮಸೂದೆ ಬದಲಲಿಲ್ಲ. ಕೊನೆಗೆ ಶಿವರಾಯರು ಕಾಸರಗೋಡಿಗೆ ಆದ ಅನ್ಯಾಯವನ್ನು ಪ್ರತಿಭಟಿಸಿ ತಮ್ಮ ಲೋಕಸಭಾ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟರು. ಆದರೆ ಕಾರಂತರಿಗೆ ಕೊನೆಯತನಕವೂ ಕಾಸರಗೋಡು ಪ್ರಶ್ನೆ ಬಗೆಹರಿಯದ ಪ್ರಶ್ನೆಯಾಗಿಯೇ ಉಳಿದು ಬಿಟ್ಟಿತು.

ಈ ಸಂದರ್ಭದಲ್ಲಿ ಮಂಗಳೂರಿಗೆ ಆಗಮಿಸಿದ್ದ ಬೆನಗಲ್ ಶಿವರಾಯರು

ಕಾರಂತರನ್ನು ಭೇಟಿಯಾದರು ಮಾತ್ರವಲ್ಲ, ತಾನು ಅವರ ವಿರುದ್ಧ ಚುನಾವಣೆಗೆ ನಿಂತುದೇ ತಪ್ಪಾಯಿತೆಂದು ಒಪ್ಪಿಕೊಂಡರು! ಬಹುಶಃ ಶಿವರಾಯರ ಬದಲು ಕಾರಂತರು ಲೋಕಸಭಾ ಸದಸ್ಯರಾಗಿದ್ದಿದ್ದರೆ ಕಾಸರಗೋಡು ಕರ್ನಾಟಕಕ್ಕೇ ಸೇರಿಬಿಡುತ್ತಿತ್ತೇನೋ!

ಕಾಸರಗೋಡನ್ನು ಕರ್ನಾಟಕದಲ್ಲಿ ವಿಲೀನ ಮಾಡಲು ಕಾರಂತರು ಒಂದೇ ಸಮನೆ ಪ್ರಯತ್ನಿಸುತ್ತಿದ್ದರು. ತಮ್ಮ ಸಹವರ್ತಿಗಳಾಗಿದ್ದ ಮತ್ತು ೧೯೬೦–೬೭ ರ ಅವಧಿಯಲ್ಲಿ ಕೇರಳದ ಗವರ್ನರ್ ಆಗಿದ್ದ ವಿ.ವಿ.ಗಿರಿ, ರಾಮಕೃಷ್ಣ ರಾವ್, ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ನೀಲಂ ಸಂಜೀವರೆಡ್ಡಿ ಮುಂತಾದವರೊಡನೆ ಕಾಸರಗೋಡಿನ ಪ್ರಶ್ನೆ ಬಿಡಿಸಲು ಪದೇ ಪದೇ ಯತ್ನಿಸುತ್ತಿದ್ದರು. ಕೇರಳದ ಚುನಾವಣೆಯ ಸಮಯದಲ್ಲಿ ಕಾಸರಗೋಡು ಕ್ಷೇತ್ರದಲ್ಲಿ ಕರ್ನಾಟಕ ಪ್ರಾಂತೀಕರಣ ಸಮಿತಿಯ ಪರವಾಗಿ ಸಂಚಾರ ಕೈಗೊಂಡಿದ್ದರು.

ಸಮಿತಿಯ ಶಾಸನಸಭಾ ಸದಸ್ಯ ಕಳ್ಳಿಗೆ ಮಹಾಬಲ ಭಂಡಾರಿ, ಕೇರಳದ ಮುಖ್ಯಮಂತ್ರಿ ಪಟ್ಟಂ ಥಾನು ಪಿಳ್ಳೆ, ಕಾನೂನು ಮಂತ್ರಿ ಚಂದ್ರ ಶೇಖರನ್ ಮುಂತಾದವರೊಡನೆ ಆಗಾಗ ಪತ್ರ ವ್ಯವಹಾರ ಮಾಡುತ್ತಿದ್ದರಲ್ಲದೆ ಕಾಸರಗೋಡಿನ ಕನ್ನಡಿಗರ ಚಳವಳಿಕ್ಕೆ ನಿರ್ದೇಶನವನ್ನೂ ನೀಡುತ್ತಿದ್ದರು. ದೆಹಲಿಯಲ್ಲಿ ಪಾರ್ಲಿಮೆಂಟ್ ಸದಸ್ಯರಾಗಿದ್ದ ಬೆನಗಲ್ ಶಿವರಾಯರೂ, ಎಚ್. ವಿ. ಕಾಮತರೂ, ಕೆ. ಆರ್. ಆಚಾರ್ ಮುಂತಾದವರು ಈ ಕುರಿತು ಆಗಿನ ಗೃಹಮಂತ್ರಿ ಗೋವಿಂದ ವಲ್ಲಭ ಪಂತ್ ಮುಂತಾದವರೊಡನೆ ಈ ಸಮಸ್ಯೆಯ ಕುರಿತು ವ್ಯವಹರಿಸುವಂತೆ ಪ್ರಚೋದನೆ ನೀಡುತ್ತಿದ್ದರಲ್ಲದೆ ತಾವೂ ಅಲ್ಲಿಗೆ ಆಗಾಗ ಹೋಗುತ್ತಿದ್ದರು.

ಕಾಸರಗೋಡು ಮತ್ತು ಪುತ್ತೂರು ಭಾಗ (ಕಾರಂತರು ಪ್ರತಿನಿಧಿಸುತ್ತಿದ್ದ ಪ್ರದೇಶ) ಕಾರಂತರ ಮನೆಯಂತೆಯೇ ಆಗಿತ್ತು. ಕಾಸರಗೋಡನ್ನು ಹೊರತು ಪಡಿಸಿ ಅವರ ಜೀವನ ಇರಲಿಲ್ಲ. ಆ ಭಾಗದ ಅಡಿಕೆ ಬೆಳೆಗಾರರ ಕಷ್ಟ ಪರಿಹರಿಸುವಲ್ಲಿಂದ ತೊಡಗಿ ಅನಂತರದ ಮೂವತ್ತು ವರ್ಷಗಳಲ್ಲಿ ಅವರ ಜೀವ ಕಾಸರಗೋಡಿನದೇ ಆಗಿಬಿಟ್ಟಿತು. ಕೇರಳಕ್ಕೆ ಸೇರಿದ ಕಾಸರಗೋಡಿನ ಬವಣೆ ನೀಗಿಸುವುದು ತನ್ನ ಆದ್ಯ ಕರ್ತವ್ಯವೆಂದೇ ಅವರು ಭಾವಿಸಿದ್ದರು.

೧೯೬೭ ರಲ್ಲಿ ಕೇರಳದಲ್ಲಿ ವಿಧಾನಸಭಾ ಚುನಾವಣೆ ನಡೆದಾಗ ಕಾಸರಗೋಡಿನ ಲೋಕಸಭಾ ಮತಕ್ಷೇತ್ರಕ್ಕೆ ಕಾರಂತರೇ ನಿಲ್ಲಬೇಕೆಂದು ಕೇರಳದ ಪಿ.ಎಸ್.ಪಿ. ಪಕ್ಷ ಒತ್ತಾಯಪಡಿಸಿತು. ಆಗ ಪಿ.ಎಸ್.ಪಿ.ಯ ಅಲ್ಪ ಸಂಖ್ಯಾತ ಸರ್ಕಾರ ಕೇರಳದಲ್ಲಿತ್ತು. ಪಿ.ಎಸ್.ಪಿ.ಯ ಕಾನೂನು ಮಂತ್ರಿ ಚಂದ್ರಶೇಖರನ್ ಹಿಂದಿನಿಂದಲೂ ಕಾರಂತರ

ನಿಕಟವರ್ತಿಯಾಗಿದ್ದವರು. ಕಾಸರಗೋಡಿನ ಕನ್ನಡಿಗರ ಬವಣೆಗೆ ಇದರಿಂದ ಸ್ವಲ್ಪ ಪರಿಹಾರ ದೊರೆಯಬಹುದೆಂದು ಅರವತ್ತೆಂಟು ವರ್ಷ ಪ್ರಾಯದ ಕಾರಂತರು ಇದಕ್ಕೆ ಒಪ್ಪಿ ಚುನಾವಣಾ ಕಣಕ್ಕೆ ಧುಮುಕಿದರು. ಅವ್ಯಾಹತವಾಗಿ ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ಪ್ರಚಾರ ಕಾರ್ಯ ನಡೆಯಿತು. ತಮ್ಮ ಅನಾರೋಗ್ಯದ ಪರಿವೆಯೂ ಇಲ್ಲದೆ ಕಾರಂತರು ತಮ್ಮ ಸ್ವಂತ ಕಾರನ್ನು ಸ್ವತಃ ನಡೆಸುತ್ತಲೇ ಸಂಚರಿಸಿದರು. ಚುನಾವಣೆಯ ದಿನವಂತೂ ಕ್ಷೇತ್ರದ ಉದ್ದಗಲ ಸ್ವತಃ ತಮ್ಮ ಕಾರನ್ನು ಚಲಾಯಿಸಿ ನೋಡಿ ಬಂದರು. ಎದುರಾಳಿ ಕಮ್ಯೂನಿಸ್ಟ್ ಪಕ್ಷದ ಗೋಪಾಲನ್ ಎಲ್ಲೂ ಕಂಡುಬರಲಿಲ್ಲ. ಈ ಕ್ಷೇತ್ರದಲ್ಲಿ ಒಂದು ನಿರ್ಣಾಯಕ ಮತದಾರರ ಗುಂಪು ಮುಸ್ಲಿಮರದು. ಮುಸ್ಲಿಂ ಲೀಗ್ ಯಾವ ಕಡೆ ಮತ ಹಾಕುತ್ತದೆಂಬುದು ಕೊನೆಯವರೆಗೂ ಗೊತ್ತಾಗಲಿಲ್ಲ. ಅವರು ಕಾಸರಗೋಡು ಕೇರಳದಲ್ಲಿ ಉಳಿಯಲಿ ಎಂದು ಬಲವಾಗಿ ಪ್ರತಿಪಾದಿಸುತ್ತಿದ್ದರು. ಈ ಮುಸ್ಲಿಮರ ಭಾಷೆ ಬ್ಯಾರಿ. ಬ್ಯಾರಿ ಭಾಷೆ ಮಲಯಾಳಂಗೆ ಹತ್ತಿರವಾಗಿದೆ ಎಂಬುದು ಅವರ ಭಾವನೆಯಾಗಿತ್ತು. (ಮಾಪಿಳ್ಳ ಎಂದು ಕರೆಯಲ್ಪಡುವ ಈ ಜನರ ಭಾಷೆ, ಕೇರಳಕ್ಕೆ ಸೇರಿದ್ದರಿಂದ ಇವತ್ತು ಪೂರ್ತಿ ಕಲಸುಮೇಲೋಗರವಾಗಿ ಅತ್ತ ಮಲಯಾಳಂ ಆಗದೆ; ಇತ್ತ ಬ್ಯಾರಿ ಭಾಷೆಯೂ ಆಗಿ ಉಳಿಯದೆ ಬೇರೆಯೇ ಒಂದು ಭಾಷೆಯಾಗಿದೆ!) ಕಮ್ಯೂನಿಸ್ಟ್ ಅಭ್ಯರ್ಥಿಯಾದರೂ ಅಡ್ಡಿಯಿಲ್ಲ. ಕನ್ನಡಿಗ ಬೇಡ ಎಂಬ ನಿರ್ಧಾರಕ್ಕೆ ಬಂದ ಮುಸ್ಲಿಮರು ಸಾರಾಸಗಟಾಗಿ ಕಮ್ಯೂನಿಸ್ಟ್ ಅಭ್ಯರ್ಥಿ ಗೋಪಾಲನ್‌ಗೆ ಮತ ಹಾಕಿ ಕಾರಂತರ ಸೋಲಿಗೆ ಕಾರಣರಾದರು. ಆದರೆ ಈ ಸೋಲಿನಿಂದ ಕಾರಂತರು ಎದೆಗುಂದಲಿಲ್ಲ.

ಕಾಸರಗೋಡು ಸಮಸ್ಯೆಯ ಪರಿಹಾರದ ಬಗ್ಗೆ ಅವರು ಎಲ್ಲ ಹಿರಿಯ ನಾಯಕರಗೂ ಪತ್ರಗಳನ್ನು ಬರೆಯುತ್ತಿದ್ದರು. ಸಂಜೀವರೆಡ್ಡಿ, ಮೊರಾರ್ಜಿ ದೇಸಾಯಿ, ಚಂದ್ರಶೇಖರ್, ಕೆ.ಎಸ್. ಹೆಗ್ಡೆ. ಟಿ.ಎ. ಪೈ ಮುಂತಾದವರಿಗೆ ಕಾಸರಗೋಡು ಸಮಸ್ಯೆಯನ್ನು ಮುಗಿಸಲು ಅವರು ಬರೆದ ಪತ್ರಗಳಿಗೆ ಲೆಕ್ಕವಿಲ್ಲ. ಜನತಾ ಪಕ್ಷ ಸರಕಾರದ ಆಳ್ವಿಕೆಯ ಸಂದರ್ಭದಲ್ಲಿ ಈ ಸಮಸ್ಯೆ ಬಗೆಹರಿಯಬಹುದೆಂಬ ಆಶಾಭಾವನೆ ಅವರಲ್ಲಿತ್ತು. ಕಾಸರಗೋಡಿನ ಬಗ್ಗೆ ಮಾತಾಡುತ್ತ "ಕರ್ನಾಟಕದ ಒಂದು ಪಾದ ಊನವಾದಂತಾಯಿತು" ಎಂದೇ ಅವರು ದುಃಖಪಡುತ್ತಿದ್ದರು.

ಕಾಸರಗೋಡಿನ ಸಮಸ್ಯೆ ಬಗೆಹರಿಸಲು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶ ಮೆಹರ್ ಚಂದ್ ಮಹಾಜನ್ ಅವರ ಏಕಸದಸ್ಯ ಆಯೋಗವನ್ನು ಕೇಂದ್ರ ಸರ್ಕಾರ ನೇಮಿಸಿತು. ಆಯೋಗದ ಮುಂದೆ ಎಲ್ಲ ಸಾಕ್ಷ್ಯಾಧಾರಗಳೊಂದಿಗೆ ಕೆ. ಆರ್. ಕಾರಂತರು ವಾದಿಸಿದರು. ಅದಕ್ಕಾಗಿ ಅವರು ಏನೂ ಪ್ರತಿಫಲ

ಪಡೆಯಲಿಲ್ಲ. ಕಾಸರಗೋಡಿನ ಜನರಿಗಾಗಿ ಈ ನನ್ನ ಸೇವೆ ಮುಡಿಪು ಎಂದು ಅವರೆಂದರು. ಕಾರಂತರ ಸಾಧನೆಯ ಫಲವಾಗಿ ಮಹಾಜನ ವರದಿ ಕಾಸರಗೋಡಿನ ಜನತೆಯ ಪರವಾಗಿ ೧೯೬೭ ರಲ್ಲಿ ಪ್ರಕಟವಾಯಿತು. ಅದನ್ನು ಜಾರಿಗೊಳಿಸುವಂತೆ ಸಂಬಂಧಪಟ್ಟ ಎಲ್ಲ ರಾಜಕೀಯ ಮುಖಂಡರನ್ನೂ ಪತ್ರ ವ್ಯವಹಾರದಿಂದಲೂ ಮುಖತಃ ಭೇಟಿಯ ಮೂಲಕವೂ ನಿರಂತರ ಒತ್ತಾಯಿಸುತ್ತಲೇ ಬಂದರು.

ಕಾಸರಗೋಡು ಸಮಸ್ಯೆ ಎದುರಾದುದು ಭಾಷಾವಾರು ಪ್ರಾಂತ ರಚನೆಯಾದ ಬಳಿಕ; ಅಂದರೆ ಅನ್ಯಾಯವಾಗಿ ಕಾಸರಗೋಡು ಕೇರಳಕ್ಕೆ ಸೇರಿಸಲ್ಪಟ್ಟುದು ಮತ್ತು ಅದು ತಾನು ಪ್ರತಿನಿಧಿಸುವ ಕ್ಷೇತ್ರ ಎಂಬುದು ಅವರಿಗೆ ಅತೀವ ನೋವು ಕೊಟ್ಟ ಸಂಗತಿ.

ಇದಕ್ಕೆ ಮುನ್ನ, ವಿಶಾಲ ಕರ್ನಾಟಕ ರಚನೆಗೆ ಕಾರಂತರು ತುಂಬ ಶ್ರಮಿಸಿದರು. ಕರ್ನಾಟಕ ಏಕೀಕರಣಕ್ಕಾಗಿ ಕರ್ನಾಟಕದಾದ್ಯಂತ ಸಂಚರಿಸಿ ಜನಜಾಗೃತಿ ಮೂಡಿಸಿದರು.

ಕಾರಂತರಿಗೆ ಎರಡು ಆದರ್ಶಗಳಿದ್ದವು: ಸ್ವತಂತ್ರ ಭಾರತ ಹಾಗೂ ಏಕತಂತ್ರ ಕರ್ನಾಟಕ. ಹರಿದು ಹಂಚಿ ಹೋಗಿದ್ದ ಕನ್ನಡ ನಾಡನ್ನು ಒಂದುಗೂಡಿಸಲು ಅವರು ಪಟ್ಟ ಶ್ರಮ ಅನುಪಮ. ಜಿನರಾಜ ಹೆಗ್ಗಡೆ ಅವರೊಡನೆ ಕರ್ನಾಟಕದಾದ್ಯಂತ ಸಂಚರಿಸಿ ಕರ್ನಾಟಕ ಏಕೀಕರಣಕ್ಕೆ ತಕ್ಕ ವಾತಾವರಣ ನಿರ್ಮಿಸಿದರು. ಹಲವು ಅಡ್ಡಿ ಆತಂಕ ಇದ್ದರೂ ಕಾರಂತರು ಎದೆ ಗುಂದಲಿಲ್ಲ. ಏಕಚಿತ್ತದಿಂದ ಪ್ರಯತ್ನ ಸಾಗಿಸಿದರು.

ಕಾರಂತರ ಅಧ್ಯಕ್ಷತೆಯಲ್ಲಿ 'ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು' ರಚನೆಯಾಯಿತು. ಲೋಕಸಭಾ ಸದಸ್ಯ ಶಿವಮೂರ್ತಿ ಸ್ವಾಮಿ ಅಳವಂಡಿ, ವಿಧಾನ ಸಭಾ ಸದಸ್ಯ ಶಾಂತವೇರಿ ಗೋಪಾಲಗೌಡ, ಹಾವೇರಿಯ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೊಸಮನಿ ಸಿದ್ದಪ್ಪ, ಬಳ್ಳಾರಿಯ ನ್ಯಾಯವಾದಿ ಸತ್ಯವಂತ ರಾವ್, ಬೆಳಗಾವಿಯ ಚೆನ್ನಪ್ಪ ವಾಲಿ, ರಾಮದುರ್ಗದ ಮಹದೇವಪ್ಪ ಪಟ್ಟಣ, ಬಿಜಾಪುರದ ಮಹದೇವಪ್ಪ ಮುರಗೋಡ, ಹುಬ್ಬಳ್ಳಿಯ ಶಾಂತಿನಾಥ ಇಂಗಳೆ ಮತ್ತು ಬೆಂಕಿಸ್ವಾಮಿ, ಕಮ್ಯೂನಿಸ್ಟ್ ಪಕ್ಷದ ಉಪಾಧ್ಯಾಯ ಸಹೋದರರು, ಎ.ಜೆ. ಮುಧೋಳ, ಧಾರವಾಡಕರ್ ಮೊದಲಾದ ನೂರಾರು ಕಾರ್ಯಕರ್ತರು ಆ ಪರಿಷತ್ತಿನ ನೇತೃತ್ವದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಹೋರಾಟಕ್ಕೆ ಇಳಿದರು. ನಿಜಲಿಂಗಪ್ಪನವರು ಕಾಂಗ್ರೆಸ್ ಪಕ್ಷದ ಒಳಗಿದ್ದುಕೊಂಡು ಕರ್ನಾಟಕ ಏಕೀಕರಣಕ್ಕೆ ಹೋರಾಡಿದರೆ ಕಾರಂತರು ಹೊರಗಿದ್ದುಕೊಂಡು ಹೋರಾಡಿದರು.

ಗುರುಪುರದಲ್ಲಿ ಜರಗಿದ ಕರ್ನಾಟಕ ಏಕೀಕರಣ ಸಮ್ಮೇಳನದ ಪ್ರಮುಖ ನಾಯಕರು ಕಾರಂತರು. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರರು ಅದರ ಅಧ್ಯಕ್ಷರು.  ಆ ಸಮ್ಮೇಳನವನ್ನು ಜೆ.ಬಿ. ಕೃಪಲಾನಿಯವರು ಉದ್ಘಾಟಿಸಿದರು.

ಮಾರನೆಯ ವರ್ಷ ಅಂದರೆ ೧೯೫೩ ರಲ್ಲಿ ಕಾರಂತರು ಅಂತಹ ಇನ್ನೊಂದು ಬೃಹತ್ ಸಮ್ಮೇಳನವನ್ನು ಕಾಸರಗೋಡಿನಲ್ಲಿ ಏರ್ಪಡಿಸಿದರು.  ಮದ್ರಾಸ್ ಸಂಸ್ಥಾನದ ನಿಕಟಪೂರ್ವ ಮಂತ್ರಿ ಮಹಮ್ಮದ್ ಇಮಾಮ್ ಅದರ ಅಧ್ಯಕ್ಷರಾಗಿದ್ದರು. ಮಾಸ್ತಿಯವರು ಸಮ್ಮೇಳನವನ್ನು ಉದ್ಘಾಟಿಸಿದ್ದರು.

ಈ ಎಲ್ಲ ಜನಜಾಗೃತಿಯ ಹಿಂದಿನ ಉದ್ದೇಶ ವಿಶಾಲ ಕರ್ನಾಟಕ ರಚನೆಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದೇ ಆಗಿತ್ತು. ಕಾರಂತರ ಪ್ರಯತ್ನದ ಫಲವಾಗಿ – ಅಲ್ಲಲ್ಲಿ ಕೆಲವೊಂದು ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿದ್ದರೂ – ಮದ್ರಾಸು, ಮುಂಬಯಿ ಹೈದರಾಬಾದ್, ಮೈಸೂರು – ಹೀಗೆ ಬೇರೆಬೇರೆ ರಾಜ್ಯಗಳಲ್ಲಿ ಛಿದ್ರಛಿದ್ರವಾಗಿ ಹೋಗಿದ್ದ ಕರ್ನಾಟಕವನ್ನು ಒಂದುಗೂಡಿಸಲು ಸಾಧ್ಯವಾಯಿತು. ಈ ಹೋರಾಟದಲ್ಲಿ ಕಾರಂತರಿಗೆ ನಿಜಲಿಂಗಪ್ಪ, ಆರ್.ಆರ್. ದಿವಾಕರ್, ದೊಡ್ಡಮೇಟಿ ಮೊದಲಾದ ಹಿರಿಯ ಮುಂದಾಳುಗಳಲ್ಲದೆ ಕೆ. ಆರ್. ಆಚಾರ್. ನಾರಾಯಣ ಕಿಲ್ಲೆ, ಕೆ.ಕೆ. ಶೆಟ್ಟಿ ಮೊದಲಾದ ಕಿರಿಯ ಮುಂದಾಳುಗಳೂ ಬೆಂಬಲವಾಗಿ ನಿಂತರು. ಈ ಎಲ್ಲರ ಪ್ರಯತ್ನದಿಂದ ೧೯೫೬ ರ ನವೆಂಬರ್ ೧ ರಂದು ವಿಶಾಲ ಕರ್ನಾಟಕ ರಚನೆ ಆಯಿತು.

ಆದರೆ ಕಾಸರಗೋಡು, ಅಕ್ಕಲಕೋಟೆ, ಶೋಲಾಪುರ, ನೀಲಗಿರಿ ಮೊದಲಾದ ಅಚ್ಚ ಕನ್ನಡ ಪ್ರದೇಶಗಳು ಕರ್ನಾಟಕದ ಹೊರಗುಳಿದವು. 'ಸಂತೋಷ ಬರುವಾಗ ತಾನಾಗಿ ಬರುವುದಿಲ್ಲ.  ಅದು ತನ್ನೊಂದಿಗೆ ಒಂದು ದುಃಖದ ಮೊಟ್ಟೆಯನ್ನು ತಂದಿರುತ್ತದೆ' ಎಂಬ ಮಾತು ನಿಜವಾಯಿತು!

■

## ೧೦. ಬರೆಹಗಾರ ಕಾರಂತ

ತನ್ನ ರಾಜಕೀಯ ವಿಚಾರಧಾರೆಯನ್ನು ಪ್ರಸ್ತುತ ಪಡಿಸಲು ಕಾರಂತರು 'ವಿಚಾರವಾಣಿ' ಎಂಬ ವಾರಪತ್ರಿಕೆ ಆರಂಭಿಸಿದ್ದನ್ನು ಮತ್ತು ಅದಕ್ಕಾಗಿ ಲೇಖನಗಳನ್ನು ಬರೆಯುತ್ತಿದ್ದುದನ್ನು ಹಿಂದೆಯೇ ಗಮನಿಸಿದ್ದೇವೆ. ಕೆ.ಆರ್. ಕಾರಂತರು ವಕೀಲಿ ಮತ್ತು ರಾಜಕೀಯ ರಂಗಗಳನ್ನು ಪ್ರವೇಶ ಮಾಡದೆ ಇರುತ್ತಿದ್ದರೆ ಅವರೊಬ್ಬ ಅತ್ಯುತ್ತಮ ಸಾಹಿತಿಯಾಗಿ ಮೂಡಿಬರುತ್ತಿದ್ದರೇನೋ! ಆದರೆ ಆ ಸೌಭಾಗ್ಯ ಅವರ ತಮ್ಮ ಶಿವರಾಮ ಕಾರಂತರಿಗೆ ಒದಗಿ ಬಂತು.

ಇಷ್ಟಾಗಿಯೂ ಕೆ. ಆರ್. ಕಾರಂತರ ಬರೆವಣಿಗೆಯನ್ನು ನಗಣ್ಯ ಎಂದು ತಳ್ಳಿಹಾಕುವಂತಿಲ್ಲ.

ವಿಚಾರವಾಣಿಯಲ್ಲಿ ಬರೆಯುತ್ತಿದ್ದ ಸಂಪಾದಕೀಯಗಳು, ಆ ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಇತರೇ ಲೇಖನಗಳು, ಅವರ 'ಪ್ರವಾಸಿಯ ಪತ್ರಗಳು' ಎಂಬ ಕೃತಿ, ಅವರೇ ಬರೆಯಲು ಯತ್ನಿಸಿದ ಅಪ್ರಕಟಿತ ಆತ್ಮಕಥೆ, 'ಟಿ. ಪ್ರಕಾಶಂ ಸ್ಮರಣ ಸಂಚಿಕೆ'ಗೆ (ಹೈದರಾಬಾದ್) ಅವರು ಬರೆದ ಲೇಖನ – ಇವುಗಳೆಲ್ಲ ಕೆ. ಆರ್. ಕಾರಂತರ ನಿಶಿತಮತಿ, ವಿಶಾಲವಾದ ಓದು, ಲೋಕಜ್ಞಾನ, ಅನುಭವ, ಪ್ರತಿಭೆ, ವ್ಯುತ್ಪತ್ತಿಶಕ್ತಿ ಮತ್ತು ವಿಷಯ ಪ್ರತಿಪಾದನ ಕಲೆಗೆ ಸಾಕ್ಷಿಯಾಗಿವೆ. ಅವರೊಬ್ಬ ಬಹುಶ್ರುತ ವ್ಯಕ್ತಿಯಾಗಿದ್ದರು. ಲೇಖನಕಲೆಯನ್ನು ತನ್ನ ವಾದಗಳ ಸಮರ್ಥನೆಗಾಗಿ ಬಳಸಿಕೊಂಡರು ಎಂಬುದು ತಿಳಿದು ಬರುತ್ತದೆ.

ಕಾರಂತರು ಇಡೀ ಭಾರತವನ್ನು ಸುತ್ತಿದರಷ್ಟೆ ಅಲ್ಲ, ಒಂದು ವಾರ ಕಾಲ ಸಿಂಹಳ ದ್ವೀಪದಲ್ಲಿ ಓಡಾಡಿದರು. ೧೯೫೧ ರಲ್ಲಿ, ತನ್ನ ೫೬ ನೇ ವರ್ಷ ವಯಸ್ಸಿನಲ್ಲಿ ಯೂರೋಪ್ ಖಂಡದ ಪ್ರವಾಸ ಮಾಡಿದ ಕಥನಾಮೃತವನ್ನು 'ಪ್ರವಾಸಿಯ ಪತ್ರಗಳು' ಎಂಬ ಕೃತಿಯಲ್ಲಿ ನೀಡಿದ್ದಾರೆ.

ತನ್ನೊಳಗೊಬ್ಬ ಬರೆಹಗಾರನಿದ್ದ ಎಂಬ ಅಂಶವನ್ನು ಅವರೆಲ್ಲೂ ಬಹಿರಂಗಪಡಿಸುವುದಿಲ್ಲ. ಮುನ್ನುಡಿಯಲ್ಲಿ ಅವರು ಬರೆದುಕೊಳ್ಳುವುದು ಹೀಗೆ: 'ನಾನು ಗ್ರಂಥಕರ್ತನಾಗುವುದಂತಿರಲಿ, ಒಬ್ಬ ಬರಹಗಾರನೂ ಕೂಡಾ ಆಗಿಲ್ಲ.

ನನ್ನ ಜೀವನದ ಉತ್ಕೃಷ್ಟ ಭಾಗವು ಕಾನೂನಿನ ಶುಷ್ಕವಾದ ಕ್ಷೇತ್ರದಲ್ಲೋ, ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ರಾಜಕೀಯದ ಕೆಸರು ನೀರಲ್ಲೋ ಕಳೆದುಹೋಗಿದೆ. ಈ ಪತ್ರಸಂಗ್ರಹ ಗ್ರಂಥಕರ್ತೃತ್ವದ ನನ್ನ ಒಂದು ಪ್ರಯತ್ನ ಮಾತ್ರವಾಗಿದೆ. ಈ ಪತ್ರಗಳು ಮೊದಲಬಾರಿ ಪ್ರಕಟವಾದಾಗ ಇವುಗಳು ಚೆನ್ನಾಗಿವೆಯೆಂದೂ ಇವು ಪುಸ್ತಕ ರೂಪದಲ್ಲಿ ಪ್ರಕಟವಾಗಲು ಅರ್ಹವಾಗಿವೆಯೆಂದೂ ಹೇಳಿದ ನನ್ನ ಗೆಳೆಯರ ಮೆಚ್ಚಿಕೆಯ ಮಾತುಗಳು, ಈ ಪುಸ್ತಕದ ಪ್ರಕಟಣೆಗೆ ಹುರಿದುಂಬಿಸಿದವು. ನನಗಾದರೋ ಈ ಪ್ರವಾಸವೇ ಅತೀ ಆನಂದದಾಯಕ ವಾಯಿತಲ್ಲದೆ, ಅದು ನನ್ನ ಮನಸ್ಸನ್ನು ಜಾಗೃತಗೊಳಿಸಿ ನನ್ನ ಜೀವನದೃಷ್ಟಿಯನ್ನು ವಿಕಸಿತಗೊಳಿಸಿತು.

ಕಾರಂತರಿಗೆ, ಪ್ರವಾಸದಿಂದಾಗಿ ಆಗುವ ವೈಯಕ್ತಿಕ ಲಾಭ ಮುಖ್ಯವೇ ಹೊರತು ಈ ಕೃತಿಪ್ರಕಟಣೆಯಿಂದ ಆಗಬಹುದಾದ ಲಾಭಗಳು ಅಮುಖ್ಯವಾಗಿದ್ದವು. ಕಾರಂತರು ಬರೆಯುತ್ತಾರೆ: "ನಾನು ತರುಣನಾಗಿದ್ದಾಗ ೧೯೨೧ ರಲ್ಲಿ ಪಂಜಾಬಿನಲ್ಲಿ ಸಂಚರಿಸಿದ್ದೆ. ಆಗ ಅದು ಮತ್ತೆ ಮಣ್ಣಿನ ಮಡಕೆಯಂತೆ ಒಡೆದುಹೋಗುವು ದೆಂಬುದನ್ನು ಕನಸಿನಲ್ಲಿ ಕೂಡ ನೆನೆಯುವುದು ಅಸಾಧ್ಯವಾಗಿತ್ತು. (೧೯೪೭ ರ ಆಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಭಾರತ ಒಡೆಯಲ್ಪಟ್ಟು ಪಾಕಿಸ್ತಾನ ನಿರ್ಮಾಣಗೊಂಡಿತು. ಪಂಜಾಬ್ ಕತ್ತರಿಸಲ್ಪಟ್ಟು ಪಶ್ಚಿಮದಲ್ಲಿದ್ದ ಒಂದು ಭಾಗ ಪಾಕಿಸ್ತಾನಕ್ಕೆ ಹೋಯಿತು. ಕಾರಂತರು ಉಲ್ಲೇಖಿಸಿದ ಹಲವು ಸ್ಥಳಗಳು ಈಗ ಪಾಕಿಸ್ತಾನದಲ್ಲಿವೆ). ಅಮೃತಸರದ ಜಲಿಯನ್ ವಾಲಾಬಾಗ್‌ನ ಹತ್ಯಾಕಾಂಡ ನಡೆದು ಆಗ ಒಂದೆರಡು ವರ್ಷಗಳಾಗಿದ್ದವಷ್ಟೆ. ಅಲ್ಲಿನ ಸಿಖ್ಖರ ಸುವರ್ಣ ದೇವಾಲಯವು ಪ್ರೇಕ್ಷಣೀಯವಾಗಿದೆ. ಅದೇ ರೀತಿ ವಿಶಾಲ ರಸ್ತೆ ಮತ್ತು ಕಟ್ಟಡಗಳುಳ್ಳ ಲಾಹೋರ್ ಮಹಾನಗರವೂ ನೋಡತಕ್ಕುದಾಗಿದೆ. ಝೀಲಂ ನದಿಯ ದಂಡೆಯಲ್ಲಿರುವ ಝೀಲಂ ಪಟ್ಟಣವು ಮನೋಹರವಾದುದು. ಆ ನದಿಯ ಪ್ರಶಾಂತ ನೀರಿನ ಮೇಲೆ ನಾವು ದೋಣಿಯಲ್ಲಿ ವಿಹಾರ ಮಾಡಿದಾಗ ನಮ್ಮ ಜತೆಯಲ್ಲಿದ್ದ ಹೆಂಗಸರು ಸುಂದರವಾದ ಹಿಂದಿ ಪದ್ಯಗಳನ್ನು ಹಾಡಿದ ಆ ಸಂಧ್ಯಾಕಾಲವು ಇಂದೂ ನನ್ನ ನೆನಪಿನಲ್ಲಿದೆ. ಫಿರೋಜ್‌ಪುರ, ಹಿಸ್ಸಾರ್, ರಾವಲ್‌ಪಿಂಡಿ ಮುಂತಾದ ಪಂಜಾಬ್‌ನ ನಗರಗಳ ಮಧುರ ಹಾಗೂ ವೇದನಾಮಯ ನೆನಪುಗಳು ನನಗಿವೆ. ಈ ಕರುಣಾಶೀಲ ಜನರ ಆತಿಥ್ಯವು ಮಧುರವಾಗಿತ್ತು. ಹಾಗೆಯೇ ಈ ಪಂಚನದಿಗಳ ನಾಡು ತುಂಡರಿಸಲ್ಪಟ್ಟುದು ವೇದನಾಮಯವೆನ್ನದೆ ವಿಧಿಯಿಲ್ಲ".

ಕಾರಂತರು ರಾಜಕೀಯ ಕ್ಷೇತ್ರದಲ್ಲಿದ್ದುದರಿಂದ ವ್ಯಾಪಕ ಪ್ರವಾಸ ಮಾಡಿದರು.

ಕೋಶ ಓದುವುದಕ್ಕಿಂತ ದೇಶ ಸುತ್ತು ಎಂಬ ಗಾದೆಯಂತೆ, ಪ್ರವಾಸದಿಂದಾಗಿ ಕಾರಂತರು ಅಗಾಧ ಜ್ಞಾನ ಸಂಪಾದಿಸಿಕೊಂಡರು. ಅವರ ದೃಷ್ಟಿ ಧೋರಣೆಯಲ್ಲಿ ವ್ಯತ್ಯಾಸ ಕಾಣಿಸಿಕೊಂಡಿತು. ಜನರಿಗೆ ಮೂಲಭೂತ ಸೌಕರ್ಯಗಳನ್ನೊದಗಿಸಿ ಅವರ ಜೀವನಮಟ್ಟ ಸುಧಾರಿಸಿದ್ದಲ್ಲದೆ ಬೇರೆ ದೇಶಗಳ ಜೊತೆಜೊತೆಗೆ ತಲೆಯೆತ್ತಿ ನಡೆಯಲು ನಮಗೆ ಸಾಧ್ಯವಿಲ್ಲ ಎಂಬ ಮಾತನ್ನು ಅವರು ಹೇಳಿದರು.

"ಪುರಾತನ ಅವಶೇಷಗಳನ್ನೊಳಗೊಂಡಿರುವ ದೆಹಲಿ, ಆಗ್ರಾಗಳನ್ನು ಆಗಲೂ ಆ ಬಳಿಕವೂ ನಾನು ನೋಡಿದ್ದೇನೆ. ತನ್ಮಧ್ಯೆ ಡೆಹ್ರಾಡೂನ್ ಮತ್ತು ಮಸ್ಸೂರಿಗಳನ್ನು ನೋಡಿದ್ದೆ.

ಕರ್ನಾಟಕ ಏಕೀಕರಣದ ಕುರಿತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯನ್ನು ಪ್ರತಿನಿಧೀಕರಿಸಲು ಶಿಷ್ಟಮಂಡಲವೊಂದರಲ್ಲಿ ನಾನು ಡೆಹ್ರಾಡೂನ್‌ಗೆ ಹೋಗಿದ್ದೆ. ಹಿಮಾಲಯ ಪರ್ವತಗಳನ್ನು ಮಸ್ಸೂರಿಯಿಂದ ನೋಡಿದ್ದೆ. ಅದು ಮೈಲುಗಟ್ಟಲೆ ನಿಂತಿದ್ದ ಎತ್ತರ ಪರ್ವತಶಿಖರಗಳ ಅಪೂರ್ವ ದೃಶ್ಯವಾಗಿತ್ತು. ಹಿಮಾಲಯದ ಸೌಂದರ್ಯವು ಸ್ವಿಟ್ಸರ್‌ಲ್ಯಾಂಡ್‌ನ ಆಲ್ಪ್ಸ್ ಪರ್ವತಗಳ ಸೌಂದರ್ಯಕ್ಕಿಂತ ಎಷ್ಟೋ ಹಿರಿದಾದುದು ಎಂದು ನೋಡಿದವರಿಂದ ನಾನು ತಿಳಿದಿದ್ದೇನೆ. ಆದರೆ ಹಿಮಾಲಯದ ಸೌಂದರ್ಯವನ್ನು ಕಾಶ್ಮೀರದಲ್ಲಾಗಲೀ ಇತರ ಕಡೆಗಳಲ್ಲಾಗಲೀ ಈವರೆಗೆ ನನಗೆ ನೋಡಲಾಗದಿದ್ದುದು ವ್ಯಥೆಗೆ ಕಾರಣವಾಗಿದೆ. 'ದೇವಾಲಯದ ಹತ್ತಿರ ಬಂದಂತೆ ದೇವರಿಂದ ದೂರವಾಗುವನು' ಎಂಬ ಇಂಗ್ಲೀಷ್ ಗಾದೆ ಸತ್ಯವಾಗುವುದು" ಎಂದು ಭಾರತದ ರಮ್ಯ ಪ್ರದೇಶಗಳ ಚಿತ್ರಣವನ್ನು ಕಾರಂತರು ಸ್ಥೂಲವಾಗಿ ನೀಡುತ್ತಾರೆ.

ಅದೇ ಸುಮಾರಿಗೆ ಅಲಹಾಬಾದ್ ನಗರವನ್ನು ನೋಡುವ ಅವಕಾಶವೂ ಕಾರಂತರಿಗೆ ಲಭಿಸಿತ್ತು. ಅಲ್ಲಿ ನೆಹರೂ ಅವರ ತಂದೆ ಮೋತಿಲಾಲ ನೆಹರೂ ರಾಷ್ಟ್ರಕ್ಕಿತ್ತ ಸ್ವರಾಜ್ಯ ಭವನವನ್ನು ಅವರು ನೋಡುತ್ತಾರೆ. ಅಲ್ಲಿ ಪಂಡರ ಕಾಟವನ್ನು ತಪ್ಪಿಸಿಕೊಂಡು ತ್ರಿವೇಣಿ ಸಂಗಮದಲ್ಲಿ (ಗಂಗಾ-ಯಮುನಾ-ಸರಸ್ವತಿ) ಸ್ನಾನ ಮಾಡಿದ ಪ್ರಸಂಗವನ್ನು ಹೇಳುತ್ತಾರೆ. ಅಲ್ಲಿ ಕಾರಂತರಿಗೆ ಕಂಡುದು ಜನರ ದಟ್ಟ ದಾರಿದ್ರ್ಯ. ಕೇವಲ ನಾಲ್ಕಾಣೆ ಮಜೂರಿಗೆ ಸೈಕಲ್ ರಿಕ್ಷಾದಲ್ಲಿ ಇಬ್ಬರನ್ನು ಕೂರಿಸಿಕೊಂಡು ಎರಡು ಮೈಲು ದೂರ ಕರೆದೊಯ್ಯುವ ದೃಶ್ಯವನ್ನು ಅವರು ವಿವರಿಸುತ್ತಾರೆ. ಆ ಪ್ರಯಾಣದಲ್ಲಿ ಅತಿಪವಿತ್ರ ಕ್ಷೇತ್ರವಾದ ಕಾಶಿಗೆ ಭೇಟಿ ನೀಡಿದರು. ಅಲ್ಲಿನ ನೇರವಾದ ರಸ್ತೆಗಳೂ, ಅನೈರ್ಮಲ್ಯದ ಕೊಳಕು ವಾತಾವರಣವೂ ಅದ್ವಿತೀಯವಾಗಿದೆ ಅನ್ನುತ್ತಾರೆ. ಮದನಮೋಹನ ಮಾಲವೀಯರು ಕಟ್ಟಿಸಿದ ವಿಶ್ವಪ್ರಸಿದ್ಧ ಹಿಂದೂ ವಿಶ್ವವಿದ್ಯಾಲಯ ಮನೋಹರವಾಗಿದೆ. ಅಲ್ಲಿ ಸಾವಿರಾರು

ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ ಎನ್ನುತ್ತಾರೆ. ಹಾಗೆಯೇ ಬುದ್ಧನು ಬೋಧಿಸಿದ ಸಾಂಚಿ ಪಟ್ಟಣದ ಬುದ್ಧ ದೇವಾಲಯಗಳ ನೈರ್ಮಲ್ಯವು ಏಕೈಕವಾಗಿದೆ ಎಂದು ಪ್ರಶಂಸಿಸುತ್ತಾರೆ.

೧೯೫೪ ರಲ್ಲಿ ಕಾರಂತರು ಪಟ್ನಾಕ್ಕೆ ಹೋಗಿದ್ದರು. ಹಾಗೆಯೇ ಕಲ್ಕತ್ತಾವನ್ನು ಕಂಡುಬಂದರು. ಹೆಚ್ಚಾಗಿ ಬ್ರಿಟಿಷರೇ ನಿರ್ಮಿಸಿದ್ದ ಈ ಪಟ್ಟಣದ ವಿಶಾಲತೆ ಮತ್ತು ಹೂಗ್ಲಿ ನದಿಯ ಪ್ರಬಲ ಪ್ರವಾಹದಂತೆ ಸಾಗುತ್ತಿರುವ ಜನವೃಂದದ ಚಿತ್ರವನ್ನು ಅಲ್ಲಿ ನೋಡಿಯೇ ತಿಳಿಯಬೇಕಷ್ಟೆ ಎಂದು ಅವರು ಬರೆಯುತ್ತಾರೆ. "ಆರ್ಯರಿಂದ ಮಂಗೋಲಿಯನ್ ವಂಶದವರೆಗಿನ ವಿವಿಧ ವರ್ಣಗಳ ಜನರು ಅಲ್ಲಿದ್ದಾರೆ. ಪೂರ್ವ ಬಂಗಾಲದಿಂದ ಬರುತ್ತಲೇ ಇರುವ ನಿರಾಶ್ರಿತರಿಂದ ಈ ರಾಜ್ಯ ತುಂಬಿ ಹೋಗಿದೆ. ಬಿಹಾರಿನಲ್ಲಿ ಉದ್ಯಮಗಳು ಬೆಳೆಯುತ್ತಿವೆ. ಗಂಗಾನದಿಯ ದಂಡೆಯಲ್ಲಿರುವ ಪಾಟ್ನಾ ಅಥವಾ ಪಾಟಲೀಪುತ್ರವು ಇದರ ಸುಂದರ ರಾಜಧಾನಿ ನಗರವಾಗಿದೆ." ಎಂದು ಬರೆಯುತ್ತಾರೆ.

೧೯೫೨ರಲ್ಲಿ ಕಾರಂತರು ನಾಗಪುರಕ್ಕೆ ಹೋಗುತ್ತಾರೆ. ಅಲ್ಲಿಗೆ ಸಮೀಪದ ಮಧ್ಯಪ್ರಾಂತದ ಅಮರಾವತಿಯಲ್ಲಿ ಎರಡು ವರ್ಷ ಕಾಲ ಅವರು ಸೆರೆಯಾಳಾಗಿ ವಾಸಿಸಿದ್ದರು. ನಾಗಪುರದಲ್ಲಿ ಇದ್ದಾಗ ಪೇಶ್ವೆಯವರ ಉದ್ಯಾನವನವನ್ನೂ ಅದರ ಬಳಿಯ ಸುಂದರ ಸುವಿಶಾಲ ಕೆರೆಯನ್ನೂ ನೋಡಿದರು. ಆ ಕೊಳದಲ್ಲಿ ಅನೇಕ ಮಂದಿ ಹತಭಾಗ್ಯರು ಪ್ರತಿವರ್ಷವೂ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವರೆಂದು ಅಲ್ಲಿರುವವರು ಕಾರಂತರಿಗೆ ತಿಳಿಸುತ್ತಾರೆ.

ಗುಜರಾತನ್ನು, ಅದರಲ್ಲೂ ಸರ್ದಾರ್ ವಲ್ಲಭ ಭಾಯಿ ಪಟೇಲರ ನಗರವಾದ ಅಹಮದಾಬಾದನ್ನು ೧೯೨೧ ಹಾಗೂ ೧೯೫೪ ರಲ್ಲಿ ಹೀಗೆ ಎರಡು ಬಾರಿ ಅವರು ಸಂದರ್ಶಿಸಿದ್ದಾರೆ. ಮೊದಲ ಬಾರಿಯ ಸಂದರ್ಶನ ಸಮಯದಲ್ಲಿ ಸಬರ್ಮತಿ ಆಶ್ರಮದ ಗುಡಿಸಲಿನಲ್ಲಿ ಮಹಾತ್ಮಾ ಗಾಂಧಿಯವರನ್ನು ಭೇಟಿಯಾಗುತ್ತಾರೆ ಮತ್ತು ಅವರೊಂದಿಗೆ ಕೂತು ತಕಲಿಯಲ್ಲಿ ನೂಲು ತೆಗೆಯುವುದನ್ನು ಅಭ್ಯಾಸ ಮಾಡುತ್ತಾರೆ. ಎರಡನೆಯ ಬಾರಿ ಕಾರಂತರು ಅಲ್ಲಿಗೆ ಹೋದದ್ದು ನಮಗೆ ಸ್ವರಾಜ್ಯ ಸಿಕ್ಕಿದ ಬಳಿಕ. ಆಗ ಅಲ್ಲಿ ಸುಮಾರು ಎಪ್ಪತ್ತು ಬಟ್ಟೆ ಗಿರಣಿಗಳಿದ್ದು ಇಡೀ ದೇಶದಲ್ಲೇ ಅದು ಅತ್ಯಂತ ಶ್ರೀಮಂತ ನಗರವಾಗಿತ್ತು. ಕೇವಲ ಐವತ್ತು ವರ್ಷಗಳಲ್ಲಿ ಆದ ಬದಲಾವಣೆಯನ್ನು ಕಾರಂತರು ಗುರುತಿಸುತ್ತಾರೆ. ಏಳೆಂಟು ಜನರ ಕುಟುಂಬವುಳ್ಳ ಶ್ರೀಮಂತ ಗಿರಣಿ ಒಡೆಯನಿಗೆ ಹತ್ತು – ಹನ್ನೆರಡು ಮೋಟಾರು ಕಾರುಗಳಿವೆ. ತಿಂಗಳಿಗೆ ಸುಮಾರು ೧೨೦ ರೂಪಾಯಿ ಸಂಬಳ ಗಳಿಸುವ ಗಿರಣಿ ಕಾರ್ಮಿಕನೂ ವಾರಕ್ಕೊಂದು ಸಿನಿಮಾ ನೋಡಿ ಸಾಧಾರಣ

ಸಂತೃಪ್ತಿಯಿಂದಿದ್ದಾನೆ ಎಂದು ಬದಲಾದ ಸನ್ನಿವೇಶಗಳನ್ನು ಚಿತ್ರಿಸುತ್ತಾರೆ.

ತನ್ನ ಸಿಂಹಳ ಭೇಟಿ, ಮುಂಬಯಿ, ಪೂನಾ, ಮಹಾರಾಷ್ಟ್ರ, ಮದ್ರಾಸು, ಮಧುರೆ, ತಿರುವಾಂಕೂರು, ತ್ರಿಶೂರು ಮತ್ತು ಮೈಸೂರು ಸಂದರ್ಶನಗಳ ಕುರಿತು ಕಾರಂತರು ಬರೆದಿದ್ದಾರೆ. ತಾನು ಹೋದೆಡೆಗಳ ವಿಶೇಷತೆಗಳನ್ನು ವಿಚಿಕಿತ್ಸಕ ವಿಶ್ಲೇಷಣಾತ್ಮಕ ದೃಷ್ಟಿಯಿಂದ ಬರೆಯುವುದು ಕಾರಂತರ ವಿಶೇಷತೆ.

'ನಿಜವಾದ ಭಾರತವನ್ನು ಹಳ್ಳಿಗಳಲ್ಲಿ ನೋಡಬೇಕು' ಎಂದು ಕಾರಂತರು ಬರೆಯುತ್ತಾರೆ. ಅವರು ಬಹುವಾಗಿ ಸಂಚರಿಸುತ್ತಿದ್ದ, ಹೆಚ್ಚು ಕಡಿಮೆ ಅವರ ಕಾರ್ಯಕ್ಷೇತ್ರವೇ ಆಗಿದ್ದ ಪಶ್ಚಿಮ ಕರಾವಳಿಯ ಚಿತ್ರಣವನ್ನು ಸ್ವಾನುಭವದ ಹಿನ್ನೆಲೆಯಲ್ಲಿ ಅವರು ವಿವರಿಸುವುದು ಹೀಗೆ:

ಮುಂಬಯಿಯಿಂದ ಕನ್ಯಾಕುಮಾರಿಯವರೆಗಿನ ಪಶ್ಚಿಮ ಕರಾವಳಿಯ ಹಳ್ಳಿಗಳು ಒಂದೇ ಕಡೆಯಲ್ಲಿ ಗುಂಪಾಗಿರದೆ ಎಲ್ಲೆಲ್ಲೂ ಹರಡಿದ್ದು ತೆಂಗಿನಮರ ಮತ್ತು ನದಿಗಳನ್ನೊಳಗೊಂಡು ಸುಂದರವಾಗಿವೆ. ಜನರೂ ಸಾಧಾರಣವಾಗಿ ಆರೋಗ್ಯದಿಂದಿದ್ದಾರೆ. ಆದರೆ ದಕ್ಷಿಣ ಮತ್ತು ಪೂರ್ವ ಕರಾವಳಿಯ ಮತ್ತು ಉತ್ತರ ದೇಶಗಳ ಹಳ್ಳಿಗರಿಗೆ ಸರಿಯಾದ ನೀರಿನ ಸರಬರಾಜು ಇಲ್ಲದೆ ಅವರು ಅನೈರ್ಮಲ್ಯ ಮತ್ತು ಅಜ್ಞಾನದಿಂದ ತಮ್ಮ ಶುಚಿಯಿಲ್ಲದ ಗುಡಿಸಲುಗಳಲ್ಲಿ ನರಳುತ್ತಿದ್ದಾರೆ. ಎಂಟು ವರ್ಷದ ಸ್ವರಾಜ್ಯ ಹಾಗೂ ರೂಪಾಯಿ. ಎರಡು ಸಾವಿರ ಕೋಟಿಯ ಪಂಚವಾರ್ಷಿಕ ಯೋಜನೆಗಳು ಅವರಿಗೇನೂ ಪರಿಹಾರ ಒದಗಿಸಿಲ್ಲ. ಈ ಪರಿಸ್ಥಿತಿಯನ್ನು ನೋಡಿದ ವಿದೇಶೀಯರ ಮುಂದೆ ನಾವು ನಾಚಿಕೆಯಿಂದ ತಲೆತಗ್ಗಿಸಬೇಕಾಗಿದೆ. ಇವರ ಜೀವನವನ್ನು ಸಂತೋಷದಾಯಕ ವನ್ನಾಗಿ ಅಲ್ಲದಿದ್ದರೂ ಸಹನೀಯವನ್ನಾಗಿಯಾದರೂ ಮಾಡದಿದ್ದರೆ, ಸಮಾಜವಾದೀ ಮಾದರಿಯ ಮಾತು ಮಾತಿನಲ್ಲಿಯೇ ಉಳಿಯಬಹುದಲ್ಲದೆ ಕಾರ್ಯಗತವಾಗಲಿಕ್ಕಿಲ್ಲ.

ಕೆ. ಆರ್. ಕಾರಂತರು ಯೂರೋಪ್ ಪ್ರವಾಸ ಮಾಡಿದ್ದಾ ಕಾಲಕ್ಕೆ ವಿಶೇಷ ಸೌಲಭ್ಯಗಳಿದ್ದ ಆಧುನಿಕ ಉಗಿಹಡಗಿನಲ್ಲಿ. ಸುಮಾರು ಆರುಸಾವಿರ ಮೈಲು ಹಡಗಿನಲ್ಲಿ ಪ್ರಯಾಣ ಮಾಡಿದೆ ಎಂದು ಅವರು ಬರೆಯುತ್ತಾರೆ. " ಈ ಪ್ರವಾಸವನ್ನು ಕೈಗೊಳ್ಳುವ ಸಂದರ್ಭದಲ್ಲಿ ನಾನು ೫೬ ವರ್ಷ ವಯಸ್ಸಿನವನಾಗಿದ್ದರೂ ನನ್ನ ನೋಡುವ, ಅಭ್ಯಸಿಸುವ ಮತ್ತು ಸಂತೋಷ ಪಡುವ ಉತ್ಸಾಹವು ಹದಿನಾರು ವರ್ಷದ ಶಾಲಾ ಬಾಲಕನದಾಗಿತ್ತು" ಎನ್ನುತ್ತಾರೆ.

ಇಂಗ್ಲಂಡನ್ನು ನೋಡಲು ಅವರಿಗಿದ್ದ ಕಾರಣವೆಂದರೆ, ಇಂಗ್ಲಿಷ್ ಭಾಷೆಯನ್ನು ಅಭ್ಯಾಸ ಮಾಡಿ, ಅಲ್ಲಿನ ರಾಜಕೀಯ-ಇತಿಹಾಸಗಳನ್ನು ಓದಿದ ಮೇಲೆ ಅಲ್ಲಿನ

ಜನಜೀವನ ಹೇಗಿದೆ ಎಂದು ನೋಡಬೇಕೆಂಬ ಉತ್ಕಟ ಅಪೇಕ್ಷೆ. ಅದರಲ್ಲಿಯೂ ಅಲ್ಲಿನವರ ಸಂಘ ಸಂಸ್ಥೆಗಳ ನಡವಳಿಕೆಯನ್ನು ಪ್ರತ್ಯಕ್ಷ ಪರಿಶೀಲಿಸಬೇಕೆಂಬುದು ಮುಖ್ಯ ಉದ್ದೇಶ. ನಮ್ಮ ದೇಶದ ರಾಜ್ಯಾಂಗವನ್ನೂ ಆಡಳಿತ ಕ್ರಮವನ್ನೂ ಇಂಗ್ಲೆಂಡ್ ಮಾದರಿಯಲ್ಲಿ ರಚಿಸಿರುವರಾದ ಕಾರಣ ಅವರ ಪಾರ್ಲಿಮೆಂಟ್ ಹೇಗಿದೆ, ಪಂಗಡಗಳ ಪದ್ಧತಿ ಹೇಗಿದೆ, ಪ್ರಜಾಪ್ರಭುತ್ವ ಜೀವನ ಯಾವ ಬಗೆಯದು ಎಂದು ತಿಳಿಯುವ ಕುತೂಹಲ ಅವರಿಗೆ. ಇಂಗ್ಲೆಂಡ್‌ಗೆ ಹೋದ ಅವರು ಸಮೀಪದ ಪ್ರಜಾಪ್ರಭುತ್ವ ರಾಜ್ಯಾಡಳಿತ ಪದ್ಧತಿಯ ದೇಶಗಳಾದ ಫ್ರಾನ್ಸ್, ಜರ್ಮನಿ, ಇಟಲಿ, ಸ್ವಿಟ್ಜರ್‌ಲ್ಯಾಂಡ್ ದೇಶಗಳನ್ನು ನೋಡಿ ಬರುತ್ತಾರೆ.

ನೇಪಲ್ಸ್ ನಗರದಲ್ಲಿ ತನಗಾದ ಅನುಭವಗಳನ್ನು ನೇಪಲ್ಸ್ ಎಂಬ ಉಪಶೀರ್ಷಿಕೆಯಲ್ಲಿ ಕೊಟ್ಟಿದ್ದಾರೆ. ಅವರ ಅನುಭವಗಳನ್ನು ಹೇಗೆ ನಿರೂಪಿಸಿದ್ದಾರೆ ಎಂಬುದನ್ನಿಲ್ಲಿ ನೋಡೋಣ:

**ನೇಪಲ್ಸ್**

"೧೯೫೧ರ ಜೂನ್ ೧೨ ರ ಶುಕ್ರವಾರ ಸಾಯಂಕಾಲದ ರೈಲಿನಲ್ಲಿ ರೋಮ್ ನಗರಕ್ಕೆ ಹೊರಟ ವಿಷಯ ಮುಂಚಿನ ಪತ್ರದಲ್ಲಿ ಬರೆದಿದ್ದೆ. ರೈಲು ಇಟಲಿಯ ಮಧ್ಯಪ್ರದೇಶವಾದ ಟಸ್ಕನಿ ಎಂಬ ಊರಿನಲ್ಲಿ ದಕ್ಷಿಣಾಭಿಮುಖವಾಗಿ ಚಲಿಸುತ್ತಿತ್ತು. ಇದು ಹೆಚ್ಚಾಗಿ ಗುಡ್ಡ ಪ್ರದೇಶ. ತುಂಬ ದ್ರಾಕ್ಷಿ ಬೆಳೆಯುವ ಊರು. ಇಡೀ ಇಟಲಿಯಲ್ಲಿ ಇಲ್ಲಿಯಷ್ಟು ಒಳ್ಳೆಯ ದ್ರಾಕ್ಷಿ ಮತ್ತು ಅದರಿಂದ ತಯಾರಾಗುವ ದ್ರಾಕ್ಷಾರಸವು (wine) ಬೇರೆ ಎಲ್ಲಿಯೂ ಇಲ್ಲವೆಂದು ಅಲ್ಲಿಯ ಜನರಿಂದ ನನಗೆ ತಿಳಿಯಿತು. ಬಯಲು ಭೂಮಿಯಲ್ಲಿ ಒಳ್ಳೆಯ ಗೋಧಿ ಮತ್ತು ಮುಸುಕಿನ ಜೋಳ (maize ) ಬೆಳೆಯುತ್ತವೆ.

ಫ್ಲಾರೆನ್ಸ್‌ನಿಂದ ರೋಮ್‌ನ ವರೆಗೂ ನಾಲ್ಕು ಗಂಟೆ ಸಮಯ ನನ್ನ ಒಟ್ಟಿಗೆ ಸುಮಾರು ೩೫ ವರ್ಷ ಪ್ರಾಯದ ಒಬ್ಬ ರೈಲ್ವೇ ಆಫೀಸರನು ಪ್ರಯಾಣ ಮಾಡುತ್ತಿದ್ದು ಅವನಿಗೆ ಇಂಗ್ಲಿಷ್ ಗೊತ್ತಿದ್ದ ಕಾರಣ ಆ ದೇಶದ ಅನೇಕ ವಿಷಯಗಳನ್ನು ಅವನಿಂದ ತಿಳಿಯಲಿಕ್ಕೆ ಸಾಧ್ಯವಾಯಿತು. ಅವನು ಸೋಶಿಯಲಿಸ್ಟ್ ಪಾರ್ಟಿಗೆ ಸೇರಿದವನು. ಅವನಿಗೆ ಲಗ್ನವಾಗಿರಲಿಲ್ಲ. ಇಟಲಿಯಲ್ಲಿ ಸಾಮಾನ್ಯ ೩೨-೩೫ ವರ್ಷ ಪ್ರಾಯದ ವರೆಗೆ ಲಗ್ನವಾಗುವುದು ದುರ್ಲಭವೆಂದು ಅವನಿಂದ ತಿಳಿಯಿತು. ಇತರ ಯೂರೋಪ್ ದೇಶಗಳಲ್ಲೂ ಹಾಗೆಯೇ ಎನ್ನಬಹುದು. ಅದೇಕೆಂದರೆ ಅಷ್ಟರವರೆಗೆ ಒಂದು ಕುಟುಂಬವನ್ನು ಸಾಕುವಷ್ಟು ಸಂಪಾದನೆ ಒಬ್ಬನಿಗೆ ಆಗುವುದಿಲ್ಲ. ಅವನಿಂದ ನಮಗೆ ಸಿಕ್ಕಿದ ಅನುಭವವು ಕೆಲವು ಮಟ್ಟಿಗೆ ಅವನ ರಾಜಕೀಯ

ಒಲವಿಗೆ ಹೊಂದಿಕೊಂಡಿರಬಹುದಾದರೂ ಅವನು ಹೇಳಿದ್ದರಲ್ಲಿ ಹೆಚ್ಚಿಗೆ ಸತ್ಯವಿದೆ ಎಂಬುದು ನಾನು ಸ್ವತಃ ಕಂಡಿದ್ದರಿಂದ ನನಗೆ ತಿಳಿಯಬಂತು. ಅವನ ಸಂಭಾಷಣೆಯ ತಾತ್ಪರ್ಯ ಇದು:

ಮುಸಲೋನಿಯ ಕಾಲದ ವಿಚಾರ ಕೇಳಲಾಗಿ, ಅವನು ದೊಡ್ಡ ಬಂಡವಾಳದವರ ಪ್ರಭಾವಕ್ಕೆ ಸೇರಿದವನಾಗಿದ್ದನೆಂತಲೂ ಈಗ ನಡೆಯುವ ಸರಕಾರ ಕೂಡ ಭೂಮಾಲಿಕರ ಮತ್ತು ಪಾದ್ರಿಗಳ ಪಂಗಡದ್ದೆಂತ ತಿಳಿಯಿತು. ಕೃಷಿಕರ ಸ್ಥಿತಿಯು ಬಹಳ ಕಠಿಣ. ಅವರಿಗೆ ಭೂಮಿಯಲ್ಲಿ ಶಾಶ್ವತ ಹಕ್ಕು ಇಲ್ಲ. ಭೂಮಿಯ ಉತ್ಪತ್ತಿಯಲ್ಲಿ ಶೇಕಡಾ ೫೦ ಗೇಣಿ ಕೊಡಬೇಕು. ಆದರೆ ಉಳುವ ಖರ್ಚು ಧನಿಯದು. ಸಣ್ಣ ಸಣ್ಣ ಒಕ್ಕಲುಗಳು (ಕಿಸಾನರು) ಬಹಳ ಬಡವರು ಮತ್ತು ಹೆಡ್ಡರು. ಇವರ ಮನೆಗಳನ್ನು ಕಾಣುವಾಗ ಇದು ನಿಜವೆಂತ ಕಾಣುತ್ತದೆ. ಇಂಥ ಜನರ ಮೇಲೆ ಪಾದ್ರಿಗಳ ಪ್ರಭಾವ ಜಾಸ್ತಿ. ಆಗ ತಾನೇ ನಡೆದ ಚುನಾವಣೆಯಲ್ಲಿ ಅವರು ಒಳಗಿಂದೊಳಗೆ ಕೆಲಸ ಮಾಡಿದ್ದಾರೆ. ಕ್ಯಾಥೋಲಿಕ್ ಪಾರ್ಟಿ ಎಂಬ ಒಂದು ರಾಜಕೀಯ ಪಕ್ಷವಿದೆ. ಶೇ. ೫೧ ಕ್ಕೆ ಮಿಕ್ಕಿ ವೋಟು ಸಿಕ್ಕಿದರೆ ಮೂರನೇ ಎರಡರಷ್ಟು ಸ್ಥಾನಗಳು ಸಿಕ್ಕುವಂತೆ ಒಂದು ವಿಶೇಷ (special) ಕಾನೂನು ಮಾಡಿಸಿ ಅದರಿಂದ ಆ ಪಕ್ಷದವರು ಹೆಚ್ಚಿನ ಸ್ಥಾನಗಳನ್ನು ಅಪಹರಿಸಿರುತ್ತಾರೆ (ಇದೇ ರೀತಿ ಕಳೆದ ವರ್ಷ ಫ್ರಾನ್ಸ್‌ನಲ್ಲಿ ಕೂಡ ಒಂದು ಕಾನೂನು ಆಗಿದೆ). ಸಮಾಜವಾದಿ ಮತ್ತು ಸಮತಾವಾದಿಗಳಿಗೆ ಮುನ್ಸಿಪಾಲಿಟಿ ಮತ್ತು ಲೋಕಲ್ ಬೋರ್ಡ್‌ನ ಚುನಾವಣೆಗಳಲ್ಲಿ ಸಿಕ್ಕಿದ ವೋಟುಗಳು ಜಾಸ್ತಿ. ಆದರೆ ಈ ಕಾನೂನಿನಿಂದಾಗಿ ಅವರಿಗೆ ಸಿಕ್ಕಿದ ಸೀಟುಗಳು ಕಡಿಮೆ. ಬಂಡವಾಳ ಪಕ್ಷದ ಸರಕಾರವು ಅಮೆರಿಕದ ಸರಕಾರದಿಂದ ಹೇರಳ ಹಣ ಪಡೆದು ಕೆಲಸ ಮಾಡುತ್ತಿದೆ. ಬಡವರು ಮತ್ತು ಮಧ್ಯಮ ತರಗತಿಯವರ ಸ್ಥಿತಿ ಬಹಳ ಕಠಿಣ. ಸಾಮಾನುಗಳಿಗೆ ಧಾರಣೆ ಬಹಳ ಜಾಸ್ತಿಯಾಗಿ, ದೇಶದ ಹಣ ಕಡಿಮೆಯಾಗಿ ಜೀವನವು ಬಹಳ ಕಷ್ಟ. ಇವರ ಉನ್ನತಿಗಾಗಿ ಸರಕಾರವು ಬೇಕಾದ ಕೆಲಸ ಮಾಡುವುದಿಲ್ಲ.

ಹಣದ ವಿಷಯ ಅವನು ಹೇಳಿದ್ದೇನೋ ನಿಜ. ಇಟಲಿಯ ಸಾಮಾನ್ಯ ನಾಣ್ಯ 'ಲೀರಾ'. ಕಳೆದ ಯುದ್ಧದ ಮೊದಲು ಒಂದು ಪೌಂಡಿಗೆ (ರೂ. ೧೩–೫–೪) ಸರಾಸರಿ ೯೩ ಲೀರಾ ಸಿಕ್ಕುತ್ತಿತ್ತು. ಆದರೆ ಕಳೆದ ವರ್ಷ ಅಲ್ಲಿ ನಾನು ಸಂಚರಿಸುತ್ತಿದ್ದಾಗ ಒಂದು ಪೌಂಡಿಗೆ ೧೭೩೮ ಲೀರಾಗಳು. ಎಂದರೆ ದುಡ್ಡು ಎಷ್ಟು ಅಗ್ಗವೆಂದು ವಾಚಕರು ಆಲೋಚಿಸಬಹುದು. ಒಂದು ಊಟಕ್ಕೆ ೭೦೦ ಲೀರಾ! ಮೋಟಾರಿನಲ್ಲಿ ಎರಡು ಮೈಲು ಹೋದರೆ ೫೦೦ ಲೀರಾ. ಒಂದು ಕ್ಷಾಪು ಮಾಡಿಸಿಕೊಂಡರೆ ૨೦೦ ಲೀರಾ. ಪ್ರತಿಯೊಬ್ಬರ ಕೈಯಲ್ಲೂ ದಪ್ಪದಪ್ಪವಾದ

ಲೀರಾ ನೋಟುಗಳ ಕಟ್ಟುಗಳು. ಆದರೂ ಬೇಕಾದ ಆಹಾರ ಪದಾರ್ಥಗಳು ಸಿಕ್ಕಲಿಕ್ಕೆ ಕಷ್ಟವಿಲ್ಲ. ರುಚಿಯಾದ ಬ್ರೆಡ್, ಸಮೃದ್ಧಿಯಾದ ತರಕಾರಿಗಳು, ನಾನಾತರಹದ ಹಣ್ಣು ಹಂಪಲುಗಳು, ಇಟಲಿ ಜನರಿಗೆ ಪ್ರಿಯಕರವಾದ ಪಾನೀಯಗಳು ಎಲ್ಲ ಸಿಗುತ್ತವೆ. ತುಂಬಿದ ಊರಾದ ಇಟಲಿಯಲ್ಲಿ ನಾನು ಈ ಮುಂಚೆ ನೋಡಿದ ಯುರೋಪ್ ದೇಶಗಳಿಗಿಂತ ಬಡತನ ಜಾಸ್ತಿ. ಆದರೂ ಜನರು ಬುದ್ಧಿವಂತರು, ಶ್ರಮಜೀವಿಗಳು, ಮೈಗಳ್ಳರಲ್ಲ. ಯುದ್ಧದಲ್ಲಿ ಸೋತುದರಿಂದ ಈಗ ಕಷ್ಟದಲ್ಲಿದ್ದಾರೆ.

ಹೀಗೆಯೇ ಮಾತಾಡಿಕೊಂಡು ರೈಲಿನಲ್ಲಿ ಬರುತ್ತಿರುವಾಗ ರೋಮ್‌ನಿಂದ ಸುಮಾರು ೪೦ ಮೈಲಿನಿಂದ ಅಲ್ಲಲ್ಲಿ ಟೈಬರ್ (Tibre) ಎಂಬ ನದಿಯು ರೈಲು ಮಾರ್ಗಕ್ಕೆ ಸಮೀಪವಾಗಿ ಹರಿದುಬರುತ್ತದೆ. ಈ ನದಿಯ ವಿಷಯ ಹಿಂದಿನ ರೋಮನರ ಚರಿತ್ರೆಯಲ್ಲಿ ಓದಬಹುದು. ನಮ್ಮ ದೇಶದ ನದಿಗಳಷ್ಟು ಇದು ದೊಡ್ಡದಲ್ಲ. ಆದರೆ ಸ್ವಚ್ಛವಾದ ನೀರು. ಅದರ ಎರಡೂ ಬದಿಗಳಲ್ಲಿ ಚೆನ್ನಾಗಿ ಪೈರು ಬೆಳೆಯುತ್ತಿರುವ ಭೂಮಿ. ಸಾಯಂಕಾಲ ಘಂಟೆ ೮.೨೦ಕ್ಕೆ ಸರಿಯಾಗಿ ರೈಲು ರೋಮ್ ನಗರವನ್ನು ತಲಪಿತು. ೪.೪೨ಕ್ಕೆ ಹೊರಟ ರೈಲು ೮.೨೦ ಕ್ಕೆ ೧೯೮ ಮೈಲು ಬಂತು. ಘಂಟೆಗೆ ಸರಾಸರಿ ೫೪೧/೨ ಮೈಲಿ ವೇಗ. ಎಷ್ಟು ಸುಲಭ ಪ್ರಯಾಣ! ಈ ಮುಂಚೆ ಬರೆದಂತೆ ರೋಮ್‌ನ ಸ್ಟೇಶನ್ ಬಹಳ ದೊಡ್ಡದು. ಹೊಸದಾಗಿ ಸಿಮೆಂಟ್‌ನಿಂದಲೇ ಕಟ್ಟಿದ್ದು. ಅಲ್ಲಿಂದ ಒಂದು ಫರ್ಲಾಂಗು ದೂರ ಸ್ಯಾನ್ ರೆಮೋ (San Ramo) ಎಂಬ ಹೋಟೆಲಿಗೆ ನಡೆದೆ. ಅಲ್ಲಿಗೆ ನನ್ನ ಒಟ್ಟಿಗೆ ನನ್ನ ಕೈಪೆಟ್ಟಿಗೆ ಹಿಡಿದುಕೊಂಡು ಹೋಗುತ್ತಿದ್ದ ಹೋಟೆಲ್ ಕೆಲಸಗಾರನೊಡನೆ ಇದು ಎಷ್ಟು ಚಲೋ ಸ್ಟೇಶನ್ ಎಂತ ನಾನು ಹೇಳಿದಾಗ ಅವನು ಕೊಟ್ಟ ಉತ್ತರ – "ಹೌದು. ಸಾವಿರಾರು ಬಡ ಕುಟುಂಬಗಳಿಗೆ ಸರಿಯಾದ ಮನೆ ಇಲ್ಲದಾಗ ಈ ಆಡಂಬರವೇಕೆ? ಬಡಜನರನ್ನು ಕೇಳುವವರಿಲ್ಲ." ನನ್ನೊಟ್ಟಿಗೆ ಪ್ರಯಾಣ ಮಾಡಿದ ಸಮಾಜವಾದಿಯು ಹೇಳಿದ ಮಾತುಗಳು ನಿಜ.

ಸ್ಯಾನ್ ರೆಮೋ ದೊಡ್ಡ ಹೋಟೆಲು; ಐದು ಉಪ್ಪರಿಗೆ; ಚಲೋ ಊಟ; ಅಲ್ಲಿ ಆ ರಾತ್ರಿ ಇದ್ದು ಮರುದಿನ ಬೆಳಗ್ಗೆ ೯ ಗಂಟೆಯ ರೈಲಿನಲ್ಲಿ ಇನ್ನೂ ದಕ್ಷಿಣಕ್ಕೆ ಹೊರಟೆ. ಅಲ್ಲಿಂದ ೧೫೫ ಮೈಲು ದೂರವಿರುವ ನೇಪಲ್ಸ್ ಎಂಬ ನಗರವನ್ನು ನೋಡಿ ಪುನಃ ರೋಮ್‌ಗೆ ಬಂದು, ಅಲ್ಲಿ ಎರಡು ದಿನ ಇದ್ದು ಸಂಚರಿಸಿ ಅಲ್ಲಿಂದ ಬೊಂಬಾಯಿಗೆ ವಿಮಾನದಲ್ಲಿ ಬರುವುದೆಂತ ಮುಂಚೆಯೇ ನಿಶ್ಚಯಿಸಿದ್ದ ಕಾರಣ ಸೀದಾ ಹಾಗೆ ಹೊರಡಲಿಕ್ಕೆ ಕಾರಣ. ರೈಲು ಬರುತ್ತಿರುವಾಗ ಅನೇಕ ಮೈಲುಗಳ ದೂರ ರೋಮನ್ನರ ಕಾಲದ ಹಾಳುಬಿದ್ದ ಎತ್ತರವಾದ ಕಲ್ಲಿನ ಕಂಬಗಳ ಮೇಲೆ ನೆಲದಿಂದ ಇಪ್ಪತ್ತು ಅಡಿ ಮೇಲೆ ಕಲ್ಲಿನಿಂದ ಕಟ್ಟಿದ ನೀರು ತರುವ

ಕಾಲುವೆ (Aqueduct) ಕಾಣುತ್ತದೆ. ಅಲ್ಲಲ್ಲಿ ಹೊಸದಾಗಿ ಕಟ್ಟಿದ ಕಾರ್ಖಾನೆಗಳು ಮತ್ತು ಮನೆಗಳು; ಗುಡ್ಡೆಯ ಇಳಿಜಾರಿನಲ್ಲಿ ಕೂಡ ಕಡಿದು ಸಮತಟ್ಟು ಮಾಡಿ ಪೈರು ಬೆಳೆಸುವ ಗದ್ದೆಗಳು; ಇನ್ನು ಕೆಲವು ಕಡೆ ಅವುಗಳಲ್ಲಿ ಒಲೀವ್ ಮರಗಳು; ಗುಡ್ಡೆಯ ಬದಿ ಕುಸಿದು ಬೀಳದಂತೆ ಕಪ್ಪು ಕಲ್ಲಿನಿಂದ ಕಟ್ಟಿದೆ. ಈ ದೇಶದಲ್ಲಿ ಜನರು ಆಹಾರಕ್ಕೆ ಹೆಚ್ಚಾಗಿ ಉಪಯೋಗ ಮಾಡುವುದು ಒಲೀವ್ (olive) ಎಣ್ಣೆ. ಗದ್ದೆಗಳನ್ನು ಉಳಲಿಕ್ಕೆ ಕಬ್ಬಿಣದ ನೇಗಿಲು. ಅದನ್ನು ಎಳೆಯುವುದು ಎತ್ತುಗಳು. ಅಲ್ಲಲ್ಲಿ ಗುಡ್ಡೆಗಳಿದ್ದ ಕಾರಣ ಅನೇಕ ಸುರಂಗಗಳ ಮೂಲಕ ರೈಲು ಬರುತ್ತದೆ. ಇಟಲಿಯಲ್ಲಿ ದಕ್ಷಿಣಕ್ಕೆ ಬಂದಂತೆ ಕೃಷಿಕರ ಮನೆ ಉತ್ತರ ಪ್ರದೇಶಕ್ಕಿಂತ ಒಳ್ಳೆಯದಾಗಿ ಕಾಣುತ್ತವೆ. ಅಲ್ಲಲ್ಲಿ ಹೊಸದಾಗಿ ಕಟ್ಟಿದ ಮನೆಗಳನ್ನು ಕಾಣಬಹುದು. ಸ್ವಲ್ಪ ದೂರ ರೈಲು ಪಟ್ಟಿ ಎರಡು ಜೋಡಿ ಇದ್ದು ರೈಲು ಬಹಳ ವೇಗದಲ್ಲಿ ಬರುತ್ತದೆ. ಈ ದಿನದ ರೈಲು ಸಾಮಾನ್ಯ ರೈಲು. ರ್‍ಯಾಪಿಡೋ ರೈಲಲ್ಲ. ಆದರೂ ಬಹುವೇಗದಲ್ಲಿ ಬಂತು. ಇಲ್ಲಿ ಮಳೆ ಬಂದು ಕೆಲವು ತಿಂಗಳಾದ ಕಾರಣ ರೈಲು ಬರುವ ರಭಸಕ್ಕೆ ಹಿಂದಿನಿಂದ ವಿಪರೀತ ಧೂಳು ಏಳುತ್ತಿತ್ತು. ಉತ್ತರದ ದೇಶಗಳಲ್ಲಿ ಧೂಳೇ ಇಲ್ಲ. ಅದು ಆಗಾಗ ಮಳೆ ಬರುವ ಕಾರಣ. ರೈಲು ಘಂಟೆ ೧೧-೫೫ಕ್ಕೆ ಸರಿಯಾಗಿ ನೇಪಲ್ಸ್‌ಗೆ ಬಂದು ಸೇರಿತು. ೨ ಗಂಟೆ ೫೫ ನಿಮಿಷಗಳಲ್ಲಿ ೧೫೫ ಮೈಲು; ಘಂಟೆಗೆ ೫೦ ಮೈಲಿಗಿಂತಲೂ ಜಾಸ್ತಿ!

ಇಂಗ್ಲಿಷ್‌ನಲ್ಲಿ 'ನೇಪಲ್ಸ್ ನೋಡಿ ಸಾಯಬೇಕು' ಎಂಬ ಗಾದೆ ಇದೆ (See Naples and die). ಇದರ ಸರಿಯಾದ ಅರ್ಥ ನೇಪಲ್ಸ್ ನೋಡಿದ ಕೂಡಲೇ ಸಾಯಬೇಕೆಂದಲ್ಲ. ಅದು ಎಷ್ಟು ಚಂದವಾದ ನಗರವೆಂದರೆ ಹುಟ್ಟಿದ ಮನುಷ್ಯನು ಅದನ್ನು ನೋಡದೆ ಸಾಯಬಾರದು ಎಂದು.

ನೇಪಲ್ಸ್ ಗೆ ಇಟಲಿ ಭಾಷೆಯಲ್ಲಿ 'ನೆಪೋಲಿ' ( Nepoli ) ಅನ್ನುತ್ತಾತೆ. ಇದು ಇಟಲಿಯ ಪಶ್ಚಿಮ ತೀರದಲ್ಲಿದ್ದು ನೇಪಲ್ಸ್ ಎಂಬ ಹೆಸರಿನ ಅರ್ಧ ಚಂದ್ರಾಕಾರದ ಕೊಲ್ಲಿಯ ಉತ್ತರ ಬದಿಯಲ್ಲಿದೆ; ಬಹುದೊಡ್ಡ ಬಂದರು; ಇಟಲಿಯ ಪಶ್ಚಿಮ ತೀರದಲ್ಲಿರುವ ಎರಡು ಪ್ರಮುಖ ಬಂದರುಗಳಲ್ಲಿ ಇದೂ ಒಂದು. ಉತ್ತರದಲ್ಲಿ ಜಿನಿವಾ, ದಕ್ಷಿಣದಲ್ಲಿ ನೇಪಲ್ಸ್. ಇದರ ಜನಸಂಖ್ಯೆ ಹತ್ತು ಲಕ್ಷ. ಅಲ್ಲಿ ಅನೇಕ ಕೈಗಾರಿಕೆಗಳಿವೆ; ಮುಖ್ಯವಾಗಿ ಹಡಗು ಕಟ್ಟುವುದು, ಮಕರೋನಿ, ವರ್ಮಿಸಿಲ್ಲಿ, ದ್ರಾಕ್ಷಾರಸ (wine ), ಒಲೀವ್ ಎಣ್ಣೆ ತಯಾರಿಸುವ ಕೈಗಾರಿಕೆಗಳು.

ರೈಲಿನಿಂದ ಇಳಿದೊಡನೆ ನಾನು ಅದಕ್ಕೆ ಸಮೀಪವಿದ್ದ ಟರ್ಮಿನಸ್ (Terminus) ಎಂಬ ಹೋಟೆಲಿಗೆ ಹೋದೆ. ಅಲ್ಲಿ ಮುನ್ನೂರು ಕೋಣೆಗಳಿಗಿಂತಲೂ ಮಿಕ್ಕಿ ಬಂದವರಿಗೆ ಉಳಕೊಳ್ಳಲು ವ್ಯವಸ್ಥೆ ಇದೆ. ಆರು

ಉಪ್ಪರಿಗೆ. ನನ್ನ ಕೋಣೆ ೨೯೦ ನೆಯದಾಗಿದ್ದು ಅದರ ಬಾಗಿಲ ಹೊರಗಿರುವ ಜಗಲಿಯಲ್ಲಿ ನಿಂತರೆ ಬಹಳ ಅಪೂರ್ವ ಮತ್ತು ದೂರ ದೃಶ್ಯ ಕಾಣುತ್ತಿತ್ತು. ಆಗ್ನೇಯಕ್ಕೆ ಪ್ರಸಿದ್ಧವಾದ ಜ್ವಾಲಾಮುಖಿ ವೆಸೂವಿಯಸ್ ಸುಮಾರು ಹತ್ತು ಮೈಲು ದೂರ ಇದೆ. ದಕ್ಷಿಣಕ್ಕೆ ಉರುಟಾದ ಒಳಗೆ ಬರುವ ಕೊಲ್ಲಿ ಮತ್ತು ಅದರ ಹಿಂದಿನ ಪರ್ವತ, ಪಶ್ಚಿಮಕ್ಕೆ ಸಮುದ್ರ; ಸಮೀಪದಲ್ಲಿ ಕೆಳಗೆ ಅನೇಕ ಹೊಸದಾಗಿ ಕಟ್ಟುತ್ತಿರುವ ಕಟ್ಟೋಣಗಳ ಬುಡಗಳು ಮತ್ತು ಬಂದರು.

ಹೊಟೇಲಲ್ಲಿ ಸಾಯಂಕಾಲ ನಾಲ್ಕು ಗಂಟೆಯ ವರೆಗೆ ವಿಶ್ರಮಿಸಿ ಸಮೀಪವಿರುವ ನಗರದ ಬಸ್ ನಿಲ್ದಾಣಕ್ಕೆ ಬಂದು ಸುಮಾರು ಎರಡು ಮೂರು ಮೈಲು ದೂರಕ್ಕಿರುವ ಸಮುದ್ರ ತೀರಕ್ಕೆ ಬಂದೆ. ಅಲ್ಲಿ ದೊಡ್ಡ ಉದ್ಯಾನವಿದೆ. ಅದು ಸುಮಾರು ಅರ್ಧಮೈಲು ಉದ್ದ; ಅಲ್ಲಿಂದ ಸಮುದ್ರದ ಬದಿಯಲ್ಲಿ ಅಗಲವಾದ ದಾರಿ. ಅದರ ಒಂದು ಬದಿ ಐದಾರು ಉಪ್ಪರಿಗೆಯ (ಮಹಡಿಯ) ದೊಡ್ಡ ಕಟ್ಟಡಗಳ ಸಾಲು. ಕೆಲವು ಕಚೇರಿಗಳು; ಕೆಲವು ಹೊಟೇಲುಗಳು. ಈ ಹೊಟೇಲುಗಳು ನಾನು ಇದ್ದ ಹೊಟೇಲಿಗಿಂತಲೂ ದೊಡ್ಡದಾದವು. ಇನ್ನೊಂದು ಬದಿ ಅಗಲವಾದ ಕಾಲುದಾರಿ; ತಾಗಿಕೊಂಡಂತೆ ಸಮುದ್ರ, ಸಾಧಾರಣ ಮುಂಬಯಿ ನಗರದ ಚೌಪಾಟಿಗೆ ಹೋಲಿಸಬಹುದು. ಆದರೆ ಸಮುದ್ರವು ಅಲ್ಲಿಗಿಂತಲೂ ಆಳ ಮತ್ತು ಸ್ವಚ್ಛವಾದ ನೀರು. ಆಗ ಬೇಸಿಗೆಯಾದ ಕಾರಣ ಅನೇಕರು ಸಮುದ್ರದ ಬದಿಯಲ್ಲಿ ಸ್ನಾನ ಮಾಡುತ್ತಿದ್ದರು. ಹೀಗೆ ಈ ಕಾಲುದಾರಿಯಲ್ಲಿ ನಾನೊಬ್ಬನೇ ನಡೆದು ಬರುತ್ತಿರುವಾಗ ಸುಮಾರು ೨೦-೨೨ ವರ್ಷ ಪ್ರಾಯದ ಅಲ್ಲಿಯ ನೇಪಲ್ಸ್ ವಿಶ್ವವಿದ್ಯಾಲಯಕ್ಕೆ ಸೇರಿದ ಮೆಡಿಕಲ್ ಕಾಲೇಜಿನ ಒಬ್ಬ ವಿದ್ಯಾರ್ಥಿಯು ನನಗೆ ಸಿಕ್ಕಿದ. ಅವನಿಗೆ ಸ್ವಲ್ಪ ಇಂಗ್ಲಿಷ್ ಬರುತ್ತಿತ್ತು. ಅವನು ಸುಮಾರು ಒಂದು ಗಂಟೆ ಸಮಯ ನನ್ನೊಟ್ಟಿಗೆ ನಡೆದು ಪೇಟೆಯವರೆಗೂ ಬಂದನು. ಅವನು ಇರುವುದು ಸುಮಾರು ನಾಲ್ಕೈದು ಮೈಲು ದೂರ; ನಿತ್ಯವೂ ಬಸ್ ಮೂಲಕ ಕಾಲೇಜಿಗೆ ಬಂದು ಹೋಗುವುದು. ಕೆಲವು ಹೊತ್ತು ಪೇಟೆಯಲ್ಲಿ ತಿರುಗಾಡಿ ದಾರಿ ತಪ್ಪಿ ಪುನಃ ಹೇಗಾದರೂ ನನ್ನ ಹೊಟೇಲಿಗೆ ಬಂದು ಸೇರಿದೆ. ಹೀಗೆ ಆ ದಿನದ ತಿರುಗಾಟ ಮುಗಿಯಿತು.

ಮರುದಿನ ಬೆಳಗ್ಗೆ ಆರು ಗಂಟೆಗೆ ಆ ಊರಲ್ಲಿ ಕೂಲಿಯವರು ಕಟ್ಟೋಣ ಕಟ್ಟುವ ಕೆಲಸದಲ್ಲಿ ತೊಡಗಿದರು. ಅದೇಕೆಂದರೆ ಸೆಕೆಗಾಗಿ ಮಧ್ಯಾಹ್ನ ೧೨ ಗಂಟೆಯಿಂದ ೩ ರ ವರೆಗೆ ಎಲ್ಲಾ ಕಡೆಗಳಲ್ಲೂ ವಿಶ್ರಮಿಸುವ ಸಮಯ. ಆ ದಿನ ಬಸ್ ಮೂಲಕ ಬೇರೆಯವರ ಒಟ್ಟಿಗೆ ಇಡೀ ದಿನದ ತಿರುಗಾಟದ ಬಗ್ಗೆ ಒಂದು ಟಿಕೇಟು ಪಡೆದು ಬೆಳಗ್ಗೆ ೯ ಗಂಟೆಗೆ ಹೊರಟು 'ಪಾಂಪೇ' (Pampey ) ಮತ್ತು

ಸಾಯಂಕಾಲ 'ವೆಸೂವಿಯಸ್' (vesuvius) ಜ್ವಾಲಾಮುಖಿ ಇವೆರಡರ ಕಡೆಗೆ ತಿರುಗಾಟ ಮಾಡಿದೆ. ಒಂಬತ್ತು ಗಂಟೆಗೆ ಹೊರಟ ಬಸ್ಸಿನಲ್ಲಿ ಸುಮಾರು ೧೫ ಮೈಲು ದೂರ ನೇಪಲ್ಸ್ ಕೊಲ್ಲಿಯ ಬದಿಯಲ್ಲೇ ಪ್ರಯಾಣ ಮಾಡಿ ಪಾಂಪೇ ಎಂಬ ಊರಿಗೆ ಬಂದೆವು.

ಪಾಂಪೇ ಊರೆಂದರೆ ಬಹಳ ವಿಶೇಷವಾದದ್ದು. ಅದು ಕ್ರಿಸ್ತಪೂರ್ವ ಆರನೇ ಶತಮಾನದ ಹಿಂದೆ ಗ್ರೀಕರು ಅಲ್ಲಿಯ ಕಾಡಿನಲ್ಲಿ ಜೀವಿಸುತ್ತಿದ್ದ ಇಟಲಿ ಜನರನ್ನು ಸೋಲಿಸಿ ವ್ಯಾಪಿಸಿದ ವಲಸೆ ನಗರ (settlement). ಆಗ ನೇಪಲ್ಸ್ ಕೊಲ್ಲಿಯ ಸರಹದ್ದೆಲ್ಲ ಗ್ರೀಕರ ವಶವಾಗಿತ್ತು. ಒಂದೆರಡು ಶತಮಾನ ಅವರ ಕೈಯಲ್ಲಿದ್ದು ಅನಂತರ ಅಲ್ಲಿ ಊರಿನ ಜನರೇ ಅದನ್ನು ವಶಪಡಿಸಿಕೊಂಡು ಕ್ರಿಪೂ. ೮೯ ರ ವರೆಗೆ ಆಳಿ ಆ ನಗರವನ್ನು ಇನ್ನಷ್ಟು ದೊಡ್ಡದು ಮಾಡಿದರು. ಕ್ರಿಪೂ. ೮೯ ರಲ್ಲಿ ರೋಮನ್ ನಿರಂಕುಶಾಧಿಕಾರಿ (dictator) ಸಲ್ಲಾ (sulla) ಎಂಬವನ ಸೈನ್ಯವು ಅದಕ್ಕೆ ಮುತ್ತಿಗೆ ಹಾಕಿದ ಮೇಲೆ ಕೆಲವು ಕಾಲ ಸ್ವತಂತ್ರವಿದ್ದರೂ ಕೊನೆಗೆ ಕ್ರಿಪೂ. ೮೦ ರಲ್ಲಿ ಅದು ರೋಮನರ ಕೈವಶವಾಯಿತು. ಹಾಗೆ ಕ್ರಿ ಪೂ. ೮೦ ರಿಂದ ಕ್ರಿ ಶ ೬೩ ರವರೆಗೆ ಇಲ್ಲಿ ರೋಮನ್ ಜನರು ಬಂದು ಜೀವಿಸಿದ್ದು ಅವರ ಮನೆ, ಅಂಗಡಿಗಳು,ಕೈಗಾರಿಕೆ, ಕೋರ್ಟ್, ದೇವಸ್ಥಾನ ವಗೈರೆ ಕಟ್ಟಿ ನಗರವು ಇನ್ನಷ್ಟು ದೊಡ್ಡದಾಯಿತು. ಕ್ರಿ. ಶ. ೬೩ ರಲ್ಲಿ ಭೂಕಂಪದಿಂದ ನಡುಗಿ ಅದು ಕೆಲವು ಮಟ್ಟಿಗೆ ಹಾಳಾಯಿತು. ಆದರೆ ಪುನಃ ದುರಸ್ತಿ ಪಡಿಸಿ ಸುಮಾರು ಹದಿನಾರು ವರ್ಷಗಳ ಕಾಲ ಜನರು ಅಲ್ಲಿ ವಾಸಿಸಿದರು. ಆದರೆ ಕ್ರಿ ಶ . ೭೯ ರ ಆಗಸ್ಟ್‌ನಲ್ಲಿ ಮೂರ್‍ನಾಲ್ಕು ಮೈಲು ಸಮೀಪವಿರುವ ವೆಸೂವಿಯಸ್ ಜ್ವಾಲಾಮುಖಿಯು ಉಜ್ವಲಿಸಿ ಅದರ ಬಾಯಿಯಿಂದ ಹೊಳೆಯಂತೆ ಹರಿದ ಕುದಿಯುವ ಶಿಲಾರಸ ಮತ್ತು ಬೂದಿಯ ಪ್ರವಾಹದಲ್ಲಿ ಸುಮಾರು ಇಪ್ಪತ್ತು ಸಾವಿರ ಜನರು ವಾಸಿಸುತ್ತಿದ್ದ ಈ ನಗರವು ಸಂಪೂರ್ಣ ಮುಚ್ಚಿ ಹೋಯಿತು. ಹಾಗೆ ೧೭೦೦ ವರ್ಷಗಳಷ್ಟು ಕಾಲ ಮಣ್ಣಿನಡಿಯಲ್ಲಿದ್ದ ಈ ನಗರವು ಅಕಸ್ಮಾತಾಗಿ ೧೭೪೮ ರಲ್ಲಿ ಕೃಷಿಗಾಗಿ ನೆಲ ಅಗೆಯುವಾಗ ಮನೆಗಳ ಕುರುಹು ಕಂಡು ಅಲ್ಲಿಂದ ಈವರೆಗೂ ಇಲ್ಲಿಯ ಸರಕಾರ ಹೇರಳ ಹಣ ಖರ್ಚು ಮಾಡಿ, ಅಗೆಸಿ, ಈಗ ಐದರಲ್ಲಿ ಮೂರು ಪಾಲಿನಷ್ಟು ಬಿಡಿಸಿ ಇಟ್ಟಿದ್ದಾರೆ. ಅಂದರೆ ಮುಂಚೆ ಊರು, ಮನೆ, ರಸ್ತೆ, ಅಂಗಡಿ ಹೇಗೆ ಇದ್ದುವೋ ಅವನ್ನು ಆದಷ್ಟು ಮಟ್ಟಿಗೆ ಹಾಗೆಯೇ ಮಾಡಿಟ್ಟಿದ್ದಾರೆ. ಗ್ರೀಕ್, ಸೇಮೈಟ್ ಮತ್ತು ರೋಮನ್ ಹೀಗೆ ಮೂರು ನಾಗರಿಕತೆಗಳು ಮಿಶ್ರವಾದ ಈ ನಗರವನ್ನು ನೋಡಲು ವಿಶ್ವದ ಅನೇಕ ಊರುಗಳಿಂದ ದಿನನಿತ್ಯವೂ ನೂರಾರು ಜನರು ಇಲ್ಲಿಗೆ ಬರುತ್ತಾರೆ."

ಕೆ. ಆರ್. ಕಾರಂತರ ಪ್ರವಾಸಾನುಭವದ ಬರವಣಿಗೆ ಸುಲಲಿತವೂ ನಿರುದ್ವಿಗ್ನವೂ ಆಗಿದೆ. ಅನುಭವವನ್ನು ಪ್ರಾಮಾಣಿಕವಾಗಿ ದಾಖಲಿಸುವ ನೇರತೆ ಪ್ರವಾಸಿಯೊಬ್ಬನ ಮೂಲಭೂತ ಗುಣಗಳಲ್ಲಿ ಒಂದು. ಕಾರಂತರು ಪೇಟೆಯಲ್ಲಿ ದಾರಿ ತಪ್ಪಿದ್ದು, ಸಾಮಾನ್ಯ ದರ್ಜೆಯ ರೈಲಿನಲ್ಲಿ ಪ್ರಯಾಣ ಮಾಡಿದ್ದು ಮೊದಲಾದವುಗಳನ್ನು ತನ್ನದೇ ಶೈಲಿಯಲ್ಲಿ ನಿರೂಪಿಸುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಅವರು ಚರಿತ್ರೆ ಮತ್ತು ಅದರ ಅನಾವರಣಕ್ಕೆ ನೀಡುವ ಪ್ರಾಮುಖ್ಯವನ್ನು ಗಮನಿಸಬೇಕು. ಪಾಂಪೇ ನಗರ ವೆಸೂವಿಯಸ್ ಜ್ವಾಲಾಮುಖಿಯ ಲಾವಾರಸದಲ್ಲಿ ಹೇಗೆ ಮುಳುಗಿತು ಎನ್ನುತ್ತ ಆ ಚರಿತ್ರಕಾಲದ ನಗರದ ಇತಿಹಾಸವನ್ನೇ ಬಿಚ್ಚಿಡುತ್ತಾರೆ. ಕೇವಲ ನೇಪಲ್ಸ್‌ಗಷ್ಟೇ ಹೋಗಿ ಅವರು ಹಿಂದಿರುಗುವುದಿಲ್ಲ. ಆಸುಪಾಸಿನ ಇತರ ಕಡೆಗಳಿಗೂ ಹೋಗುತ್ತಾರೆ. ಅಲ್ಲಲ್ಲಿನ ವಿಶೇಷತೆಗಳನ್ನು ನೋಡುತ್ತಾರೆ. ಇದು ಕೇವಲ ರಾಜಕಾರಣಿಯೊಬ್ಬನ ದರ್ಶನವಾಗಿ ಉಳಿದಿಲ್ಲ. ಅವರೊಳಗೊಬ್ಬ ಸಾಂಸ್ಕೃತಿಕ ಇತಿಹಾಸಕಾರನೂ ಅಡಗಿದ್ದಾನೆ ಎಂಬುದನ್ನು ಶ್ರುತಪಡಿಸುತ್ತದೆ.

ಹೀಗೆ ಏಕಕಾಲಕ್ಕೆ ರಾಜಕಾರಣಿ, ಪ್ರವಾಸಿ, ಇತಿಹಾಸಕಾರ, ಸಾಹಿತಿ, ಪತ್ರಿಕೋದ್ಯೋಗಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬ ಬಹುಶ್ರುತ ವಿದ್ವಾಂಸ – ಮುತ್ಸದ್ದಿಯಾಗಿ ಕಾರಂತರು ನಮಗಿಲ್ಲಿ ಕಂಡುಬರುತ್ತಾರೆ. ಅವರ 'ಪ್ರವಾಸಿಯ ಪತ್ರಗಳು' ಕೃತಿ ಉದ್ದಕ್ಕೂ ಇಂತಹ ಸುಂದರ ಕಥನವನ್ನು ಒಳಗೊಂಡಿದೆ.

■

## ೧೧. ಕೊನೆಯ ದಿನಗಳು

೯೫೮ರಲ್ಲಿ ಮಂಗಳೂರು ತೊರೆದು ಉಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿ ಬೆಂಗಳೂರಿನಲ್ಲಿ ನೆಲೆಯಾದ ಕಾರಂತರು ಅಲ್ಪಾವಧಿಯಲ್ಲಿ ಬೆಂಗಳೂರಲ್ಲಿ ಖ್ಯಾತಿ ಗಳಿಸಿದರಲ್ಲದೆ ತನ್ನ ದುಡಿಮೆಯಿಂದಲೇ ದೊಡ್ಡ ಜಾಗ ಮತ್ತು ಬಂಗಲೆ ಖರೀದಿಸಿ ವಾಸಿಸತೊಡಗಿದರು: ಮಗ ದಯಾನಂದ ಕೂಡ ಆ ವೇಳೆಗೆ ವಕೀಲಿ ವೃತ್ತಿಯಲ್ಲಿ ಹೆಸರು ಗಳಿಸಿದ್ದು ಅವರಿಗೆ ವರದಾನವಾಯಿತು.

ಕೆ. ಆರ್. ಕಾರಂತರ ವಕೀಲಿ ವೃತ್ತಿಯ ಕುರಿತು ಅನೇಕ ದಂತ ಕಥೆಗಳಿವೆ. ಮಂಗಳೂರಿನ ಕವಿ, ಲೇಖಕ, ವಾಗ್ಮಿ ದಾಮೋದರ ಬಾಳಿಗ ಒಮ್ಮೆ ಹೀಗೆ ಹೇಳಿದರಂತೆ – "ಕಾರಂತರು ನಿರ್ಭೀತ ವಕೀಲರಷ್ಟೇ ಅಲ್ಲ, ಕುಶಲರೂ ಕಾನೂನಿನ ಸೂಕ್ಷ್ಮವನ್ನು ಅರಿತ ತಜ್ಞರೂ ಆಗಿದ್ದಾರೆ. ಸ್ವಜಾತಿಯವರಲ್ಲಿ (ಗೌಡ ಸಾರಸ್ವತರಲ್ಲಿ) ಅನೇಕ ಪ್ರಸಿದ್ಧ ವಕೀಲರಿದ್ದರೂ ಒಂದು ದೊಡ್ಡ ದಾವೆಯ ಸಂಬಂಧ ನಾನು ಕಾರಂತರನ್ನೇ ವಕೀಲರನ್ನಾಗಿ ಆಯ್ಕೆ ಮಾಡಿಕೊಂಡೆ. ಕಾರಂತರು ವಕೀಲರಾಗಿದ್ದರೆ ಆ ಕೇಸು ಗೆದ್ದಂತೆಯೇ ಸರಿ. ಯಾಕೆಂದರೆ ನ್ಯಾಯಾಧೀಶರ ಅರ್ಧಶಕ್ತಿಯನ್ನೇ ಅವರು ಹೀರಿಬಿಡುತ್ತಾರೆ!" ಕಾರಂತರ ಬಗ್ಗೆ ಇದಕ್ಕಿಂತ ದೊಡ್ಡ ಶಿಫಾರಸು ಮಾತು ಬೇರೆ ಬೇಕಿಲ್ಲ.

ಬೆಂಗಳೂರಲ್ಲಿದ್ದರೂ ಕಾರಂತರ ಹೃದಯ ಮಂಗಳೂರಿಗಾಗಿ ತುಡಿಯುತ್ತಿತ್ತು. ಅವರು ಮಂಗಳೂರಿಗೆ ಹೊರಡುವ ಮುನ್ನ ತನ್ನ ಆಪ್ತೇಷ್ಟರಿಗೆಲ್ಲ ಮುಂಚಿತವಾಗಿ ತನ್ನ ಪ್ರವಾಸದ ವಿವರಗಳನ್ನು ವಾಸ್ತವ್ಯ ಇತ್ಯಾದಿಗಳನ್ನು ತಿಳಿಸಿ, ಭೇಟಿಯಾಗುವ ಅಪೇಕ್ಷೆ ವ್ಯಕ್ತಪಡಿಸುತ್ತಿದ್ದರು.

ತನ್ನ ಕೊನೆಗಾಲದಲ್ಲಿ ಆತ್ಮೀಯರಾದ ಭಾಸ್ಕರ ಶೆಟ್ಟಿ ಕಟ್ಟೆಮಾರ್ ಅವರಿಗೆ ಪತ್ರ ಬರೆದು, ಉಳಿದೆಲ್ಲ ವಿಷಯಗಳ ಬಳಿಕ, ತನಗೆ ಮದುವೆಯಾದಾಗ ೨೨ ವರ್ಷ ೭ ತಿಂಗಳೆಂದೂ, ತನ್ನ ಪತ್ನಿಗೆ ೧೦ ವರ್ಷ ೧೦ ತಿಂಗಳೆಂದೂ ಮತ್ತು ತಮ್ಮ ದಾಂಪತ್ಯದ ಬಾಳ್ವೆ ೬೧ ವರ್ಷ ೧೧ ತಿಂಗಳೆಂದೂ ಬರೆದಿದ್ದರು. ೧೯೭೧ ರ ಫೆಬ್ರವರಿಯಲ್ಲಿ ಕೋಟದಲ್ಲಿ ತಮ್ಮ ತಂದೆ ಶೇಷ ಕಾರಂತರು ಕಟ್ಟಿಸಿದ ಮನೆಯಲ್ಲಿ ಕೊನೆಯ ಬಾರಿ ಊಟ ಮಾಡಿದುದಾಗಿಯೂ ಬರೆದರು. ಒಮ್ಮೆ ಕಟ್ಟೆಮಾರ್, ಕಾರಂತರನ್ನು ಬೆಂಗಳೂರಲ್ಲಿ ಅವರ ನಿವಾಸದಲ್ಲಿ ಭೇಟಿಯಾದಾಗ ಅನಾರೋಗ್ಯ

ದಲ್ಲಿದ್ದ ಕಾರಂತರು "ಹೆಂಡತಿ ನನಗಿಂತ ಮೊದಲೇ ಸತ್ತಳು. ಒಳ್ಳೆಯದೇ ಆಯಿತು. ಇಲ್ಲವಾದರೆ ಅವಳಿಗೆ ಕಷ್ಟವಾಗುತ್ತಿತ್ತು." ಎಂದು ದುಃಖ ತೋಡಿಕೊಂಡರಂತೆ. "ನಾನು ಹೊರಟು ನಿಂತಾಗ ನನ್ನ ತಲೆಗೆ ಎರಡೂ ಕೈಗಳನ್ನಿಟ್ಟು ನನ್ನನ್ನು ಹರಸಿದರು" ಎಂದು ಅವರು ಬರೆಯುತ್ತಾರೆ.

ಕಾರಂತರು ತಾನು ನಂಬಿರುವ ಧ್ಯೇಯಕ್ಕಾಗಿ ಅದ್ವಿತೀಯವಾಗಿ ಹೋರಾಡುವವರು ಎನ್ನುವುದರ ಜೊತೆಗೆ ಆದರ್ಶ ಗೃಹಸ್ಥರೂ ಹೌದು ಎನ್ನುವುದು ಸಂತೋಷದ ಸಂಗತಿ. ಸರ್ವವಿಧದಲ್ಲಿಯೂ ಶ್ರೀ ಕಾರಂತರದು ದೊಡ್ಡ ವ್ಯಕ್ತಿತ್ವ, ದೊಡ್ಡ ಜೀವನ, ದೊಡ್ಡ ಸಾಧನೆ" ಎಂದು ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಕಾರಂತರನ್ನು ಸ್ಮರಿಸುತ್ತಾರೆ.

೧೯೭೪ರ ಜನವರಿ ೭ರಂದು ಬೆಂಗಳೂರಿನಲ್ಲಿ ಹೈಕೋರ್ಟ್‌ನಲ್ಲಿ ವಾದಿಸುತ್ತಿದ್ದಾಗಲೇ ಮೆದುಳು ಆಘಾತಕ್ಕೆ ಗುರಿಯಾಗಿ ಕಾರಂತರು ವೃತ್ತಿಯಿಂದ ವಿರಮಿಸಬೇಕಾಯಿತು. ಮುಂದಿನ ಐದಾರು ವರ್ಷ ಮನೆಯಿಂದ ಹೊರಬರಲಾರದ ವಿರಾಮಸ್ಥಿತಿಯಲ್ಲಿ ಅವರಿದ್ದರು. ಆಗ ತನ್ನ ನೂರಾರು ಅಭಿಮಾನಿಗಳಿಗೆ, ಬಾಲ್ಯ ಸ್ನೇಹಿತರಿಗೆ, ಆತ್ಮೀಯರಿಗೆ ಪತ್ರಗಳನ್ನು ಬರೆಯುತ್ತಿದ್ದರು. ಭೇಟಿಯಾಗಲು ಬಂದವರೊಡನೆ ಆತ್ಮೀಯ ಮಾತುಕತೆ, ಮಾರ್ಗದರ್ಶನ, ತನ್ನ ಸುದೀರ್ಘ ಸಾರ್ವಜನಿಕ ಜೀವನದ ಕನಸು ನನಸುಗಳನ್ನು, ಅದರ ಬಿಟ್ಟ ಗೊಣಸುಗಳನ್ನು ಕೂಡಿಸುವ ಕೆಲಸ.

೭-೧-೧೯೭೪ರಂದು ಹೈಕೋರ್ಟ್‌ನಲ್ಲಿ ಒಂದು ಜಟಿಲವಾದ ಅಪೀಲಿನಲ್ಲಿ ಸುದೀರ್ಘ ವಾದವನ್ನು ಆರಂಭಿಸಿದರು. ಅಂದು ಬೆಳಗ್ಗೆ ಕಾರಂತರನ್ನು ಪರೀಕ್ಷಿಸಿದ್ದ ವೈದ್ಯರು ರಕ್ತದ ಒತ್ತಡ ಹೆಚ್ಚಾಗಿರುವುದರಿಂದ ಅಂದು ವಿಶ್ರಾಂತಿ ಪಡೆಯಬೇಕೆಂದು ಸಲಹೆ ನೀಡಿದ್ದರು. ಆದರೆ ಕಾರಂತರು ಹಿಡಿದ ಕೆಲಸವನ್ನು ಅರ್ಧದಲ್ಲಿ ಬಿಡುವ ಜಾಯಮಾನದವರಲ್ಲ. ಕಕ್ಷಿಗಾರನು ಅವರಿಗೆ ಒಮ್ಮೆ ತನ್ನ ವಕಾಲತನ್ನು ಕೊಟ್ಟರಾಯಿತು. ಅವನ ಪರವಾದ ವ್ಯವಹರಣೆಯಲ್ಲಿ ಒಂದಿನಿತು ಅಸಡ್ಡೆ ಮಾಡುವವರಲ್ಲ. ಹೈಕೋರ್ಟ್‌ನಲ್ಲಿ ಅಂದು ದಿನದ ಅಂತ್ಯದವರೆಗೂ ವಾದ ನಡೆದು ಮರುದಿನಕ್ಕೆ ಆ ಕೇಸು ಮುಂದುವರಿಯಿತು. ಮರುದಿನವೂ ಅವರನ್ನು ಪರೀಕ್ಷಿಸಿದ ವೈದ್ಯರು ರಕ್ತದ ಒತ್ತಡ ಹೆಚ್ಚಿರುವುದರಿಂದ ಅಂದಾದರೂ ವಿಶ್ರಾಂತಿ ಪಡೆಯುವಂತೆ ಸಲಹೆ ಮಾಡಿದರು. ಆದರೆ ಕಾರಂತರು ಅಂದೂ ವಾದ ಮುಂದುವರಿಸಿಯೇ ಬಿಟ್ಟರು. ವಾದ ಮೂರನೇ ದಿನಕ್ಕೆ ಮುಂದುವರಿಯಿತು. ಅಂದೂ ಕಾರಂತರು ವಾದ ಮುಂದುವರಿಸಿದರು. ಕೇಸು ನಾಲ್ಕನೇ ದಿನಕ್ಕೆ ಮುಂದುವರಿಯಿತು. ವೈದ್ಯರಿಂದ ಪರೀಕ್ಷೆ ಮತ್ತು ವಿಶ್ರಾಂತಿಗಾಗಿ ಅವರ ಸಲಹೆ

ನಡೆಯುತ್ತಲೇ ಇತ್ತು. ಕಾರಂತರು ಕೇಳುತ್ತಲೇ ಇರಲಿಲ್ಲ. ನಾಲ್ಕನೇ ದಿನ ಸಂಜೆ ಸುಮಾರು ನಾಲ್ಕೂವರೆ ಗಂಟೆ ವೇಳೆಗೆ ಅವರಿಗೆ ಸ್ಮೃತಿ ತಪ್ಪಿತು. ಮತ್ತೆ ಎಚ್ಚರವಾದುದು ಎರಡು ದಿನಗಳ ನಂತರ. (ಅವರು ಮಾತಾಡುವ ಸ್ಥಿತಿಗೆ ಬಂದ ಮೇಲೆ "ಇಡೀ ಕೋರ್ಟೇ ತಿರುಗುವಂತೆ ತೋರಿತು. ಆಮೇಲೆ ಏನಾಯಿತೆಂದು ನನಗೆ ಗೊತ್ತಾಗಲಿಲ್ಲ" ಎಂದರಂತೆ). ಪಾರ್ಶ್ವವಾಯು ಆಘಾತದಿಂದಾಗಿ ಅವರ ಕೈಕಾಲುಗಳಿಗೆ ಚಲಿಸುವ ಶಕ್ತಿಯಿರಲಿಲ್ಲ. ಸರಿಯಾಗಿ ಮಾತಾಡಲು ಆಗುತ್ತಿರಲಿಲ್ಲ.

ದೈಹಿಕವಾಗಿ ಕಾರಂತರ ಚಟುವಟಿಕೆ ಕಡಿಮೆಯಾಯಿತು. ವಕೀಲ ವೃತ್ತಿಯೂ ಅವರಿಂದ ದೂರವಾಯಿತು. ಆವರೆಗೂ ಸುಮಾರು ಇಪ್ಪತ್ತು ವರ್ಷ ಅವರೊಡನೆ ವಕೀಲಿ ವೃತ್ತಿ ನಡೆಸುತ್ತಿದ್ದ ಮಗ ದಯಾನಂದ ಕಾರಂತರೇ ಅವರ ವೃತ್ತಿ ಪರಂಪರೆಯನ್ನು ಮುಂದುವರಿಸಬೇಕಾಯಿತು. ಕಾರಂತರ ಮಗಂದಿರಲ್ಲಿ ಅವರೊಬ್ಬರೇ ವಕೀಲರು. ಉಳಿದವರೆಲ್ಲ (ರಮಾನಂದ, ಭಾಸ್ಕರ, ಜಗದೀಶ ಮತ್ತು ಕಮಲನಯನ) ಎಂಜಿನಿಯರರು.

ಕಾರಂತರು ದೈಹಿಕವಾಗಿ ಸೊರಗಿದರೂ ಅವರ ಮಾನಸಿಕ ಲವಲವಿಕೆ ಕುಂದಿರಲಿಲ್ಲ. ಓದುವುದು, ಬರೆಯುವುದು ಅವರ ಹುಟ್ಟು ಗುಣ. ಹಿಂದಿನ ನೆನಪು ಮರುಕಳಿಸಿ ದೊಡನೆ ಎಲ್ಲೆಲ್ಲಿಯೋ ಇದ್ದ ಸ್ನೇಹಿತರಿಗೆ ಪತ್ರಗಳನ್ನು ಬರೆಯುತ್ತಿದ್ದರು.

೧೯೭೭ ರಲ್ಲಿ ಅವರ ಪತ್ನಿ ಮೃತರಾದರು. ದುಃಖದಿಂದ ಅವರ ಚೇತನ ಕುಂದಿತು. ಆದರೂ ಅವರ ದೈನಂದಿನ ಚಟುವಟಿಕೆಗಳಿಗೆ ಚ್ಯುತಿ ಬರಲಿಲ್ಲ. ಆದರೆ ಬರಬರುತ್ತ ಆರೋಗ್ಯ ಕೆಡತೊಡಗಿತು. ದಯಾನಂದ ಕಾರಂತ, ಇವರ ಪತ್ನಿ ಶಕುಂತಲ, ಕಾರಂತರ ಕೊನೆಯ ಮಗಳು ವಿಜಯ ಕಾರಂತರ ಆರೈಕೆ ಮಾಡುತ್ತಿದ್ದರು. ಆಗ ಕಾರಂತರಿಗೆ ತಮ್ಮ ಆತ್ಮಕಥೆ ಬರೆಯಬೇಕೆಂಬ ಹಂಬಲವೂ ಇತ್ತು. ತಮ್ಮ "ಪ್ರವಾಸಿಯ ಪತ್ರಗಳು" ಪುಸ್ತಕವನ್ನು ತಿದ್ದಿ ಹೊಸ ಆವೃತ್ತಿ ತರಬೇಕೆಂಬ ಬಯಕೆಯೂ ಇತ್ತು. ಆತ್ಮಕಥೆಯ ಏಳೆಂಟು ಪುಟಗಳನ್ನು ಉಕ್ತ ಲೇಖನದ ಮೂಲಕ ಬರೆಸಿದ್ದರು. ಆದರೆ ಆ ಮಧ್ಯೆ ಕಾಸರಗೋಡು ಸಮಸ್ಯೆಯ ಬಗೆಗಿನ ಪತ್ರವ್ಯವಹಾರದಿಂದಾಗಿ ಆತ್ಮಕಥೆ ಬರೆವಣಿಗೆಗೆ ತೊಡಕುಂಟಾಯಿತು.

೧೯೭೯ರ ಕೊನೆಯಲ್ಲಿ ಸ್ನಾನದ ಮನೆಯಲ್ಲಿ ಕಾಲುಜಾರಿ ಬಿದ್ದು ಅವರ ಮೂಳೆ ಮುರಿಯಿತು. ಆ ಮೇಲೆ ಚಿಕಿತ್ಸೆ ನಡೆದು ಅವರು ಗುಣಮುಖರಾದರು. ಆಗ ವೈದ್ಯರು, ಅವರು ಇನ್ನು ಮುಂದೆ ಅತ್ತಿತ್ತ ನಡೆಯಬಾರದೆಂದೂ, ನಡೆದರೆ

ಎಲುಬು ಪುನಃ ಮುರಿಯಬಹುದೆಂದೂ ಎಚ್ಚರಿಸಿದರು. ಈ ಮಾತನ್ನು ಕೇಳಿದ ಕಾರಂತರು ಆಮೇಲೆ ಹೆಚ್ಚು ಕಡಿಮೆ ಮಾತನಾಡುವುದನ್ನೇ ಬಿಟ್ಟುಬಿಟ್ಟರು. ಈ ಸಲಹೆಯಿಂದಾಗಿ ಅವರಿಗೆ ತಮ್ಮ ಅನಾರೋಗ್ಯದ ಕುರಿತು ತೀವ್ರ ಗಾಬರಿ ಆಗಿರಬೇಕು. ೧೯೮೦ ರ ಫೆಬ್ರವರಿ ೧ ರಂದು ಕಾರಂತರು ಪ್ರಾಣತ್ಯಾಗ ಮಾಡಿದರು. ಹೀಗೆ ಸಲಗವೊಂದರ ಅಂತ್ಯವಾಯಿತು.

■

# ೧೨ ಸಿದ್ಧಿ ಸಾಧನೆ

ರಾಜಕೀಯ ಮತ್ತು ವಕೀಲಿ ಈ ಎರಡು ಕ್ಷೇತ್ರಗಳನ್ನು ಕೆ. ಆರ್. ಕಾರಂತರ ಪ್ರಮುಖ ಕ್ಷೇತ್ರಗಳೆಂದೂ ಕರ್ನಾಟಕ ಏಕೀಕರಣ, ಸಾಮಾಜಿಕ ಚಟುವಟಿಕೆಗಳು ಹಾಗೂ ಪತ್ರಿಕೋದ್ಯಮದ ಮೂಲಕ ಮಾಡಿದ ಲೇಖನ ವ್ಯವಸಾಯಗಳನ್ನು ಅವರ ಎರಡನೆಯ ಕಾರ್ಯಕ್ಷೇತ್ರವೆಂದೂ ಪರಿಗಣಿಸಬಹುದು.

ರಾಜಕೀಯ ಕ್ಷೇತ್ರದಲ್ಲಿ ಕಾರಂತರಿಗೆ ದೊಡ್ಡ ಯಶಸ್ಸು ಪ್ರಾಪ್ತವಾಗಲಿಲ್ಲ. ರಾಜಕೀಯ ರಂಗದಲ್ಲಿ ಅವರು ಏರಿದ ಎತ್ತರವನ್ನು ಗಮನಿಸಿದರೆ ಅಧಿಕಾರ ರಾಜಕೀಯ ಅವರಿಗೆ ಹೆಚ್ಚಾಗಿ ದಕ್ಕಲಿಲ್ಲ ಎಂದೇ-ಹೇಳಬೇಕು. ಒಂದು ಹಂತದಲ್ಲಿ ರಾಷ್ಟ್ರೀಯ ಮಟ್ಟಕ್ಕೇರಿದ ಅವರು ತಮ್ಮ ಪ್ರಾಮಾಣಿಕತೆ, ಕಠಿಣ ದುಡಿಮೆ, ಬುದ್ಧಿವಂತಿಕೆ, ಸಾಮರ್ಥ್ಯ, ಪ್ರತಿಭೆಗಳಿಂದ ಮಿಂಚಿದರೂ – ಖಂಡತುಂಡವಾದ ಮಾತು, ನಿಷ್ಠುರ ನಡವಳಿಕೆ, ರಾಜಿ ಮಾಡಿಕೊಳ್ಳದ ಮನೋಭಾವ, ಹಟವಾದಿ ನಿಲುವು ಮತ್ತು ಓಲೈಸುವ ಬುದ್ಧಿ ಇಲ್ಲದೇ ಇದ್ದುದರಿಂದ ಸಿಗಬೇಕಾದ ಅಧಿಕಾರಸ್ಥಾನಗಳು ಸಿಕ್ಕದೇ ಹೋದವು. ಆದರೆ ಸಿಗದಿದ್ದುದಕ್ಕಾಗಿ ಅವರೆಂದೂ ಬೇಸರ ಪಟ್ಟುಕೊಳ್ಳಲಿಲ್ಲ. ರಾಜಕೀಯವೆಂಬುದು ಅವರಿಗೆಂದೂ ನಿರಾಶ್ರಿತರ ಆಶ್ರಯಸ್ಥಾನವಾಗಿರಲಿಲ್ಲ. ಚುನಾವಣಾ ಖರ್ಚುವೆಚ್ಚಗಳ ಕುರಿತು – ಆಯೋಗದ ನಿರ್ದೇಶನದಂತೆ – ರೂಪೈ ಪೈಸೆಗಳ ಲೆಕ್ಕವಿಟ್ಟವರು ಅವರು. ಚುನಾವಣೆಯಲ್ಲಿ ಸೋತ ಮರುದಿನ ಬಾಕಿ ತೀರಿಸಬೇಕಾದವರ ಲೆಕ್ಕ ಚುಕ್ತಾ ಮಾಡಿ 'ಕಳೆದುದನ್ನು ವಕೀಲಿಯಲ್ಲಿ ಸಂಪಾದಿಸಬಲ್ಲೆ' ಎಂದು ಆತ್ಮವಿಶ್ವಾಸದಿಂದ ನುಡಿದವರು.

ಒಬ್ಬ ವ್ಯಕ್ತಿ ಯಾವ ಕ್ಷೇತ್ರದಲ್ಲಿ ಸಾಧನೆ – ಸಿದ್ಧಿ ಗಳಿಸಿದ್ದಾನೋ ಅದೇ ವೃತ್ತಿಯ ಉತ್ತುಂಗದಲ್ಲಿ ಸಾವು ಪಡೆಯುವುದು ಸಿದ್ಧಿಯ ಒಂದು ಅತ್ಯುತ್ತಮ ಉದಾಹರಣೆ ಎಂಬ ಮಾತಿದೆ. ಶ್ರೇಷ್ಠ ಸಂಗೀತಗಾರನೊಬ್ಬ ಹಾಡುತ್ತ ಹಾಡುತ್ತಲೇ ರಂಗದಲ್ಲಿ ಕಣ್ಮರೆಯಾಗುವುದು, ಯಕ್ಷಗಾನ ಕಲಾವಿದನೊಬ್ಬ ನರ್ತಿಸುತ್ತಿರುವಾಗಲೇ ಅಸ್ತಂಗತನಾಗುವುದು ಇವೆಲ್ಲ ಆ ವೃತ್ತಿಯಲ್ಲಿ ಅವರು ಗಳಿಸುವ ತಲ್ಲೀನತೆಯನ್ನು ತೋರಿಸುತ್ತದೆ. ಕೆ. ಆರ್. ಕಾರಂತರು ತಮ್ಮ ೮೦ ರ ಇಳಿವಯಸ್ಸಿನಲ್ಲಿಯೂ ಹೈಕೋರ್ಟ್‌ನಲ್ಲಿ ವಾದಿಸುತ್ತಿದ್ದರೆಂದರೆ ಅವರ ಕ್ಷಮತೆಯನ್ನು ಊಹಿಸಬಹುದು. ಮತ್ತು ವಕೀಲಿ ವೃತ್ತಿಯ ಉತ್ತುಂಗದಲ್ಲಿ – ಆ ವೃತ್ತಿ ಮಾಡುತ್ತಿದ್ದಾಗಲೇ –

ಮೂರ್ಛೆ ಹೋಗಿ ಬಿದ್ದುಬಿಟ್ಟರು.

ಕೆ. ಆರ್. ಕಾರಂತರ ಮೊದಲ ಆದ್ಯತೆ ವಕೀಲಿ. ಅದರಲ್ಲಿ ಅವರು ಸಾಧನೆಯನ್ನೂ ಸಿದ್ಧಿಯನ್ನೂ ಗಳಿಸಿದರು. ಎರಡನೆಯ ಕಾರ್ಯಕ್ಷೇತ್ರ ರಾಜಕೀಯ. ಅಲ್ಲೂ ತಕ್ಕ ಮಟ್ಟಿಗೆ ಯಶಸ್ಸು ಸಂಪಾದಿಸಿದರು.

ಮೂರನೆಯ ಕ್ಷೇತ್ರ ಕರ್ನಾಟಕ ಏಕೀಕರಣದ ಹೋರಾಟ. ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ಅಧ್ವರ್ಯುಗಳಲ್ಲಿ ಅವರೊಬ್ಬರು. 'ಭಾರತಕ್ಕೆ ಸ್ವಾತಂತ್ರ್ಯ; ಕರ್ನಾಟಕಕ್ಕೆ ಏಕತಂತ್ರ' ಇದು ಅವರು ಕೊಟ್ಟ ಮಂತ್ರ. ಹಳೆಯ ಮೈಸೂರು ಪ್ರಾಂತ್ಯ, ಹೈದರಾಬಾದ್ ಕರ್ನಾಟಕ, ಮದ್ರಾಸ್ ಪ್ರಾಂತದಲ್ಲಿದ್ದ ಕನ್ನಡ ಪ್ರದೇಶ ಹಾಗೂ ಮುಂಬೈ ಕರ್ನಾಟಕದಲ್ಲಿದ್ದ ಕನ್ನಡ ಪ್ರದೇಶಗಳನ್ನು ಒಗ್ಗೂಡಿಸಿವಿಶಾಲ ಕರ್ನಾಟಕವನ್ನಾಗಿ ರೂಪಿಸಿದ ಮುಂದಾಳುಗಳಲ್ಲಿ ಅವರೊಬ್ಬರು. ಆದರೆ ಕಾಸರಗೋಡನ್ನು ಕೇರಳಕ್ಕೆ ಸೇರಿಸಿದುದು ಅವರ ಕೈ ಕತ್ತರಿಸಿದಂತಾಯಿತು. ತಮ್ಮ ಕೊನೆಯ ಕಾಲದವರೆಗೂ ಕಾಸರಗೋಡನ್ನು ಕರ್ನಾಟಕದೊಂದಿಗೆ ಸೇರಿಸಲು ಹೋರಾಡಿದರು. ಶೋಲಾಪುರ, ಅಕ್ಕಲಕೋಟೆ, ನೀಲಗಿರಿ ಮುಂತಾದ ಕನ್ನಡ ಪ್ರದೇಶಗಳು ಕರ್ನಾಟಕದಿಂದ ಹೊರಗುಳಿಯುವಂತಾದುದಕ್ಕೆ ಅವರು ಅತೀವ ದುಃಖಿಸಿದರು.

ಕಾರಂತರ ಇನ್ನೊಂದು ಕ್ಷೇತ್ರ ಪತ್ರಿಕೋದ್ಯಮ; ಲೇಖನ ವ್ಯವಸಾಯ. 'ವಿಚಾರವಾಣಿ' ಎಂಬ ಪತ್ರಿಕೆಯನ್ನು ಕಿರಿಯ ಸಹೋದರ ಡಾ. ಕೋಟ ಶಿವರಾಮಕಾರಂತರೊಂದಿಗೆ ಸೇರಿ ಬಹುಕಾಲ ನಡೆಸಿದರು. ಅದಕ್ಕಾಗಿ ಸಾವಿರಾರು ಸಂಪಾದಕೀಯಗಳನ್ನು, ಲೇಖನಗಳನ್ನು ಬರೆದರು. ದೇಶ ವಿದೇಶಗಳಲ್ಲಿ ಪ್ರವಾಸ ಮಾಡಿ ಪ್ರವಾಸ ಲೇಖನಗಳನ್ನು ಬರೆದರು. ಈ ಕ್ಷೇತ್ರದಲ್ಲಿಯೂ ತೃಪ್ತಿಕರವಾದ ಸಾಧನೆ ಮಾಡಿದರು.

ಮಂಗಳೂರಿನ ಹಿರಿಯ ಪತ್ರಕರ್ತ ವೈ. ಮಹಾಲಿಂಗ ಭಟ್ ಹೀಗೆ ಬರೆಯುತ್ತಾರೆ – "ಕೋಟ ರಾಮಕೃಷ್ಣ ಕಾರಂತರಂಥ ವ್ಯಕ್ತಿಗಳು ಕಾಣಿಸುವುದು ಅಪರೂಪ. ಯಾವುದೇ ಎಳೆತ–ಸೆಳೆತಗಳಿಗೆ ಸಿಕ್ಕದೆ ಬರಿಯ ಮೌಲ್ಯಾಧಾರಿತ ತತ್ತ್ವಗಳಿಗೆ ಮಾತ್ರ ಅಂಟಿಕೊಳ್ಳುವ ಇಂಥವರು ಇಷ್ಟರವರೆಗೆ ಸಮಗ್ರ ಕರ್ನಾಟಕದಲ್ಲಿಯೇ ಆಗಿಲ್ಲ. ಮುಂದಕ್ಕೆ ಆಗುವ ಲಕ್ಷಣವೂ ಇಲ್ಲ. ಕೆ. ಆರ್. ಕಾರಂತರ ರಾಜಕಾರಣದ ಮುಂದೆ ಈಗಿನವರು ಏನೂ ಅಲ್ಲ. ಎಡಬದಿಯ ಬರಿಯ ಸೊನ್ನೆಗಳು ಅಷ್ಟೆ". ಈ ಮಾತಿನಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಸೋಲನ್ನು ಸಮಚಿತ್ತದಿಂದ ತೆಗೆದುಕೊಂಡು, ಮರುದಿನದಿಂದಲೇ ನಿಸ್ವಾರ್ಥವಾಗಿ ದೇಶಸೇವೆಗೆ, ಸಮಾಜಸೇವೆಗೆ ತೆರಳಿದ ಇನ್ನೊಬ್ಬ ನಾಯಕ ತೀರ ಅಪೂರ್ವವೇ ಸರಿ!

■

# ೧೩. ಇತರರ ದೃಷ್ಟಿಯಲ್ಲಿ ಕಾರಂತರು

ಕೆ. ಆರ್. ಕಾರಂತರಿಗೆ ಒಟ್ಟು ಹತ್ತು ಮಂದಿ ಮಕ್ಕಳು. ಐವರು ಗಂಡು ಮತ್ತು ಐವರು ಹೆಣ್ಣು ಮಕ್ಕಳು. ಗಂಡು ಮಕ್ಕಳಲ್ಲಿ ಈಗ ಬದುಕಿರುವವರೆಂದರೆ ರಮಾನಂದ ಮತ್ತು ಭಾಸ್ಕರ ಮಾತ್ರ. ಹೆಣ್ಣು ಮಕ್ಕಳಲ್ಲಿ ಶಾಂತಿರಾವ್ (೮೫ ರ ವಯೋವೃದ್ಧೆ) ಈಗ ಮಂಗಳೂರಲ್ಲಿ ಮಗನ ಫ್ಲ್ಯಾಟ್‌ನಲ್ಲಿ ವಾಸಿಸುತ್ತಿದ್ದಾರೆ. (ಉಳಿದಿಬ್ಬರು ಹೆಣ್ಣು ಮಕ್ಕಳಾದ ಸುಮತಿ ರಾವ್ ಮತ್ತು ವಿಜಯಲಕ್ಷ್ಮೀ ರಾವ್ ಪ್ರಸ್ತುತ ಬೆಂಗಳೂರಲ್ಲಿ ತಮ್ಮ ಮಕ್ಕಳ ಜೊತೆ ವಾಸಿಸುತ್ತಿದ್ದಾರೆ). ಓಡಾಡಲು ಶಕ್ತರಾಗಿಲ್ಲ. ಆದರೆ ತಂದೆಯ ಬಗ್ಗೆ ಮಾತು ಬಂದರೆ ಅತ್ಯುತ್ಸಾಹದಿಂದ ಮಾತಾಡುತ್ತಾರೆ:

"ನಮಗೆ ತಂದೆಯವರೊಂದಿಗೆ ಹೆಚ್ಚು ಕಾಲ ಬೆರೆಯಲು – ಮಾತಾಡಲು ಅವರು ಸಿಗುತ್ತಿರಲಿಲ್ಲ. ಬೆಳಗ್ಗೆ ೮ ಗಂಟೆಗೆ ಅವರು ಕಚೇರಿಗೆ ಹೋದರೆ ಬರುವಾಗ ರಾತ್ರಿಯಾಗಿರುತ್ತಿತ್ತು. ರಾಜಕೀಯದಲ್ಲಿ ಇದ್ದಾಗಲಂತು ಕೆಲಸ, ಪ್ರವಾಸ, ಭಾಷಣ ಅಂತ ಜನರ ಮಧ್ಯದಲ್ಲೇ ಇರುತ್ತಿದ್ದರು. ಕೆಲವು ಕಾಲ ಜೈಲಿನಲ್ಲಿ ಇದ್ದರು. ಹಾಗಾಗಿ ನಮಗೆ ತೀರ ಹತ್ತಿರದಿಂದ ಅವರೊಂದಿಗೆ ಕಾಲ ಕಳೆಯುವ ಸೌಭಾಗ್ಯ ಇರಲಿಲ್ಲ.

ಆದರೆ ನಮ್ಮೆಲ್ಲರ ಶಿಕ್ಷಣದ ಬಗ್ಗೆ ಅವರಿಗೆ ಅತೀವ ಕಾಳಜಿ ಇತ್ತು. ಗಂಡು ಮಕ್ಕಳು, ಹೆಣ್ಣು ಹುಡುಗಿಯರು ಎಂಬ ಭೇದ ಇಲ್ಲದೆ ಎಲ್ಲರಿಗೂ ಒಳ್ಳೆಯ ಶಿಕ್ಷಣ ಕೊಡಿಸಿದರು. ನಾನು ಮಂಗಳೂರಲ್ಲಿ ಬೆಸೆಂಟ್ ಕಾಲೇಜಿನಲ್ಲಿ ಓದಿದೆ. ಕೆಲವೊಮ್ಮೆ ಬೆಳಗ್ಗೆ ಕಚೇರಿಗೆ ಹೋಗುವಾಗ ನಮ್ಮನ್ನು ಶಾಲೆ –ಕಾಲೇಜಿಗೆ ಕಾರಲ್ಲಿ ಬಿಟ್ಟು ಅನಂತರ ಅವರು ಕಚೇರಿಗೆ ಹೋಗುತ್ತಿದ್ದರು.

ನಮ್ಮ ತಂದೆಯವರಿಗೆ ಸಮಯ ಪಾಲನೆ ಬಗ್ಗೆ ಕಾಳಜಿ ಇತ್ತು. ಜೀವನದಲ್ಲಿ ತುಂಬ ಶಿಸ್ತು ಅಳವಡಿಸಿಕೊಂಡಿದ್ದರು. ಸಮಯ ಹಾಳು ಮಾಡಿದರೆ ಗದರುತ್ತಿದ್ದರು. ನಾವು ಸದಾ ಒಂದಿಲ್ಲೊಂದು ಕೆಲಸ ಅಥವಾ ಓದಿನಲ್ಲಿ ತೊಡಗಿರಬೇಕಾಗಿತ್ತು. ಎಲ್ಲರನ್ನು ಪುಸ್ತಕ ಹಿಡಿದು ಓದಲು ಪ್ರೋತ್ಸಾಹಿಸುತ್ತಿದ್ದರು.

ನಮ್ಮ ಮನೆಗೆ ಗಣ್ಯರು, ಅತಿಗಣ್ಯರೆಲ್ಲ ಬರುತ್ತಿದ್ದರು. ಹಾಗಾಗಿ ಚಿಕ್ಕಂದಿನಲ್ಲೇ ಅವರನ್ನೆಲ್ಲ ನೋಡುವ, ಮಾತಾಡುವ ಅವಕಾಶ ಸಿಕ್ಕಿತು. ವಿ.ವಿ. ಗಿರಿ, ಪ್ರಕಾಶಂ, ನಿಜಲಿಂಗಪ್ಪ, ರಾಜಗೋಪಾಲಾಚಾರಿ ಮೊದಲಾದ ಇನ್ನೂ ಅನೇಕರು ಮನೆಗೆ ಬಂದು ಹೋಗುತ್ತಿದ್ದ ನೆನಪಾಗುತ್ತಿದೆ...

ನಮ್ಮ ತಂದೆಯವರ ಶಿಸ್ತಿನಿಂದಾಗಿಯೇ ನಾವು ಬೆಳೆದು ದೊಡ್ಡವರಾದ ಮೇಲೆ ಒಂದೊಂದು ರಂಗದಲ್ಲಿ ಸಾಧಿಸಲು ಸಾಧ್ಯವಾಯಿತೆನ್ನಬಹುದು. ಒಂದು ಸಲ ಹೀಗಾಯಿತು: ಯಾವುದೋ ಕೌಟುಂಬಿಕ ಕಾರ್ಯಕ್ರಮಕ್ಕೆ ನಾವೆಲ್ಲ ಹೋಗಬೇಕಾಗಿತ್ತು. ಬೆಳಗ್ಗೆ ೮.೩೦ ಕ್ಕೆ ಹೊರಡುವುದೆಂದಾಯಿತು. ೮.೩೦ಕ್ಕೆ ಎಲ್ಲರೂ ಸಿದ್ಧವಾಗಿರಬೇಕೆಂದು ತಂದೆಯವರು ಹೇಳಿದರು. ಆದರೆ ಕೆಲಸಗಳ ಒತ್ತಡದಲ್ಲಿ ೮.೩೦ ಕ್ಕೆ ಹೊರಡಲಾಗಲಿಲ್ಲ. ತಾಯಿ, ಅಕ್ಕ ತಂಗಿಯರೆಲ್ಲ ಹೊರಡುವುದು ತಡವಾಯಿತು. ತಂದೆಯವರು ೮.೩೦ಕ್ಕೆ ಕಾರಿನ ಬಳಿ ತೆರಳಿ ತಾವೊಬ್ಬರೇ ಕಾರು ಚಲಾಯಿಸಿಕೊಂಡು ಕಾರ್ಯಕ್ರಮಕ್ಕೆ ಹೊರಟುಬಿಟ್ಟರು!

ಚಿಕ್ಕಪ್ಪ ಶಿವರಾಮ ಕಾರಂತರು ನಡೆಸುತ್ತಿದ್ದ ಕಾರ್ಯಕ್ರಮಗಳಲ್ಲಿ, ನಾಟಕಗಳಲ್ಲಿ, ನೃತ್ಯಗಳಲ್ಲಿ ಭಾಗವಹಿಸುವಂತೆ ತಂದೆಯವರು ನಮ್ಮನ್ನು ಪ್ರೋತ್ಸಾಹಿಸುತ್ತಿದ್ದರು. ಪುತ್ತೂರಿನಲ್ಲಿ ಡಾ. ಶಿವರಾಮ ಕಾರಂತರು ಪ್ರತಿವರ್ಷ ದಸರಾ ಕಾರ್ಯಕ್ರಮಗಳನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಆಗ ಎಷ್ಟೋ ಬಾರಿ ನಾನು ಮತ್ತು ನನ್ನ ಅಕ್ಕ ನೃತ್ಯ ಕಾರ್ಯಕ್ರಮ ನಡೆಸಿಕೊಟ್ಟಿದ್ದೇವೆ.

ಗಾಲ್ಫ್ ಮತ್ತು ಟೆನ್ನಿಸ್ ಆಟಗಳೆಂದರೆ ಅಪ್ಪನಿಗೆ ತುಂಬಾ ಇಷ್ಟ. ಕೆಲಸದ ಒತ್ತಡ ಎಷ್ಟೇ ಇದ್ದರೂ ಸಂಜೆ ಹೊತ್ತು ಸ್ವಲ್ಪ ಸಮಯ ಈ ಆಟಗಳಲ್ಲಿ ಕಳೆಯುತ್ತಿದ್ದರು. ಮಂಗಳೂರಿನ ಬಾವುಟಗುಡ್ಡೆ ಮತ್ತು ಪದವಿನಲ್ಲಿ ಈ ಆಟ ಆಡುವುದಕ್ಕೆ ಅವಕಾಶವಿತ್ತು.

ನಮ್ಮ ತಂದೆಯವರು ತುಂಬಾ ಕೆಲಸ ಕಾರ್ಯಗಳ ಒತ್ತಡದಲ್ಲಿದ್ದರೂ ನಮ್ಮೆಲ್ಲರ ಬೇಕು-ಬೇಡಗಳನ್ನು ಪರಾಂಬರಿಸುತ್ತಿದ್ದರು. ನಮಗೆ ಬೇಕು ಬೇಕಾದ್ದನ್ನೆಲ್ಲ ತೆಗೆದುಕೊಡುತ್ತಿದ್ದರು. ಯಾವುದರಲ್ಲೂ ಕಡಿಮೆ ಮಾಡಲಿಲ್ಲ. ಅವರೊಬ್ಬ ದೊಡ್ಡ ವ್ಯಕ್ತಿ. ಮಹಾನ್ ಸಾಧಕರು. ನಾವು ಅವರ ಮಕ್ಕಳು ಅಂತ ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ" ಎನ್ನುತ್ತಾರೆ ಶಾಂತಿ ರಾವ್. ಓಡಾಡಲು ಆಗದಿದ್ದರೂ, ವಯೋಮಾನದಿಂದ ಮಲಗಿದಲ್ಲೇ ಇದ್ದರೂ ಅವರ ತೇಜಸ್ಸು, ಜೀವಕಳೆ, ಜೀವನೋತ್ಸಾಹ ಎದೆ ತುಂಬುತ್ತದೆ.

ಭಾಸ್ಕರ ಕಾರಂತ ಇವರು ಕೆ.ಆರ್. ಕಾರಂತರ ಮೂರನೆಯ ಮಗ. ಮದರಾಸಿನ ಕಂಪೆನಿಯೊಂದರಲ್ಲಿ ಎಂಜಿನಿಯರ್ ಆಗಿದ್ದ ಇವರು ನಿವೃತ್ತಿಯ ನಂತರ ಪತ್ನಿಯ

ತವರೂರಾದ ಕಾರ್ಕಳದಲ್ಲಿ ನೆಲಸಿದ್ದಾರೆ. ಮಕ್ಕಳಿಬ್ಬರು (ಒಂದು ಗಂಡು, ಒಂದು ಹೆಣ್ಣು) ಶಿಕ್ಷಣ ಪಡೆದು ಬೇರೆ ಊರುಗಳಲ್ಲಿ ಉದ್ಯೋಗದಲ್ಲಿದ್ದಾರೆ. ಇಳಿವಯಸ್ಸಿನಲ್ಲಿ ಕಾರ್ಕಳದಲ್ಲಿ ಸಂತೃಪ್ತ ಜೀವನ ನಡೆಸುತ್ತಿರುವ ಭಾಸ್ಕರ ಕಾರಂತರು ತಂದೆಯ ನೆನಪಾದೊಡನೆ ಉಲ್ಲಸಿತರಾಗುತ್ತಾರೆ. ಸಂತೋಷದಿಂದ ಮಾತನಾಡತೊಡಗುತ್ತಾರೆ:

"ತಂದೆಯವರ ಶಿಸ್ತು, ಕಠಿಣ ದುಡಿಮೆ, ಪ್ರಾಮಾಣಿಕತೆ, ಸಮಯದ ಸದುಪಯೋಗ, ಕೊಟ್ಟ ಮಾತಿಗೆ ತಪ್ಪದ ಸದಾಚಾರದ ನಡವಳಿಕೆ, ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳುವ ನೇರತೆ ಈ ಮೊದಲಾದ ಸದ್ಗುಣಗಳನ್ನು ನಾನೂ ನನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದೇನೆ. ಮಕ್ಕಳಾದ ನಮಗೆಲ್ಲರಿಗೂ ಈ ಸದ್ಗುಣಗಳು ಉಡುಗೊರೆಯಾಗಿ ಬಂದಿವೆ.

ಇಂತಹ ನಡತೆ ಇದ್ದುದರಿಂದಲೇ ನಾವು ಜೀವನದಲ್ಲಿ ಮುಂದೆ ಬರಲು ಸಾಧ್ಯವಾಯಿತು. ನಾವೆಲ್ಲ ಆಯ್ದುಕೊಂಡ ಕ್ಷೇತ್ರದಲ್ಲಿ ವೃತ್ತಿ ನೈಪುಣ್ಯತೆ ( excel) ಪಡೆದುಕೊಳ್ಳಲು ಸಾಧ್ಯವಾಗಿರುವುದೇ ಈ ಕಾರಣದಿಂದ. ನಮಗೆ ಶಿಕ್ಷಣದ ಜೊತೆಗೆ ಸದ್ಗುಣ ಮತ್ತು ಸಂಸ್ಕಾರವನ್ನು ತಂದೆಯವರು ನೀಡಿದರು.

ನಾನು ಚಿಕ್ಕವನಿದ್ದಾಗ ನಡೆದ ಒಂದು ಘಟನೆ ನೆನಪಾಗುತ್ತದೆ. ತಂದೆಯವರು ಆಗ ಮದರಾಸಿನಲ್ಲಿ ಮಂತ್ರಿಯಾಗಿದ್ದರು. ಶಾಸನ ಸಭೆಗೆ ಅಥವಾ ಬೇರೆಲ್ಲಾದರೂ ಹೋಗುವಾಗ ತಂದೆಯವರು ಕೆಲವೊಮ್ಮೆ ನಮ್ಮನ್ನು ಕಾರಿನಲ್ಲಿ ಕರೆದೊಯ್ಯುತ್ತಿದ್ದರು. ಒಮ್ಮೆ ಇಂತಹುದೇ ಪ್ರಮುಖ ಸಭೆಯೊಂದು ನಡೆಯುವಾಗ ನಾನು ಹೋಗಿದ್ದೆ. ತಂದೆಯವರು ಒಳಗೆ ಸಭೆಯಲ್ಲಿದ್ದರು. ನಾನು ಡ್ರೈವರ್ ಸೀಟಿನಲ್ಲಿ ಕುಳಿತು (ಡ್ರೈವರ್ ಕೂಡ ಅಲ್ಲೇ ಇದ್ದರು) ಕ್ಲಚ್, ಗೇರ್ ಮುಟ್ಟುತ್ತ ಆಗಾಗ ಹಾರ್ನ್ ಮಾಡುತ್ತಿದ್ದೆ. ತಂದೆಯವರಿಗೆ ಹಾರ್ನ್ ಶಬ್ದದಿಂದ ಇದು ತಮ್ಮದೇ ವಾಹನ ಎಂಬುದು ಖಚಿತವಾಯಿತು. ಸಭೆಯಿಂದ ಸೀದಾ ಹೊರಗೆ ಬಂದು, ನನ್ನ ಕಿವಿ ತಿರುಚಿ, ಬೆನ್ನಿಗೆ ಎರಡೇಟು ಬಿಗಿದು 'ಹಾಗೆಲ್ಲ ಮಾಡಬೇಡ ಸುಮ್ಮನಿರು, ಆಚೆ ಕುಳಿತುಕೋ' ಎಂದು ಗದರಿಸಿ ಮತ್ತೆ ಸಭೆಗೆ ಹೋದರು. ಸಂಜೆ ಮನೆಗೆ ಬಂದ ಬಳಿಕ 'ಅದು ಸರಕಾರೀ ವಾಹನ ಆಗಿರಬಹುದು. ಆದರೆ ದುರುಪಯೋಗ ಮಾಡಬಾರದು. ವಾಹನ ಕೆಟ್ಟು ಹೋದರೆ ಅನಗತ್ಯ ಖರ್ಚು ಬರುವುದಲ್ಲವೇ? ಸರಕಾರೀ ವಾಹನವಾದರೂ ನಿಯಮದಂತೆ, ಜಾಗರೂಕವಾಗಿ ನಿರ್ವಹಿಸಬೇಕು' ಎಂದು ಬುದ್ಧಿ ಹೇಳಿದರು. ಆ ಘಟನೆ ನನಗಿನ್ನೂ ನೆನಪಿದೆ ಮತ್ತು ಬದುಕಿನಲ್ಲಿ ಬಹುದೊಡ್ಡ ಒಂದು ಪಾಠ ಕಲಿಸಿತು" ಎಂದು ಭಾಸ್ಕರ ಕಾರಂತರು ನೆನಪಿಸಿಕೊಳ್ಳುತ್ತಾರೆ.

ಕೆ. ಆರ್. ಕಾರಂತರು ಸಚಿವರಾಗಿದ್ದ ಅವಧಿಯು ಯುದ್ಧ (ದ್ವಿತೀಯ ಪ್ರಪಂಚ ಯುದ್ಧ) ಮತ್ತು ಅದರ ಹಿಂದುಮುಂದಿನ ಅವಧಿಯಾಗಿದ್ದು ಆಗ ಎಲ್ಲೆಡೆಯಲ್ಲಿಯೂ ರೇಶನ್ ವ್ಯವಸ್ಥೆ ಜಾರಿಯಲ್ಲಿತ್ತು. ಅಕ್ಕಿ, ದವಸ ಧಾನ್ಯ, ತರಕಾರಿ ಎಲ್ಲದಕ್ಕು ಅಭಾವವಿದ್ದ ದಿನಗಳವು. ಮದುವೆ ಮುಂಜಿ ಅಥವಾ ಇನ್ನಾವುದೇ ಸಮಾರಂಭವಿರಲಿ ಮೂವತ್ತೈದು ಜನರಿಗಿಂತ ಹೆಚ್ಚು ಜನರನ್ನು ಆಹ್ವಾನಿಸಬಾರದು, ಅದ್ದೂರಿ ಮಾಡಬಾರದು ಎಂಬ ಕಾನೂನು ಇತ್ತು. ಅಂತಹ ಒಂದು ಸಂದರ್ಭದಲ್ಲಿ ಅವರ ಮಗನ ಉಪನಯನ ಕಾರ್ಯಕ್ರಮ ಇತ್ತು. ನೆಂಟರಿಷ್ಟರು, ಆತ್ಮೀಯರ, ಸ್ನೇಹಿತರ ಬಳಗ ದೊಡ್ಡದು. ಆದರೆ ಮೂವತ್ತೈದು ಮಂದಿಗಿಂತ ಹೆಚ್ಚು ಜನರನ್ನು ಕರೆಯುವಂತಿಲ್ಲ, ಏನು ಮಾಡುವುದು?

ಕಾರಂತರು ನಿಯಮವನ್ನು ಮೀರಲಿಲ್ಲ. ಮುಖ್ಯ ಕಾರ್ಯಕ್ರಮಕ್ಕೆ ಮೂವತ್ತೈದು ಮಂದಿಯನ್ನು ಮಾತ್ರ ಆಹ್ವಾನಿಸಿದರು. ಕಾರ್ಯಕ್ರಮದ ಬೆಳಗ್ಗೆ, ರಾತ್ರೆ, ಹಿಂದಿನ ದಿನ, ಮರುದಿನ ಎಂದೆಲ್ಲ ಉಳಿದ ನೆಂಟರಿಷ್ಟರು, ಮಿತ್ರರು, ಊರಿನ ಪ್ರಮುಖರು ಬಂದು ವಟುವನ್ನು ಆಶೀರ್ವದಿಸಿ ಆತಿಥ್ಯ ಸ್ವೀಕರಿಸಿ ತೆರಳಿದರು. ಈ ಸಂದರ್ಭವನ್ನು ಕೆ. ಆರ್. ಹಂದೆ (ಶಿಕ್ಷಣ ತಜ್ಞ) ನೆನಪಿಸಿಕೊಳ್ಳುವುದು ಹೀಗೆ–

"ಆಗ ಎಲ್ಲೆಡೆ ಆಹಾರ ಸಾಮಗ್ರಿಗಳಿಗೆ ಕಟ್ಟುನಿಟ್ಟಿನ ರೇಶನ್ ಪದ್ಧತಿ ಇತ್ತು. ಒಂದು ದಿನ ಕಾರಂತರು ಸಂಜೆ ತಮ್ಮ ಮನೆಗೆ ಹೋಗುವಾಗ ನಮ್ಮ ಹಾಸ್ಟೆಲಿನ ಹಾದಿಯಲ್ಲಿ ನಡೆದು ಹೋಗುತ್ತಿದ್ದರು. ನಾವು (ನಾನು ಮತ್ತು ಲಾ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲ್ ಪ್ರೊ. ಪರಮೇಶ್ವರ ಐತಾಳ) ಆಗ ಬಿ.ಎ. ತರಗತಿಯಲ್ಲಿ ಓದುತ್ತಿದ್ದೆವು. ಒಂದು ದಿನ ಹಾಸ್ಟೆಲಿನ ಗೇಟಿನ ಹತ್ತಿರ ನಮ್ಮಿಬ್ಬರನ್ನು ನೋಡಿ ಕಾರಂತರು ನಿಂತರು. ನಾವು ನಮಸ್ಕರಿಸಿ ಆಶ್ಚರ್ಯ–ಅಭಿಮಾನದಿಂದ ಅವರನ್ನೇ ನೋಡಿದೆವು. ಆಗ ಅವರು "ನೀವು ನಮ್ಮ ಊರಿನವರು (ಅಂದರೆ ಕೋಟದವರು) ನನ್ನ ಮಗನ ಉಪನಯನಕ್ಕೆ ನೀವಿಬ್ಬರೂ ಬರಲೇ ಬೇಕು. ಈಗ ರೇಷನ್ ಕಾಲ; ನಾನು ಯಾರಿಗೂ ಹೇಳುವುದಿಲ್ಲ. (ಅಂದರೆ ನೂರಾರು ಮಂದಿಗೆ ಆಹ್ವಾನ ಪತ್ರ ಕೊಟ್ಟು ಎಲ್ಲರನ್ನೂ ಆಹ್ವಾನಿಸುವುದಿಲ್ಲ) ನೀವು ಬಂದು ಬಿಡಿ" ಎಂದರು.

"ಅಷ್ಟು ದೊಡ್ಡ ಮನುಷ್ಯರಿಂದ ಆಮಂತ್ರಣ ಬಂತಲ್ಲ ಎಂದು ನಮಗೆ ಪರಮಾಶ್ಚರ್ಯ. ನಮಗಂತೂ ಆಗ ಹುಡುಗಬುದ್ಧಿ. ಕಾರಂತರು ಉಪಚಾರಕ್ಕೆ ಹಾಗೆ ಹೇಳಿದರೋ ಅಥವಾ ಹೃದಯ ತುಂಬಿ ಹೇಳಿದರೋ ಎಂದು ಪರೀಕ್ಷಿಸುವ ಕುತೂಹಲ. ನಾವಿಬ್ಬರೂ ಗಟ್ಟಿ ಮನಸ್ಸು ಮಾಡಿ ಉಪನಯನದ ದಿನ ಊಟಕ್ಕೆ ಸರಿಯಾಗಿ ಅವರಲ್ಲಿಗೆ ಹೋದೆವು. ಅಲ್ಲಿ ನಮಗೆ ಒಳ್ಳೆಯ ಸ್ವಾಗತವೇ ಕಾದಿತ್ತು. ಸ್ವತಃ ಕಾರಂತರೇ ಆದರದಿಂದ ನಮ್ಮನ್ನು ಮಾತನಾಡಿಸಿ ಒಳಗೆ ಕರೆದೊಯ್ದು

ಅಲ್ಲಿದ್ದ ಹಲವರಿಗೆ ಪರಿಚಯ ಮಾಡಿಸಿದರು. ಅಲ್ಲದೆ ಊಟ ಮಾಡುವಾಗಲೂ ಅನಂತರವೂ ನಮ್ಮನ್ನು ಚೆನ್ನಾಗಿ ಉಪಚರಿಸಿದರು. ದೊಡ್ಡ ಕಾರಂತರ ದೊಡ್ಡ ಗುಣ ನಮಗೆ ಅರಿವಾಯಿತು. ಸಣ್ಣವರು ಕಡೆಗಣಿಸಲ್ಪಡಬೇಕಾದವರಲ್ಲ; ಮುಂದಿನ ಜನಾಂಗ – ಅವರೂ ಭವ್ಯವ್ಯಕ್ತಿಗಳಾಗುತ್ತಾರೆ ಎಂಬ ಭಾವನೆ ಅವರಲ್ಲಿದ್ದಿರಬೇಕು" ಎಂದು ಕೆ. ಆರ್. ಹಂದೆಯವರು ತಿಳಿಸುತ್ತಾರೆ.

ಸರಕಾರೀ ಕೆಲಸ ಎಂದರೆ ದೇವರ ಕೆಲಸ ಎಂಬ ಮಾತಿದೆ. ಇದನ್ನು ಅಕ್ಷರಶಃ ಪಾಲಿಸಿದವರು ಕಾರಂತರು. ಕಚೇರಿ ಕೆಲಸವನ್ನು ಒತ್ತಟ್ಟಿಗೆ ಇಟ್ಟು ಸಾರ್ವಜನಿಕವಾಗಿ ಮೆರೆಯುವ ಅವಕಾಶವನ್ನು ಯಾವ ರಾಜಕಾರಣಿಯೂ ಬಿಟ್ಟುಕೊಡುವುದಿಲ್ಲ. ಕಾರಂತರು ಈ ಮಾತಿಗೊಂದು ಅಪವಾದ,

ಪ್ರೊ. ಕೆ. ಆರ್. ಹಂದೆಯವರು ಒಂದು ಉದಾಹರಣೆಯನ್ನು ನೀಡುತ್ತಾರೆ. "೧೯೪೬–೪೭ ರಲ್ಲಿ ನಾನು ಮದರಾಸಿನಲ್ಲಿ ಬಿ.ಟಿ. (ಬ್ಯಾಚುಲರ್ ಇನ್ ಟೀಚರ್ಸ್ ಟ್ರೈನಿಂಗ್) ತರಬೇತಿಯಲ್ಲಿದ್ದೆ. ಆಗ ಕೆ. ಆರ್. ಕಾರಂತರು ಪ್ರಕಾಶಂ ಮಂತ್ರಿಮಂಡಲದಲ್ಲಿ ಕಂದಾಯ ಮಂತ್ರಿಗಳಾಗಿದ್ದರು. ಆಗ ನಮ್ಮ ವಿದ್ಯಾರ್ಥಿ ಸಂಘದ ಆರಂಭೋತ್ಸವಕ್ಕೆ ಅವರನ್ನು ಆಹ್ವಾನಿಸಲು ವಿದ್ಯಾರ್ಥಿ ಮಿತ್ರರು ನನ್ನನ್ನು (ನಾನು ಅವರ ಊರಿನವನಾದುದರಿಂದ) ಅವರ ಮನೆಗೆ ಕರೆದುಕೊಂಡು ಹೋದರು. ನಾವು ಹೋದಾಗ ಕಾರಂತರು ಮನೆಯಲ್ಲಿ ಸರಕಾರೀ ಕಡತಗಳ ಮಧ್ಯೆ ಅವನ್ನು ಮನನ ಮಾಡುವುದರಲ್ಲಿ ತಲ್ಲೀನರಾಗಿದ್ದರು. ನಮ್ಮ ವಿನಂತಿಯನ್ನು ಕೇಳಿ ಅವರು,' ಈ ಫೈಲುಗಳ ರಾಶಿ ನೋಡಿ. ಈ ಸರಕಾರೀ ಕೆಲಸ ಮುಗಿಯುವ ಹಾಗಿಲ್ಲ. ಜನ ದೊಡ್ಡ ಆಸೆ–ಆಕಾಂಕ್ಷೆಗಳನ್ನು ನಮ್ಮ ಮೇಲೆ ಇಟ್ಟಿದ್ದಾರೆ. ನನಗೆ ಕೆಲಸ ಮುಖ್ಯವೇ ಹೊರತು, ಭಾಷಣ ಮುಖ್ಯವಲ್ಲ. ನೀವು ಪುರಸೊತ್ತಿರುವ ಜನರನ್ನು ಆರಿಸಿ, ನನ್ನಂತಹವನಿಂದ ನಿಮಗೆ ಪ್ರಯೋಜನವಿಲ್ಲ' ಎಂದು ನಮ್ರವಾಗಿ ಹೇಳಿ ನಮ್ಮನ್ನು ಕಳಿಸಿದರು." 'ಕರ್ತವ್ಯವೇ ದೇವರು' ( work is worship ) ಎಂಬ ಮಾತನ್ನು ಕೆ. ಆರ್. ಕಾರಂತರು ಅಕ್ಷರಶಃ ಪಾಲಿಸಿ ತೋರಿಸಿದರು. ಮಾತಿಗಿಂತ ಕೃತಿ ಮುಖ್ಯ ಎಂಬುದು ಅವರ ನಿಲುವು.

ವಿಷಯಗಳನ್ನು ವಿಶ್ಲೇಷಣೆ ಮಾಡುವಲ್ಲಿ, ಮೌಲ್ಯಮಾಪನ ಮಾಡುವಲ್ಲಿ ಅವರ ವಿಚಕ್ಷಣ ಬುದ್ಧಿ ತುಂಬ ಹರಿತವಾದದ್ದು. ಒಮ್ಮೆ ಒಂದು ಕಡೆ ಕಾಲೇಜು ವಾರ್ಷಿಕೋತ್ಸವದಲ್ಲಿ ಅವರ ಮುಖ್ಯ ಭಾಷಣವಾದ ಬಳಿಕ ಯಾರೋ ಒಬ್ಬರು ಅಹಿಂಸೆಯ ( non - violence) ಯಶಸ್ಸಿನ ಕುರಿತು ಒಂದು ಪ್ರಶ್ನೆ ಕೇಳಿದರಂತೆ (ಗಾಂಧೀಜಿಯವರ ಅಹಿಂಸಾ ಯುದ್ಧದ ಹಿನ್ನೆಲೆಯಲ್ಲಿ). ಅದಕ್ಕೆ ಕಾರಂತರು ಹೀಗೆ ಉತ್ತರಿಸಿದರಂತೆ – "ಅಹಿಂಸೆಯನ್ನು ಆಯುಧವಾಗಿ ಉಪಯೋಗಿಸುವುದು

ಕಷ್ಟ. ಆದರೆ ಸಂಘರ್ಷವನ್ನು ಎದುರಿಸುವಲ್ಲಿ ಇದಕ್ಕಿಂತ ದೊಡ್ಡ ಅಸ್ತ್ರವಿಲ್ಲ. ಉದಾಹರಣೆಗೆ, ಸಿಟ್ಟು ಬಂದು ನಾನು ನನ್ನ ಮಗನಿಗೆ ಹೊಡೆಯುವಾಗ ಆತ 'ಇನ್ನೂ ಹೊಡೆಯಿರಿ' ಎಂದಾಗ ನಾನು ದಿಗ್ಭ್ರಾಂತನಾಗಿ ಹೊಡೆಯುವುದನ್ನು ನಿಲ್ಲಿಸಿದೆ". ಇದಕ್ಕಿಂತ ಚೆನ್ನಾಗಿ ಅಹಿಂಸಾ ತತ್ತ್ವದ ಮೌಲ್ಯಮಾಪನ ಮಾಡಲು ಬಹುಶಃ ಸಾಧ್ಯವಿಲ್ಲ. ಗಹನವಾದ ವಿಷಯವನ್ನು ತಿಳಿಯಾದಭಾಷೆಯಲ್ಲಿ ಹೃದಯಂಗಮವಾಗಿ ಹೇಳುವ ಕಲೆ ಅವರಿಗೆ ಸಿದ್ಧಿಸಿತ್ತು.

೧೯೪೯-೫೦ರ ಕಾಲದಲ್ಲಿ ಕೋಟದಲ್ಲಿ ಪ್ರೌಢಶಾಲೆ ಸ್ಥಾಪನೆಯಾದ ವರ್ಷ. ಅವರ ತಮ್ಮ ಕೆ. ಎಲ್. ಕಾರಂತರ ಮುಂದಾಳ್ತನದಲ್ಲಿ ಶಾಲಾಕಟ್ಟಡಕ್ಕೆ ವಂತಿಗೆ ಸಂಗ್ರಹಿಸಲು ರಾಮಕೃಷ್ಣ ಕಾರಂತರನ್ನು ಕೇಳಿಕೊಂಡಾಗ ಅವರು 'ನಾನು ಬರಲೊಲ್ಲೆ' ಎನ್ನಲಿಲ್ಲ. ಅವರು ಊರಿನಲ್ಲಿ ಮತ್ತು ಪರವೂರಿನಲ್ಲಿ (ಬೆಂಗಳೂರು, ಮದರಾಸು, ಗುಂಟೂರು ಇತ್ಯಾದಿ) ಶಾಲೆಗೆ ದೇಣಿಗೆ ಸಂಗ್ರಹಿಸಲು ತಿರುಗಾಡಿದರು. ಅವರು ಸಹಕರಿಸಿದ್ದರಿಂದ ಒಳ್ಳೆಯ ಧನಸಂಗ್ರಹವಾಯಿತು. ಮತ್ತು ಶಾಲಾಕಟ್ಟಡ ಹೆಚ್ಚು ಸಮಸ್ಯೆಯಿಲ್ಲದೆ ಮೇಲೇಳಲು ಸಾಧ್ಯವಾಯಿತು. ಯಾವ ಸೇವಾ ಕಾರ್ಯವೂ ಸಣ್ಣದಲ್ಲ ಎಂಬುದು ಅವರ ಭಾವನೆ. ಅದರಲ್ಲೂ ಹುಟ್ಟೂರಿಗೆ ಸಲ್ಲಿಸುವ ಸೇವೆ ಮಹತ್ವದ ಸೇವೆ ಎಂದು ಅವರು ಹೇಳುತ್ತಿದ್ದರು. ಜನ್ಮ ಕೊಟ್ಟ ಊರಿನ ಮೇಲೆ ಅವರಿಗಿದ್ದ ಅಗಾಧವಾದ ಅಭಿಮಾನ - ಮಮತೆ ಅವರ ಪ್ರತಿಮಾತಿನಲ್ಲೂ ವ್ಯಕ್ತವಾಗುತ್ತಿತ್ತು.

ಬಿ.ವಿ. ಕಕ್ಕಿಲ್ಲಾಯರು ಕಮ್ಯೂನಿಸ್ಟ್ ಪಕ್ಷದವರಾದರೂ ಕೆ. ಆರ್. ಕಾರತರ ಆತ್ಮೀಯ ಶಿಷ್ಯ. ಬಲಗೈ ಬಂಟನಂತೆ ಇದ್ದವರು. ಕಕ್ಕಿಲ್ಲಾಯರು ವಿದ್ಯಾರ್ಥಿ ದೆಸೆಯಿಂದಲೂ ಕಾರಂತರ ಗರಡಿಯಲ್ಲಿ ಪಳಗಿದವರು. ಕಾರಂತರೇ ಅವರಿಗೆ ರಾಜಕೀಯ ಗುರು. ಬೇರೆ ಪಕ್ಷದಲ್ಲಿದ್ದರೂ ಕಾರಂತರನ್ನು ಒಂದು ಮಾತು ಕೇಳದೆ ಕಕ್ಕಿಲ್ಲಾಯರು ಏನೂ ಮಾಡುತ್ತಿರಲಿಲ್ಲ. ಕಕ್ಕಿಲ್ಲಾಯರು ಹೇಳುತ್ತಾರೆ-

"ನಾನು ೧೯೫೨ ರಲ್ಲಿ ಮದ್ರಾಸ್ ಅಸೆಂಬ್ಲಿಯಿಂದ ರಾಜ್ಯಸಭೆಗೆ ಆಯ್ಕೆ ಆದಾಗ, ರಾಮಕೃಷ್ಣ ಕಾರಂತರು ನನಗೆ ಶುಭಕೋರಿ ಆಶೀರ್ವದಿಸಿದರು. ೧೯೭೨ ರಲ್ಲಿ ಕರ್ನಾಟಕ ಶಾಸನಸಭೆಗೆ ನಾನು ಆಯ್ಕೆಯಾದಾಗಲೂ ಅವರು ನನ್ನನ್ನು ತನ್ನ ಮನೆಗೆ ಕರೆಸಿ ಹರಸಿದರು. ಅವರು ನನ್ನ ರಾಜಕೀಯವನ್ನು ವಿರೋಧಿಸುವವರಾಗಿದ್ದರೂ ಸಹ ವೈಯಕ್ತಿಕವಾಗಿ ನನ್ನಲ್ಲಿ ಅವರಿಗೇನೋ ವಿಶೇಷ ವಾತ್ಸಲ್ಯವಿತ್ತು. ಅದು ನನಗೆ ಹೆಮ್ಮೆಯ ಸಂಗತಿ" ಎನ್ನುತ್ತಾರೆ.

ಬಿ.ವಿ. ಕಕ್ಕಿಲ್ಲಾಯರ ಅಣ್ಣ ಶ್ರೀಧರ ಕಕ್ಕಿಲ್ಲಾಯ ಮತ್ತು ಕುಟುಂಬದ ಇತರ

ಸದಸ್ಯರು ಕಾಂಗ್ರೆಸಿಗರು. ಬಿ.ವಿ. ಕಕ್ಕಿಲ್ಲಾಯ ಮಾತ್ರ ಕಮ್ಯೂನಿಸ್ಟರು. ಒಂದೇ ಮನೆಯ ಸದಸ್ಯರು ಬೇರೆ ಬೇರೆ ರಾಜಕೀಯ ಪಕ್ಷದಲ್ಲಿದ್ದಾಗ ಸಣ್ಣ ಪುಟ್ಟ ಭಿನ್ನಾಭಿಪ್ರಾಯ – ತೊಂದರೆಗಳು ಮನೆಯಲ್ಲಿ ಉದ್ಭವಿಸುವುದು ಸಹಜ. ರಾಜಕೀಯವಾಗಿ ತೊಂದರೆಗಳುಂಟಾಗುವ ಸಂದರ್ಭಗಳಲ್ಲಿ ಅದನ್ನು ವೈಯಕ್ತಿಕವಾಗಿ ತೆಗೆದುಕೊಳ್ಳಬಾರದು ಎಂದು ಅಣ್ಣಂದಿರನ್ನು ಸಮಜಾಯಿಸಿ ತಿಳಿಹೇಳುತ್ತಿದ್ದವರು ಕಾರಂತರು ಎಂದು ಕಕ್ಕಿಲ್ಲಾಯರು ಸ್ಮರಿಸುತ್ತಾರೆ.

ತಾನು ಕಾಸರಗೋಡಿನವನು; ರಾಜಕೀಯವಾಗಿ ಕೇರಳಕ್ಕೆ ಸೇರಿದವನು. ಆದರೆ ರಾಜ್ಯ ಪುನರ್ವಿಂಗಡಣೆಯಾದಾಗ (ಭಾಷಾವಾರು ಪ್ರಾಂತ ರಚನೆಯಾದಾಗ) ಮಂಗಳೂರಿಗೆ ಬಂದು ಕರ್ನಾಟಕದಲ್ಲಿ ಉಳಿಯಲು ತೀರ್ಮಾನಿಸಿದೆ. ಕರ್ನಾಟಕ ವಿಧಾನಸಭಾ ಅಭ್ಯರ್ಥಿಯಾದೆ. ಇದಕ್ಕೆ ಕಾರಣರಾದವರು ಕಾರಂತರು ಕಾರಣ ಎನ್ನುತ್ತಾರೆ ಕಕ್ಕಿಲ್ಲಾಯರು.

"ಕೇರಳದ ವಿಧಾನಸಭಾ ಸದಸ್ಯರು ಒಂದು ಅವಧಿಗೆ ನನ್ನನ್ನು ಗೆಲ್ಲಿಸಿ ರಾಜ್ಯಸಭೆಗೆ ಕಳಿಸಿದರು. ಕೇರಳದ ರಾಜ್ಯಸಭಾ ಸದಸ್ಯನಾದರೂ ಕರ್ನಾಟಕ ಏಕೀಕರಣ ಪ್ರಶ್ನೆ ಬಂದಾಗ ನಾನು ಕರ್ನಾಟಕದ ಪರವಾಗಿ ಮಾತನಾಡುತ್ತಿದ್ದೆ. ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ವಾದಿಸುತ್ತಿದ್ದೆ. ಇದು ಕಾರಂತರಿಂದಾಗಿ; ಕಾಸರಗೋಡು ವಿಷಯದಲ್ಲಿ ಮಾತ್ರ ನಾನು ಕಾರಂತರು ಹೇಳಿದಂತೆ ಮಾಡುತ್ತಿದ್ದೆ" ಎಂದೂ ಮಾಜಿ ಶಾಸಕ ಬಿ.ವಿ. ಕಕ್ಕಿಲ್ಲಾಯರು ಕೆ. ಆರ್. ಕಾರಂತರ ಹಿರಿಮೆಯನ್ನೂ ಗರಿಮೆಯನ್ನೂ ಏಕಕಾಲಕ್ಕೆ ಸ್ಮರಿಸುತ್ತಾರೆ.

ಕೆ. ಆರ್. ಕಾರಂತರ ಬಗ್ಗೆ ಅವರ ದೀರ್ಘ ಕಾಲದ ಒಡನಾಡಿ, ಪ್ರಿಯ ಶಿಷ್ಯ, ಅಭಿಮಾನಿ, ಪತ್ರಕರ್ತ ಗೆಳೆಯ ಕೆ. ಎಸ್. ಉಪಾಧ್ಯಾಯ ಅವರು ಹೇಳಿದ ಈ ಮಾತು ಮನನೀಯ "ಇಂಥ ಒಬ್ಬ ಮಹನೀಯರು ನಮ್ಮ ನಡುವೆ ಒಂದು ಹೆಮ್ಮರವಾಗಿ ಬೆಳೆದಿದ್ದರು; ಧೀರ – ಗಂಭೀರವಾಗಿ ಸಲಗದಂತೆ ನಮ್ಮ ನಡುವೆ ನಡೆದಾಡಿದ್ದರು ಎಂಬುದು ಅಚ್ಚರಿ ಪಡಬೇಕಾದ ಸಂಗತಿ. ಉನ್ನತ ವ್ಯಕ್ತಿತ್ವದ, ಧವಳ ಚಾರಿತ್ರ್ಯದ ಕೆ. ಆರ್. ಕಾರಂತರು ಎಂದೆಂದಿಗೂ ನಾವು ಅನುಸರಿಸ ಬೇಕಾದಂತಹ ವಿರಳ ವ್ಯಕ್ತಿ."

ಕರ್ನಾಟಕ ಕಂಡ ಈ ವಿರಳ ವ್ಯಕ್ತಿ ಶುಭ್ರ ಚಾರಿತ್ರ್ಯದ – ಹಿಮಾಲಯ ಸದೃಶ ವ್ಯಕ್ತಿಗಳ ನಡುವೆ ಹರಿಯುವ ಅಂತಃಸ್ರೋತದ ಶಕ್ತಿಯೂ ಹೌದು.

■

# ಭಾವಚಿತ್ರಗಳು



ಕೆ. ಆರ್. ಕಾರಂತರ ಸಹೋದರಿ ಶ್ರೀದೇವಿ ಮತ್ತು ಅವರ ಪತಿ ಸದಾಶಿವರಾವ್




ಸಹೋದರ ನರಸಿಂಹ
ಕಾರಂತ




ಸಹೋದರ ಶಂಕರನಾರಾಯಣ ಕಾರಂತ

ಕೆ.ಆರ್.
ಕಾರಂತರು
ಬರೆದ ಪ್ರವಾಸ
ಕಥನ
“ಪ್ರವಾಸಿಯ
ಪತ್ರಗಳು’





ಕೆ.ಆರ್. ಕಾರಂತರ ಕುಟುಂಬವರ್ಗದವರ ಭಾವಚಿತ್ರ (ಕಾರಂತರ ೮೦ ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ತೆಗೆದದ್ದು).



ಸಹೋದರ
ಲಕ್ಷ್ಮೀನಾರಾಯಣ
ಕಾರಂತ



ಕೆ. ಆರ್. ಕಾರಂತರು ಪತ್ನಿ ರಮಾ ಅವರೊಂದಿಗೆ



ಕೆ. ಆರ್. ಕಾರಂತ




ಕೆ. ಆರ್. ಕಾರಂತ




ತಮ್ಮ ೮೦ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಕುಟುಂಬವರ್ಗದವರೊಂದಿಗೆ ತೆಗೆಸಿಕೊಂಡ ಭಾವಚಿತ್ರ



ತಂದೆ ಶೇಷ ಕಾರಂತರೊಂದಿಗೆ ಕೆ. ಆರ್. ಕಾರಂತರು (ಟೋಪಿ ಧರಿಸಿದವರು)
ನಿಂತವರಲ್ಲಿ ಎಡದಿಂದ ಐದನೆಯವರು ಡಾ. ಕೆ. ಶಿವರಾಮ ಕಾರಂತರು



ಕೆ. ಆರ್. ಕಾರಂತರ
ತಂದೆ ಶೇಷಕಾರಂತರು



ಕೆ. ಆರ್. ಕಾರಂತರು